ಕೊಡಗು ಸಂಗಾತಿ


ಮಾರ್ಚ್ 1 ರಿಂದ 15, 2000 | ಪಾಕ್ಷಿಕ ಪತ್ರಿಕೆ | (ಮಾಹಿ 16 ರಿಂದ 30, 2000)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೪ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಅರೆಭಾಷೆಯ ಏಕೈಕ ಪಾಕ್ಷಿಕ ಪತ್ರಿಕೆ

K. R. N. N. 240 | ಸಂಪುಟ : 4 | ಸಂಚಿಕೆ : 5 | ಪುಟಗಳು : 24 | ಬೆಲೆ ರೂ. : 6-00



ಲೇಖನ : ಒಳಪುಟಗಳಲ್ಲಿ

1834ರ ಹಿಂದಿನ ಕೊಡಗು ಮತ್ತು
ಕೊಡಗಿಗೊಂದು ಪ್ರತ್ಯೇಕ ಲೋಕಸಭಾ ಸ್ಥಾನ ಬೇಕು.

ಸಂಗಾತಿಯ ಓದುಗರಿಗೆ ಶಿವರಾತ್ರಿಯ ಶುಭಾಶಯಗಳು

ಜೀವಾವಧಿ ಸದಸ್ಯತನ ಕೊಟ್ಟೊಳೊ



ಮದೆನಾಡಿನ ನಿವಾಸಿ ಶ್ರೀ ಉಗ್ರಾಣಿ ಚಂಗಪ್ಪ ಮತ್ತ ಮೀನಾಕ್ಷಿ ದಂಪತಿಗ ಇವು ಪತ್ರಿಕೆಯ ಅಭಿವೃದ್ಧಿ ಬಯ್ಸಿ ಜೀವಾವಧಿ ಸದಸ್ಯತನ ಕೊಟ್ಟೊಳೊ. ಇವುಕೆ ಕುಲದೇವ್ರು ವೆಂಕಟರಮಣನ ಕೃಪಾಕಟಾಕ್ಷ ಸದಾ ಇರಲಿತ್ತೇಳಿ ಸಂಗಾತಿ ಶುಭ ಹಾರೈಸಿದೆ.



ಸಂಪಾದಕಿ

ಮಡಿಕೇರಿಯಲ್ಲಿ ಅರೆಭಾಷೆಗೌಡರ ಮದುವೆಯ ಸಿದ್ಧ ಉಡುಪುಗಳು ಲಭ್ಯ

ಮದುವೆಯ ಸಿದ್ಧ ಉಡುಪುಗಳಾದ ಕುಪ್ಪಸ ದಟ್ಟಿ, ರುಮಾಲು, ಕೋಟು, ಪಂಚೆಗಳು ಲಭ್ಯವಿದೆ ಮತ್ತು ಹೊಲಿದು ಕೊಡಲಾಗುವುದು ಹಾಗೂ ಎಲ್ಲಾ ತರದ ಬಟ್ಟೆಗಳು ಸಹ ಲಭ್ಯವಿದೆ. ಆಸಕ್ತರು ಒಮ್ಮೆ ಸಂಪರ್ಕಿಸಿ ನೋಡಿ.

ಚೆಯಂಡಿರ ಶಿವಪ್ಪ
ಜವಳಿ ವ್ಯಾಪಾರಿಗಳು, ಕಾಲೇಜ್ ರಸ್ತೆ, ಮಡಿಕೇರಿ


ನವೀಕರಣ ಗೊಳಿಸೊಕು.

ಪತ್ರಿಕೆಯ ವಾಯಿದೆ ಮೀರಿದಂಗೆ ಚಂದಾ ಹಣ ಕಳ್ಸಿ ನವೀಕರಣಗೊಳಿಸೊಕುತ ನಮ್ಮ ವಿನಂತಿ

ಸಂಪಾದಕಿ

ನೂತನವಾಗಿ ಆರಂಭಗೊಂಡಿದೆ

ಕಾವೇರಿ ಗ್ಯಾಸ್ ಸೆಂಟರ್



ಮುಖ್ಯ ರಸ್ತೆ, ಭಾಗಮಂಡಲ ✆ : 33241 (P.P.)

ಎಲ್. ಪಿ. ಜಿ. ಗ್ಯಾಸ್‌ಗೆ ಸಂಬಂಧಿಸಿದ ಎಲ್ಲಾ ಅವಶ್ಯಕತೆಗಳಿಗೆ ಸಂದರ್ಶಿಸಿ

ಶುಭ ಹಾರೈಕೆಗಳೊಂದಿಗೆ

ಕಾವೇರಿ ಗ್ಯಾಸ್ ಏಜೆನ್ಸೀಸ್
ಎಂ. ಜಿ. ರಸ್ತೆ
ಸಿದ್ದಾಪುರ
✆ : 59239

ಕಾವೇರಿ ಗಿಫ್ಟ್ ಸೆಂಟರ್
ಅಂಚೆ ಕಛೇರಿ ಸಮೀಪ
ಮಡಿಕೇರಿ
✆ : 23082

ಒಳನೋಟ

2000, ಫೆ. 16-29 ರ ತನಕ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	**ಕೊಡಗು ಸಂಗಾತಿ**, '35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : **0821/516771**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ	ಬೈತಡ್ಕ ಜಾನಕಿ ಬೆಳ್ಯಪ್ಪ,,ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : **08272/28047**
ಸಂಗಾತಿ ಚಿಹ್ನೆ ಮತ್ತು ಅರೆಭಾಷೆ ಕ್ಯಾಸೆಟ್ ಲಭ್ಯ	ಪಾಂಡ್ಯನ್ ಕ್ಯಾಸೆಟ್ ಅಂಗಡಿ, ಖಾಸಗಿ ಬಸ್ ನಿಲ್ದಾಣ, ಮಡಿಕೇರಿ ಫೋನ್ : 08272/29620
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370
ಬೆಂಗಳೂರು ಮಹಾನಗರ	ಅಮ್ಮಾಜೀರ ಪೊನ್ನಪ್ಪ, 20, 1ನೇ ಮೈನ್, 4ನೇ ಕ್ರಾಸ್, ಸಾಕಮ್ಮ ಗಾರ್ಡನ್, ಬಸವನಗುಡಿ, ಬೆಂಗಳೂರು - 04, ಫೋನ್ :080/6342822
ಬೆಂಗಳೂರು ಮಹಾನಗರ	ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **6** ರೂ., ಅರ್ಧ ವಾರ್ಷಿಕ -**75** ರೂ., ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಕೊಡಗಿಗೊಂದು ಪ್ರತ್ಯೇಕ ಲೋಕಸಭಾ ಸ್ಥಾನ ಬೇಕು

ಕೊಡಗು ಜಿಲ್ಲೆಯ ಭವ್ಯ ಸಂಸ್ಕೃತಿ ಇಡೀ ಭರತ ಖಂಡದಲ್ಲೊಂದು ವಿಶಿಷ್ಟ ಸ್ಥಾನವನ್ನುಗಳಿಸಿದೆ. ಇದು ಭೌಗೋಳಿಕವಾಗಿ 60 ಮೈಲು ಉದ್ದ 40 ಮೈಲು ಅಗಲವುಳ್ಳ ಪುಟ್ಟ ಜಿಲ್ಲೆ. ಆದರೆ ಕೊಡಗು 1834ಕ್ಕಿಂತ ಹಿಂದೆ ಈಗಿರುವ ವಿಸ್ತೀರ್ಣಕ್ಕಿಂತ ನಾಲ್ಕೈದುಪಟ್ಟು ದೊಡ್ಡದಾಗಿತ್ತು. ಪೂರ್ವ ಹಾಗೂ ಉತ್ತರದಲ್ಲಿ ಈಗಿನ ಹಾಸನ ಜಿಲ್ಲೆಯ ಮಂಜ್ರಾಬಾದು ತಾಲ್ಲೂಕು ಅರಕಲಗೂಡು ತಾಲ್ಲೂಕು, ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕು, ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕಿನವರೆಗೆ ವಿಸ್ತರಿಸಿತ್ತು. ಇದನ್ನು ಬ್ರಿಟಿಷರು 1834ರಲ್ಲಿ ಕೊಡಗನ್ನು ವಶಪಡಿಸಿದ ನಂತರ ಹೆಸರಿಗೆ ಮಾತ್ರ ಈಗಿರುವ ಮೂರು ತಾಲ್ಲೂಕುಗಳನ್ನೊಳಗೊಂಡ ಕೊಡಗು ಕಮೀಷನರ್ ಮೇಲ್ವಿಚಾರಣೆಯ ಪ್ರತ್ಯೇಕ ರಾಜ್ಯವೆಂದು ಹೆಸರಿಸಿ, ಪಶ್ಚಿಮ ಕಡೆಯ ಈಗಿನ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು, ಬೆಳ್ತಂಗಡಿ ತಾಲ್ಲೂಕುಗಳನ್ನು ಸೇರಿಸಿ ದಕ್ಷಣ ಕನ್ನಡ ಜಿಲ್ಲೆಯೆಂದು ಕರೆದು ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿದರು. ಪೂರ್ವ ಭಾಗದ ಪಿರಿಯಪಟ್ಟಣ ತಾಲ್ಲೂಕು, ಅರಕಲಗೂಡು ತಾಲ್ಲೂಕು ಮಂಜ್ರಾಬಾದ ತಾಲ್ಲೂಕುಗಳನ್ನು ಆಗಿನ ಮೈಸೂರಿನ ರಾಜರಿಗೆ ಕೊಟ್ಟು ಕೊಡಗನ್ನು ಛಿದ್ರ ಛಿದ್ರವಾಗಿ ಮಾಡಿದ್ದರಿಂದ ಜನರಲ್ಲಿ ಅಶಾಂತಿ ತಲೆದೋರಿ 1837ರಲ್ಲಿ ಈಗಿನ ಕೊಡಗಿನಲ್ಲಿ ಹಾಗೂ ಈಗಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ದಂಗೆ ಏಳುವ ಪರಿಸ್ಥಿತಿ ಉಂಟಾಗಲು ಜನರ ಅತೃಪ್ತಿಯೇ ಕಾರಣವೆನ್ನಬಹುದು. ಬ್ರಿಟಿಷರ ಒಡೆದು ಆಳುವ ನೀತಿಯನ್ನು ಅರಿಯದ ಈ ದಂಗೆಯನ್ನು ಅಡಗಿಸಲು ಕೊಡಗಿನ ಕೆಲವು ಮುಖಂಡರೇ ಬ್ರಿಟಿಷರಿಗೆ ಬೆಂಬಲ ಕೊಟ್ಟು ಈ ದಂಗೆಯನ್ನು ನಿಷ್ಕ್ರಿಯಗೊಳಿಸಿ ಹೆಸರಿಗೆ ಮಾತ್ರ ರಾಜ್ಯವಾಗಿ ಕರೆದು ಅವರೇ ನಿರ್ಮಿಸಿದ ಕೌನ್ಸಿಲ್‌ಗೆ ಯಾವುದೇ ರೀತಿಯ ಸ್ವಯಂ ಅಧಿಕಾರವಿಲ್ಲದೆ 1947ರವರೆಗೆ ನಡೆದು, 1947ರಲ್ಲಿ ಸ್ವಾತಂತ್ರ್ಯ ಬಂದ ನಂತರ 1952 ರಲ್ಲಿ ಭಾರತದ ಸಂವಿಧಾನಾತ್ಮಕವಾದ ಪ್ರಜಾ ಸರ್ಕಾರ ಬಂದರೂ 'ಎ' ಮತ್ತು 'ಬಿ' ಮಾದರಿಯ ಪ್ರಜಾಪ್ರಭುತ್ವದ ಅಧಿಕಾರ ಇಲ್ಲದಾಗಿತ್ತು. ಬ್ರಿಟಿಷರು ಹಾಕಿದ ಈ ಪೆಟ್ಟು ಇಲ್ಲಿನ ಜನರ ಸಾಂಸ್ಕೃತಿಕ ಹಾಗೂ ರಾಜಕೀಯ ಏಳಿಗೆಗೆ ಮಾರಕವಾಗಿ ಪರಿಣಮಿಸಿದೆ. ರಾಜಕೀಯದಲ್ಲಿ ಕೊಡಗಿನವರು ರಾಜ್ಯ ಮಟ್ಟಕ್ಕಿಂತ ಮೇಲೇರಿರುವುದು ಅಪರೂಪವಾಗಿದೆ. 1947-52ರವರೆಗೆ ದಿ||ಚೆಪ್ಪುಡೀರ ಪೂಣಚ್ಚನವರು, 1952ರಿಂದ 1953ರವರೆಗೆ ದಿ|| ನಿಡ್ಯಮಲೆ ಸೋಮಣ್ಣನವರು ಅನಂತರ ಪುನಃ ದಿ|| ಪೂಣಚ್ಚನವರು ರೈಲ್ವೆ ಮಂತ್ರಿಗಳಾಗಿ ತದ ನಂತರ ಗೌವರ್ನರ್ ಆಗಿ ನಿವೃತ್ತರಾದ ನಂತರ ಕೊಡಗಿನ ಯಾವ ರಾಜಕಾರಣಿಯೂ ರಾಷ್ಟ್ರಮಟ್ಟದ ರಾಜಕೀಯ ಮಾಡುವುದನ್ನು ಕಾಣುವುದಿಲ್ಲ. ಸತ್ಯ ಸಂಗತಿ ಏನೆಂದರೆ ಕೊಡಗಿನವರು ಸೇನಾ ಪಡೆಯಲ್ಲಿ ತಮ್ಮ ಖ್ಯಾತಿ ಗಳಿಸಿದಷ್ಟು ರಾಜಕೀಯವಾಗಿ ರಾಷ್ಟ್ರೀಯ ನಾಯಕರಾಗಿ ಹೊರ ಹೊಮ್ಮಲಿಲ್ಲವೆಂದು ಹೇಳಿದರೆ ತಪ್ಪಾಗಲಾರದು. ಇದಕ್ಕೆ ಕಾರಣ ಇಲ್ಲಿನ ಪ್ರಾಂತೀಯ ಸನ್ನಿವೇಶವೇ ಕಾರಣವೆನ್ನಬಹುದು.

ಮುಂದಿನ ಪೀಳಿಗೆಯವರಾದರೂ ರಾಜಕೀಯಲ್ಲಿ ರಾಷ್ಟ್ರಮಟ್ಟಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಏರಬೇಕಾದರೆ ಕೊಡಗಿಗೊಂದು ಲೋಕಸಭಾ ಸ್ಥಾನ ಬೇಕೇ ಬೇಕು ಮತ್ತು ಅನಿವಾರ್ಯ.

ಈ ವಿಷಯದಲ್ಲಿ ಮೂರು ತಾಲ್ಲೂಕುಗಳಿಗೊಂದು ಲೋಕ ಸಭಾ ಸದಸ್ಯ ಸ್ಥಾನ ಸಿಗುವುದು ಕಷ್ಟವಾದುದರಿಂದ ಕೊಡಗಿನವರೆಲ್ಲಾ ಸೇರಿ ಒಕ್ಕೊರಲಿನಿಂದ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಗಮನ ವನ್ನು ಹರಿಸುವಂತೆ ಮಾಡಬೇಕು ಹಾಗೂ ಈಗಿರುವ 3 ತಾಲ್ಲೂಕಿನಿಂದ 7, 8 ತಾಲ್ಲೂಕಿಗೆ ಏರಿಸಿ ಆ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಿಯಾಗಬೇಕು.

ಸಂಗಾತಿಯ ಅಭಿಪ್ರಾಯದಂತೆ 1834ರ ಹಿಂದೆ ಇದ್ದ ಕೊಡಗಿನ ವಿಸ್ತೀರ್ಣವನ್ನು ಗಮನದಲ್ಲಿಟ್ಟುಕೊಂಡು 1834ರವರೆಗೆ ಇದ್ದ ಕೊಡಗಿನ ಭಾಗಗಳಾದ ಪಿರಿಯಾಪಟ್ಟಣ ತಾಲ್ಲೂಕು, ಅರಕಲಗೂಡು ತಾಲ್ಲೂಕು, ಮಂಜ್ರಾಬಾದ ತಾಲ್ಲೂಕು, ಸುಳ್ಯ ತಾಲ್ಲೂಕು, ಪುತ್ತೂರು ತಾಲ್ಲೂಕುಗಳನ್ನು ಮತ್ತು ಕೊಡಗಿನ ಮೂರು ತಾಲ್ಲೂಕುಗಳನ್ನೊಳಗೊಂಡ ಕೊಡಗು ಲೋಕಸಭಾ ಕ್ಷೇತ್ರ ಕಲ್ಪಸುವುದರಲ್ಲಿ ಯಾರಿಗೂ ಏನೂ ತೊಂದರೆಯಾಗದು. 1981 ರ ಜನಗಣತಿಯ ಪ್ರಕಾರ ತಾಲ್ಲೂಕುವಾರು ಜನಸಂಖ್ಯೆ ಈ ರೀತಿ ಇದೆ.

	1981	ಈಗ ಅಂದಾಜು
1) ಕೊಡಗು ಜಿಲ್ಲೆ (ಮೂರು ತಾಲ್ಲೂಕುಗಳು)	4,61,898	5,50,000
4) ಪಿರಿಯಾಪಟ್ಟಣ ತಾಲ್ಲೂಕು	1,55,094	1,80,000
5) ಅರಕಲಗೂಡು ತಾಲ್ಲೂಕು	1,36,843	1,60,000
6) ಮಂಜ್ರಾಬಾದ್ ತಾಲ್ಲೂಕು	1,14,008	1,50,000
7) ಸುಳ್ಯಾ ತಾಲ್ಲೂಕು	1,03,383	1,50,000
8) ಪುತ್ತೂರು ತಾಲ್ಲೂಕುಗಳನ್ನು ಸೇರಿಸಿಲ್ಲ		
ಒಟ್ಟು	9,71,226	11,90,000

ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ

ಇದು ಒಂದು ಲೋಕಸಭಾ ಕ್ಷೇತ್ರಕ್ಕೆ ಸರಿಯಾದ ಜನಸಂಖ್ಯೆಯಾಗಿದೆ ಎನ್ನಬಹುದು. ಉದಾಹರಣೆಗೆ ಉತ್ತರ ಕನ್ನಡ ಲೋಕಸಭಾ ಕ್ಷೇತ್ರದ ಜನಸಂಖ್ಯೆ 1981ರಲ್ಲಿ 10,72,834. ಹಾಸನ ಲೋಕಸಭಾ ಕ್ಷೇತ್ರದಲ್ಲಿ 13,57,014 ಇತ್ತು. ಇದೇ ರೀತಿ ಕೋಲಾರ, ಬಳ್ಳಾರಿ, ಬೆಳಗಾಂ, ಬೀದರ್ ಲೋಕಸಭಾ ಕ್ಷೇತ್ರಗಳಲ್ಲೂ ಮೇಲೆ ಕಾಣಸಿದ ಜನಸಂಖ್ಯೆಗಳ ಹತ್ತಿರ ಹತ್ತಿರದ ಸಂಖ್ಯೆ ಆಗಿರುತ್ತದೆ.

ಆದುದರಿಂದ ಕೊಡಗಿನ ರಾಜಕೀಯ ಮುಖಂಡರು ತಮ್ಮ ರಾಜಕೀಯ ಜೀವನವನ್ನು ರಾಷ್ಟ್ರಮಟ್ಟದಲ್ಲಿ ಬೆಳೆಸುವುದಕ್ಕೆ ಕೊಡಗಿಗೊಂದು ಪ್ರತ್ಯೇಕ ಲೋಕಸಭಾ ಕ್ಷೇತ್ರದ ಅವಶ್ಯಕತೆ ಬಹಳಷ್ಟು ಇದೆಯಾದುದರಿಂದ ಇನ್ನೂ 25 ವರ್ಷಗಳ ಮುಂದೂಡುವಿಕೆ ಸರ್ವತಾ ಸರಿಯಾದುದಲ್ಲ. ಇದು ಸರ್ಕಾರದ ಉಡಾಫೆಯ ತಪ್ಪು ನಿರ್ಧಾರವಲ್ಲದೆ ಮತ್ತಿನ್ನೇನು? ಸರ್ಕಾರವು ವಿಶೇಷ ಕಾಯಿದೆ ಅನ್ವಯ ಪರಾಂಬರಿಸಿ ಪ್ರತ್ಯೇಕ ಲೋಕಸಭಾ ಕ್ಷೇತ್ರವನ್ನಾಗಿ ಪರಿಗಣಿಸಿದರೆ ನಿಜಕ್ಕೂ ಶ್ರೇಷ್ಠ ನಿರ್ಧಾರವಾಗುತ್ತದೆ.

ಏಳಿ ಎದ್ದೇಳಿ, ಕೊಡಗಿನ ಜನರೇ, ಲೋಕಸಭಾ ಸ್ಥಾನ ದಕ್ಕುವ ತನಕ ನಮ್ಮಲ್ಲಿರುವ ಬೇದಭಾವಗಳನ್ನು ಬಿಟ್ಟು ಒಂದಾಗಿ ಹೋರಾಡುವ. ಈಗ ಕಾಲ ಕೂಡಿ ಬಂದಿದೆ. ಜಯ ಖಂಡಿತ ನಮ್ಮದು. ಜೈ ಕಾವೇರಿ ಮಾತೆ.

ಬೆಂಗಳೂರಿನಲ್ಲಿ ಗೌಡ ಸಂಸ್ಕೃತಿನ ಬೆಳಗಿದ ನಮ್ಮ ಶಿಕ್ಷಕ ವೃಂದಕ್ಕೆ ಶ್ರೀ ಅಮ್ಮಾಜೀರ ಪೊನ್ನಪ್ಪ ನೀಲಮ್ಮನ ನಮನಗಳು

ಪೆಪ್ಸಿ ಡ್ಯಾನ್ಸ್ ಡ್ಯಾನ್ಸ್‌ನಲ್ಲಿ ಅಮ್ಮಾಜೀರ ಪೊನ್ನಪ್ಪನವರ ನೇತೃತ್ವದಲ್ಲಿ ಕೋಲಾಟ ತಂಡ ಮತ್ತು ಡೆನ್ನಾನೊ ಹಾಡ್, ಉದಯ T.V.ಲಿ ಬಂದ್ ನಮ್ಮ ಹಾಡ್‌ನ ಮೊಟ್ಟ ಮೊದಲಿಗೆ ದೂರ ದರ್ಶನಲಿ ಬರುವಂತಾದ್ ಒಂದ್ ಹಿರಿಮೆ ವಿಷಯ.

ಸೇಂಟ್ಸ್ ಪ್ರಾನ್ಸಿಸ್ ಸ್ಕೂಲ್‌ನ ಮಕ್ಕಳನ್ನು ಸೇರಿಸಿ ನಮ್ಮ ಹಾಡ್‌ಂದ ಸುಗ್ಗಿ ಸುವ್ವಾಲೆ ಕುಣಿತನ ಕಂಠೀರವ ಸ್ಟೇಡಿಯಂಲಿ ನಡೆಸಿ ಕೊಟ್ಟ್, DD9ರಲ್ಲಿ ಕಾರ್ಯಕ್ರಮ ಬರುವಂಗೆ ಮಡ್ಯೊಳೋ. ಇದಕ್ಕೆ ಕಾರ್ಯಕರ್ತರಾದ ಕುದುಕುಳಿ ರಾಧಾ ದಾಮೋದರ್ ಮತ್ತೆ ಕುದುಕುಳಿ ಧರಣಿ ಜನಾರ್ಧನವುಕೆ ವಂದನೆಗ.

ಜ್ಯೋತಿ ನಿವಾಸ್ ಮಹಿಳಾ ಕಾಲೇಜಲಿ ನಮ್ಮ ಸುಗ್ಗಿ ಸುವ್ವಾಲೆ ಹಾಡ್‌ನ ನಿರೂಪಿಸಿದವು ಮೇಲೆ ತಿಳಿಸಿದ ನಮ್ಮ ವನಿತೆಯರೇ ಆಗ್ಯೋಳೊ. ಡೆನ್ನಾನೋ ಡೊನ್ನಾನೋ, ನಮ್ಮದ್ ಇದ್ ನಮ್ಮದ್ ಹಾಡ್‌ನ ಸುಮಾರ್ 60 ಮಕ್ಕಳಿಂದ ನೃತ್ಯ ಮಾಡಿಸಿದ ಸೇಂಟ್ ಮತ್ತು ವೆಂಕಟ್ ಇಂಟರ್‌ನ್ಯಾಷನಲ್ ಸ್ಕೂಲ್‌ಲಿ ಮೊದಲ ದರ್ಜೆಗೇರಿಸಿದ ನಮ್ಮ ಮಹಿಳಾ ಶಿಕ್ಷಕಿ ಮೂಲೆ ಮಜಲು ಯಶೋಧ ಚಿನ್ನಪ್ಪನವು ಸುಮಾರು 16ಸಾವಿರ ಜನ ಸಮೂಹಲಿ ಬೆಂಗಳೂರಿನ ಸಾಹಿ ಸ್ಟೇಡಿಯಂನ ಜ್ಞಾನ ಭಾರತಿ ಬೆಂಗಳೂರ್‌ನ ನ್ಯಾಷನಲ್ ಸ್ಟೇಡಿಯಂಲಿ ಮಾಡಿಸಿದೋ.

ಶಾರದ ನರ್ಸರಿ ಮತ್ತೆ ಪ್ರೈಮರಿ ಶಾಲೆ ಜಯನಗರ ಬೆಂಗಳೂರ್‌ಲಿ ಶಿಕ್ಷಕಿ ಕುಸುಮರವು ಸುಗ್ಗಿ ಸುವ್ವಾಲೆ ಕುಣಿತ ಮತ್ತು ಡೆನ್ನಾನೋ ಹಾಡ್‌ನ. R.V. ಟೀಚರ್ ಆಡಿಟೋರಿಯಂಲಿ ಮಾಡಿಸಿ ಅಲ್ಲಿನೂ ನಮ್ಮ ಕೀರ್ತಿನ ಬೆಳಗಿಸೊಳೋ.

ಎಲ್ಲಾ ಕಾರ್ಯಕ್ರಮಗ ರುಮಾಲ್, ಬಿಳಿ ಕುಪ್ಪಸ ದಟ್ಟಿ, ಗೇಂಟಿ ಸೀರೆಲಿ ನಮ್ಮ ಸಂಸ್ಕೃತಿನ ಬೆಳಗಿಸಿದೋ. ಕೀಳರಿಮೆಯನ್ನು ಮೆಟ್ಟಿನಿಂತ ಈ ನಮ್ಮ ಬೆಂಗಳೂರಿನ ಮಹಿಳಾ ಶಿಕ್ಷಕಿಗಳ ಸಾಹಸ, ಧೈರ್ಯನ ಮೆಚ್ಚಕು. ಕೊಡಗು ಸಂಗಾತಿ ಪತ್ರಿಕೆಯ ಸಂಗಾತಿ ದಂಪತಿಗಳ ಮುಂದಾಲೋಚನೆಯ ದೂರದೃಷ್ಟಿ ಮತ್ತೆ ಶ್ರೀ ಅಮ್ಮಾಜೀರ ಪೊನ್ನಪ್ಪನವರ ತಕ್ಕ ಶ್ರಮಕ್ಕೆ ಸಿಕ್ಕಿದ ಪ್ರತಿಫಲ ತೆಳಕ್ಕ್. ಇವುಕೆಲ್ಲಾವುಕು ನಮ್ಮ ಕುಲ ದೇವ್ರು ವೆಂಕಟರಮಣ ಮತ್ತೆ ಶ್ರೀ ಶಾರಾದಾಂಬೆನ ಅನುಗ್ರಹ ಇರತ್ತೇಳಿ ಹಾರೈಸಿನೆ

ಅಮ್ಮಾಜೀರ ಪೊನ್ನಪ್ಪ ನೀಲಮ್ಮ ಬೆಂಗಳೂರು.

ನಗೆಹನಿ :

ಸುಬ್ಬಯ್ಯಜ್ಜ ಒಂದು ಸರ್ತಿ ಸ್ನೇಹಿತನ ಮನೆಗೆ ಪಾರ್ಟಿಗೆ ಹೋಗಿತ್. ಆದಿನ ಕರೆಂಟ್ ಇಲ್ಲದರಿಂದ ಸುಬ್ಬಯ್ಯಜ್ಜ ತನ್ನ ಮನೆಂದ ಹೋಕನ ಒಂದು ಲಾಂಟೀನ ತಕಂಡ್ ಹೋತ್. ಪಾರ್ಟಿ ಮುಗ್‌ಸಿ ತುಂಬಾ ಹೊತ್ತಾಗಿ ಮನೆಗೆ ಬಾತ್. ಮಾರನೆ ದಿನ ಸ್ನೇಹಿತ ಮನೆಂದ ಪೋನ್ ಬಾತ್. ಮಿತ್ರ ನೆನ್ನೆ ರಾತ್ರಿ ನೀನ್ ಮರಳಿ ಹೋಕನ ನೀನ್ ತಂದಿದ್ದ ಲಾಂಟೀನು ಬುಟ್ಟು ನಮ್ಮ ಮನೆಲಿರುವ ಗಿಳಿಯ ಪಂಜರನ ತಕಂಡೋಗಳ ದಯಮಾಡಿ ನಮ್ಮಗಿಳಿ ಪಂಜರನ ಮರಳಿ ಕಳ್ಸಿಕೊಡಪ್ಪ.

ಆಗ ಸುಬ್ಬಯಜ್ಜ, ಎಲಾ ಇವನ ನಿನ್ನೆ ರಾತ್ರಿ ಕಳ್ಳ್‌ನ ಮತ್‌ಲಿ ಲಾಂಟೀನ್ ತೇಳಿ ಗಿಳಿ ಪಂಜರನನೇ ತಂದೊಳೆಲಾ ತೇಳಿ ಪಂಜರನ ಮರಳಿ ಕಳ್ಸಿಕೊಟ್ಟತ್.


ನಗೆಹನಿ

ಗುಂಡ, ಸಖತ್ತಾಗಿ ಗುಂಡುಹಾಕಿದ್ದ ದಾರಿಯಲ್ಲಿ ಒಂದು ಲೈಟ್‌ಕಂಬ ಅದರ ಮುಂದೆ ನಿಂತು ಕಂಬವನ್ನು ಬಡಿಯುತ್ತಾ ಲೇ ಬಾಗಿಲುತೆಗೆ' ಎಂದು ಕೂಗಲಾರಂಬಿಸಿದ

ಜನ ಅವನನ್ನು ನೋಡಿ ಅದು ಮನೆ ಅಲ್ಲಯ್ಯ ಲೈಟ್ ಕಂಬ ಎಂದರು. ಅದಕ್ಕೆ ಗುಂಡ ಅವರ ಮೇಲೆ ತಿರುಗಿ ಬೀಳುತ್ತಾ ನೋಡಿ ಸ್ವಾಮಿ... ಕುಡಿದು ಬಿಟ್ಟಾಗ ನೀವು ತಪ್ಪಗೆ ಮನೇಲಿ ಮಲಗಬೇಕು ಹೀಗೆ ಜನರಿಗೆ ತಪ್ಪು ತಪ್ಪು ಉತ್ತರ ಕೊಡ್ಬಾರ್ದು. ಇದು ನನ್ನ ಮನೆನೆ ! ನೋಡಿ ಮಹಡಿಲಿ ನನ್ನ ಹೆಂಡ್ತಿ ದೀಪ ಉರಿಸ್ತಾ, ಟಿ.ವಿ. ನೋಡ್ತಿದ್ದಾಳೆ ಎಂದು ಲೈಟು ಕಂಬದಲ್ಲಿ ಉರಿಯುತ್ತಿದ್ದ ದೀಪವನ್ನು ತೋರಿಸಿದ.

ಊರಿಗೆ ಅರಸನಾದರೂ ತಾಯಿಗೆ ಮಗ

ಹೆಗ್ಗಡೆ ದೇವನ ಕೋಟೆ ಲಯನ್ಸ್ ಸಂಸ್ಥೆಯಿಂದ ಸೇವಾ ಸನ್ಮಾನ
ಶ್ರೀ ಉಗ್ರಾಣಿ ಸುಬ್ಬಯ್ಯ ಚಂಗಪ್ಪ



ಕೊಡಗು ನಾಡು ವೀರ ಧೀರರ ನಾಡು. ಮಡಿಕೇರಿ ಸಮೀಪವಿರುವುದೇ ಮದೆನಾಡು. ಕೊಡಗಿನ ಎಲ್ಲಾ 24 ನಾಡ್‌ಗಳಲ್ಲಿ ಮದೆನಾಡ್ ಬಹಳ ಪ್ರಖ್ಯಾತಿ. ಕಾರಣ ಇಲ್ಲಿಯ ಯುವಕರು ಇತರ ಎಲ್ಲಾ ಗ್ರಾಮಗಳಿಗಿಂತಲೂ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಅಂದರೆ 60 ಕ್ಕೂ ಮಿಕ್ಕಿ ದೇಶ ರಕ್ಷಣೆಯಲ್ಲಿ ತೊಡಗಿರುವುದು ವಿಶೇಷವಾದ ಹೆಮ್ಮೆ ಈ ನಾಡಿಗೆ. ಮದೆ ನಾಡೆಂದು ಕರೆಸಿಕೊಂಡರೂ, ಇದೊಂದು ಗ್ರಾಮ ವ್ಯಾಪ್ತಿಗೆ ಬರುತ್ತದೆ ಅಷ್ಟೆ.

ಮದೆ ಗ್ರಾಮದ ಉಗ್ರಾಣಿ ಚಂಗಪ್ಪನವರು ಇಂಡೋ-ಚೈನಾ ವಾರ್ ಸಮಯದಲ್ಲಿ ದೇಶ ರಕ್ಷಣೆಗೆ 1962ರಲ್ಲಿ ದುಮುಕಿದ ನಂತರ 1965ರ ಇಂಡೋ-ಪಾಕ್ ವಾರ್‌ನಲ್ಲಿಯೂ ಸಕ್ರಿಯವಾಗಿ ಭಾವಹಿಸಿದ್ದರು. ಹಾಗೂ 1971ರ ಇನ್ನೊಂದು ಪಾಕ್ ಸಮರದಲ್ಲೂ ಭಾಗವಹಿಸಿದ ಕೀರ್ತಿಶಾಲಿ ಹಾಗೂ ದೇಶದಲ್ಲಿ ನಡೆದ ಮೂರು ಮಹಾ ಯುದ್ಧಗಳಲ್ಲೂ ಪಾಲ್ಗೊಂಡು ವೀರಾಧಿವೀರತನ ಪ್ರದರ್ಶಿಸಿದ ಧೀರ.

1965ರ ಪಾಕ್‌ನ ಆಗಿನ ಹೋರಾಟ ಅಷ್ಟು ಸುಭ ಸಾಧ್ಯವಾಗಿರಲಿಲ್ಲ. ಕಾರಣ ಈಗಿನಂತೆ ಆಗ ಸಾಕಷ್ಟು ಯುದ್ಧೋಪಕರಣಗಳು ನವೀನ ರೀತಿಯಲ್ಲಿ ಇರಲಿಲ್ಲವಾದರೂ ಸಾಧನೆ ಕಡಿಮೆಯಾಗಿರಲಿಲ್ಲ, 16-9-1965ರಲ್ಲಿ ಉತ್ತರದ ಫಿರೋಜ್‌ಪುರ ಸೆಕ್ಟರ್‌ನಲ್ಲಿ ನಡೆದ ಭೀಕರ ಕಾಳಗದಲ್ಲಿ ಶ್ರೀಯುತರು ಗಾಯಾಳುಗಳ ಪಟ್ಟಿಯಲ್ಲಿ ಸೇರಿ ಫಿರೋಜ್‌ಪುರ ಆಸ್ಪತ್ರೆಯಲ್ಲಿ ದಾಖಲಾದರು, ನಂತರ ಸಂದರ್ಭಾನುಸಾರವಾಗಿ ದಂಡು ಪ್ರದೇಶದ ಜಲಂದರ್, ಡೆಲ್ಲಿ ಹಾಗೂ ಬೆಂಗಳೂರಿನ ಮಿಲಿಟರಿ ಆಸ್ಪತ್ರೆಗಳಿಗೆ ರವಾನಿಸಿ ಚಿಕಿತ್ಸೆಪಡೆದು ಪುನಹ ಕ್ಯಾಟಗರಿ ಗ್ರೇಡ್ ಸಿ.,ಬಿ.,ಎ. ಆಗಿ ಸೇವೆಗೆ ಪುನಹ ಆರ್ಹರಾದರು. ತದನಂತರ 18 ವರ್ಷ ಸೇವಾ ಹಿರಿತನದಲ್ಲಿ ದಕ್ಷ ಶಿಸ್ತಿನ ಸಿಪಾಯಿಯಾಗಿ 1979ರಲ್ಲಿ ನಿವೃತ್ತಿಯಾಗಿ ತನ್ನ ಗ್ರಾಮದ ಮದೆನಾಡಿನಲ್ಲಿ ನಿವೃತ್ತ ಜೀವನ ನಡೆಸಿ 1985 ಕ್ಕೆ ಪುನಹ ಬ್ಯಾಂಕ್ ಉದ್ಯೋಗಿಯಾಗಿ ಸೇರ್ಪಡೆಗೊಂಡು ಹಾಲಿ ಹೆಗ್ಗಡದೇವನ ಕೋಟೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಯುತರ ವೂಂಡೆಡ್ ಲಿಸ್ಟನ್ನು ಗಣನೆಗೆ ತಂದು ಪರಿಶೀಲಿಸಿ ಹೆಗ್ಗಡೆ ದೇವನ ಕೋಟೆಯ ಲಯನ್ಸ್ ಸಂಸ್ಥೆಯವರು ಲಯನ್ಸ್ ಜಿಲ್ಲಾ ರಾಜ್ಯ ಪಾಲರಾದ ಲಯನ್ P.M. ಮಲ್ಯರವರು ಹೆಗ್ಗಡೆ ದೇವನ ಕೋಟೆಯ ಲಯನ್ ಅಧ್ಯಕ್ಷರಾದ ಲಯನ್ M. ಸಂಜೀವ ಶೆಟ್ಟಿಯವರು ದಿನಾಂಕ 21-1-2000 ರಂದು ಶಾಲು ಹೊದಿಸಿ ಸನ್ಮಾಸಿರುವುದು ಅರೆಭಾಷೆ ಗೌಡ ಜನಾಂಗಕ್ಕೆ ಸಂದ ಗೌರವವಾಗಿದೆ. ಅಂದಿನ ಸಮಾರಂಭದಲ್ಲಿ ತಹಶೀಲ್‌ದಾರ್ ನೂ.ನ. ರಂಗಪ್ಪನವರು ಶ್ರೀ M.ಶಿವಣ್ಣ MLA ಇವರುಗಳು ಉಪಸ್ಥಿತರಿದ್ದರು.

ಶ್ರೀ ಚಂಗಪ್ಪನವರು ಮದೆನಾಡಿನ ಉಗ್ರಾಣಿ ಸುಬ್ಬಯ್ಯ ಮತ್ತು ಬೆಳ್ಳೆವ್ವ ದಂಪತಿಗಳ ದ್ವಿತೀಯ ಪುತ್ರರಾಗಿ ಜನಿಸಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮದೆನಾಡಿನಲ್ಲಿ ಮಾಡಿ ನಂತರ ಭದ್ರಾವತಿ ಕಾರ್ಖಾನೆಯಲ್ಲಿ 3ವರ್ಷ ಸೇವೆ ಸಲ್ಲಿಸಿ 1961ರಲ್ಲಿ ಭಾರತೀಯ ಭೂದಳದ E.M.E. ಪಡೆಗೆ ಭರ್ತಿಯಾದರು.

ಇವರು 1969ರಲ್ಲಿ ಮೇಕೇರಿ ಗ್ರಾಮದ ಓಡಿಯನ ಸುಬ್ಬಯ್ಯನವರ ಪುತ್ರಿ ಮೀನಾಕ್ಷಿಯನ್ನು ಸಹಧರ್ಮಿಣಿಯಾಗಿ ಪಡೆದ ಇವರಿಗೆ ಒಂದು ಹೆಣ್ಣು, ಎರಡು ಗಂಡು ಮಕ್ಕಳನ್ನು ಪಡೆದಿರುತ್ತಾರೆ. ಮಗಳು ಬೊಟ್ಟುಮಾನಿ ದಿಲೀಪ್ ಕುಮಾರ್‌ನನ್ನು ಲಗ್ನವಾಗಿದ್ದರೆ, ಮೊದಲ ಪುತ್ರ ಮನೋಜ್‌ಕುಮಾರ್‌ರವರು ಉಳ್ಳಿಯಡ್ಕ ಅಚ್ಚಯ್ಯ ದಂಪತಿಗಳ ಮಗಳು ಕವಿತಳನ್ನು ಲಗ್ನವಾಗಿದ್ದಾರೆ. ದ್ವಿತೀಯ ಪುತ್ರ ಶ್ಯಾಮ್ ಸುಂದರ್ ಬೆಂಗಳೂರಿನಲ್ಲಿ ಉದ್ಯೋಗದಲ್ಲಿದ್ದಾರೆ.

ಬಡ ಕುಟುಂಬದಲ್ಲಿ ಹುಟ್ಟಿ ದೇಶ ಸೇವೆಯಲ್ಲಿ ತೊಡಗಿ ತನ್ನ ನಾಡಿಗೂ, ಊರಿಗೂ, ಮನೆಸ್ಥಾನಕ್ಕೂ ಮತ್ತು ಅರೆಭಾಷೆ ಗೌಡ ಜನಾಂಗಕ್ಕೂ ಕೀರ್ತಿ ತಂದ ಶ್ರೀ ಉಗ್ರಾಣಿ ಚಂಗಪ್ಪನವರಿಗೂ ಮತ್ತು ಅವರ ಸಂಸಾರಕ್ಕೂ ಶ್ರೀ ಕುಲದೈವ ವೆಂಕಟರಮಣ ಸ್ವಾಮಿಯ ಕೃಪಾಕಟಾಕ್ಷೆ ಸದಾ ಇರಲೆಂಬುದಾಗಿ ಸಂಗಾತಿ ಶುಭವನ್ನು ಹಾರೈಸುತ್ತದೆ.

ಪಟ್ಟಡ ಪ್ರಭಾಕರ

ನಗೆಹನಿ

ಡಾಕ್ಟರ್ : ನಿಮ್ಮ ಕಿವಿ ಹೀಗೆ ಸುಡಲು ಕಾರಣ?

ರೋಗಿ: ನಾನು ಬಟ್ಟೆ ಇಸ್ತ್ರಿ ಮಾಡುತ್ತಿರುವಾಗ ಫೋನ್ ರಿಂಗಾದ ಕಾರಣ, ನಾನು ಮರೆತು " ಹಲೋ" ಎಂದು ಕಿವಿಗೆ ಇಸ್ತ್ರಿ ಪೆಟ್ಟಿಗೆಯನ್ನು ಸೇರಿಸಿ ಹಿಡಿದೆ!!!

ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ

1996ರಲ್ಲಿ ಮುಖ್ಯಮಂತ್ರಿಯವರಿಂದ ಚಿನ್ನದ ಪದಕ ಸ್ವೀಕರಿಸಿದ ಬೈತಡ್ಕ ಬೆಳ್ಳಿಯಪ್ಪ ನಂಜಪ್ಪ



ನಂಜಪ್ಪನವರು ಪಾಲೂರು ಗ್ರಾಮದ ಬೈತಡ್ಕ ಬೆಳ್ಳಿಯಪ್ಪ ಮತ್ತು ಜಾನಕ್ಕಿ ದಂಪತಿಗಳ ಪ್ರಥಮ ಪುತ್ರರಾಗಿ ದಿನಾಂಕ 15-6-1973ರಲ್ಲಿ ಜನಿಸಿದರು. ಇವರು ಪ್ರಾಥಮಿಕ ವಿದ್ಯೆಯನ್ನು ಬೆಂಗಳೂರು, ಗೌಹಾಟಿ, ಕೋಲಾರ ಮತ್ತು ಮಡಿಕೇರಿಯಲ್ಲಿ ಮಾಡಿದರು. ಡಿಗ್ರಿಯನ್ನು ಮಡಿಕೇರಿಯ Field Marshall K.M. Kariappa Collegeನಲ್ಲಿ ಬಿ. ಎ. ಪದವಿಯನ್ನು 1994ರಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದರು. ನಂತರ 1995ರ ನವದೆಹಲಿಯ India Foundation for Public Relation Education & Research ಇವರ ಆಶ್ರಯದಲ್ಲಿ ನಡೆದ Post Graduate Diploma in Public relation ಪರೀಕ್ಷೆಯನ್ನು ಬೆಂಗಳೂರಿನ Centre developmental Education Institute ನಲ್ಲಿ ಮುಗಿಸಿದರು. **ಈ ಪರೀಕ್ಷೆಯಲ್ಲಿ ಇವರಿಗೆ ಕರ್ನಾಟಕ ರಾಜ್ಯದ ಬೆಂಗಳೂರು chapterನಲ್ಲಿ ಚಿನ್ನದ ಪದಕ ಸಿಕ್ಕಿರುತ್ತದೆ. 1996ರಲ್ಲಿ ಆಗಿನ ಮುಖ್ಯ ಮಂತ್ರಿಗಳಾದ ಜೆ. ಎಚ್. ಪಟೇಲ್‌ರವರು ಈ ಪದಕವನ್ನು ಇವರಿಗೆ ವಿತರಿಸಿದರು.**

ತದ ನಂತರ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾ 1997ರಲ್ಲಿ ಮಂಗಳೂರು ವಿಶ್ವ ವಿದ್ಯಾನಿಲಯಕ್ಕೆ ಸಂಯೋಜನೆಯಾಗಿರುವ ಸ್ಕೂಲ್ ಆಫ್ ಸೋಷಿಯಲ್ ವರ್ಕ್ಸ್, ರೋಶನಿ ನಿಲಯದಲ್ಲಿ (M.S.W) ಮಾಸ್ಟರ್ ಆಫ್ ಸೋಷಿಯಲ್ ವರ್ಕ್ಸ್) ನಲ್ಲಿ ಪದವಿಯನ್ನು Personel Management Industrial Relation(HRD)ನಲ್ಲಿ ಹೈ ಫಸ್ಟ್ Classನಲ್ಲಿ ಮುಗಿಸಿದರು.

ತದ ನಂತರ ಉದ್ಯೋಗ ನಿಮಿತ್ತಾ ಬೆಂಗಳೂರಿನ ಹಿಮಾಲಯ ಡ್ರಗ್ಸ್ ಕಂಪೆನಿಯಲ್ಲಿ ಮಾನವ ಸಂಪನ್ಮೂಲ ವಿಭಾಗದಲ್ಲಿ ಕಾರ್ಯ ನಿರ್ವಾಹಕರಾಗಿ (M.D) ಕೆಲಸ ಮಾಡಿ ಈಗ Executive HR ಕೇಂದ್ರ ಸರ್ಕಾರದ ಸ್ವರ್ಣ ಜಯಂತಿ ಶಹರಿ ರೋಜ್‌ಗಾರ್ ಯೋಜನೆಯಡಿಯಲ್ಲಿ ಯೋಜನಾಧಿಕಾರಿಯಾಗಿ ಮಡಿಕೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಶ್ರೀಯುತರು 9-12-1999ರಲ್ಲಿ ಬೆಂಗಳೂರಿನ ದಿ. ಜೋಸೆಫ್‌ರವರ ಸುಪುತ್ರಿ ಪ್ರಿಸಿಲ್ಲಾ (ಪ್ರೀತು)ಳನ್ನು ಕೈ ಹಿಡಿದು ಸುಖ ಸಂಸಾರಿಗಳಾಗಿದ್ದಾರೆ. ಇವರಿಗೆ ಒಬ್ಬ ಸಹೋದರ ದಿನೇಶ್. ಈತ ಈಗಾಗಲೇ ಕೊಡಗು ಫ್ರಂಟ್ ಪತ್ರಿಕೆಯಲ್ಲಿ ಉದ್ಯೋಗಿಯಾಗಿದ್ದಾರೆ. ಇವರ ತಾಯಿ ಬೈತಡ್ಕ ಜಾನಕ್ಕಿ, ಒಳ್ಳೆಯ ಸಮಾಜ ಸೇವಕಿಯೂ ಅಲ್ಲದೆ ಸಂಘಟನಾಶೀಲರು ಹೌದು. ಮಹಿಳಾ ಒಕ್ಕೂಟದ ನಿರ್ದೇಶಕಿಯಾಗಿ ಕಾರ್ಯ ನಿರ್ವಹಿಸುತ್ತಿರುವರು. ತಂದೆ ಬೈತಡ್ಕ ಬೆಳ್ಳಿಯಪ್ಪನವರು ಸಮಾಜದ ಹಿರಿಯ ಚಿಂತನಾಶೀಲರು ಅಲ್ಲದೆ ಜೀವಾವಿಮಾ ಸಂಸ್ಥೆ ಮಡಿಕೇರಿ ಶಾಖೆಯಲ್ಲಿ ಉದ್ಯೋಗಿಯಾಗಿದ್ದಾರೆ.

ಇವರ ಈ ಸಾಧನೆಯು 20-7-1996ರ ಶಕ್ತಿ ಪತ್ರಿಕೆಯಲ್ಲಿ ಪ್ರಕಟವಾಗಿದ್ದನ್ನು ಸ್ಮರಿಸಬಹುದಾಗಿದೆ.

ತಡಿಯಪ್ಪನ ಕುಮಾರ ಜಯ, ಮೈಸೂರು

ಕಾವೇರಿ ನಾಡು ವಿದ್ಯಾ ಸಂಸ್ಥೆಯ 3ನೇ ವಾರ್ಷಿಕೋತ್ಸವ

ಕೊಡಗು ಸಂಗಾತಿ ಪತಿಯಿಂದ ವಿದ್ಯಾರ್ಥಿ ವೇತನ ನಿಧಿ ಸ್ಥಾಪನೆ

ಬೆಂಗಳೂರಿನ ಕಾಡು ಕರ್ರೇನ ಹಳ್ಳಿಯಲ್ಲಿ ಸ್ಥಾಪಿತವಾಗಿರುವ ಕಾವೇರಿನಾಡು ವಿದ್ಯಾಸಂಸ್ಥೆಯ 3ನೇ ವಾರ್ಷಿಕೋತ್ಸವವು ದಿನಾಂಕ 12-2-2000 ದಂದು ಬಹಳ ವಿಜೃಂಬಣೆಯಿಂದ ನಡೆಯಿತು. ಮೈಸೂರಿನಲ್ಲಿರುವ ಅರೆಭಾಷೆ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷರಾದ ಶ್ರೀ ತಡಿಯಪ್ಪನ ಕುಮಾರ ಜಯನವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾವೇರಿ ವಿದ್ಯಾ ಸಂಸ್ಥೆಯ ಸ್ಥಾಪಕರಾದ ಶ್ರೀ ಅಮ್ಮಾಜೀರ ಪೊನ್ನಪ್ಪನವರು ಶ್ರೀಯುತರನ್ನು ಶಾಲು ಹೊದಿಸಿ ಸನ್ಮಾಸಿ ಬರಮಾಡಿಕೊಂಡರು.

ಕೊಡಗು ಸಂಗಾತಿ, ಪತ್ರಿಕೆಯ ಹೆಸರಿನಲ್ಲಿ ಪಟ್ಟಡ ಪ್ರಭಾಕರ ಮತ್ತು ಶೀಲಾಮಣಿ ದಂಪತಿಗಳು ನೀಡಿದ 5000/- ರೂಪಾಯಿಗಳ ಉದಾರ ಕೊಡುಗೆ ವಿದ್ಯಾರ್ಥಿ ವೇತನ ನಿಧಿ ಉದ್ಘಾಟನೆ ಸಮಾರಂಭದಲ್ಲಿ ಪತ್ರಿಕೆ ಸಂಪಾದಕಿ ಪಟ್ಟಡ ಶೀಲಾಮಣಿ ಮತ್ತು ಪಟ್ಟಡ ಪ್ರಭಾಕರ ಅವರ ಅನುಪಸ್ಥಿತಿಯಲ್ಲಿ ಸಂಗಾತಿ ಪ್ರತಿನಿಧಿಯಾಗಿ ಶ್ರೀ ತಡಿಯಪ್ಪನ ಕುಮಾರ ಜಯನವರು ಜ್ಯೋತಿ ಬೆಳಗಿ ವಿದ್ಯಾರ್ಥಿ ನಿಧಿಯನ್ನು ಉದ್ಘಾಟಿಸಿದರು. ಈ ಮೊತ್ತದಿಂದ ಬರುವ ಬಡ್ಡಿಯಿಂದ 10ನೇ ತರಗತಿಯಲ್ಲಿ ಮೊದಲ 3 ಪ್ರತಿಭೆಗಳಿಗೆ ಬಹುಮಾನ ನೀಡಲಾಗುವುದು. ಸದ್ಯಕ್ಕೆ ಈ ಶಾಲೆಯಲ್ಲಿ 6ನೇ ತರಗತಿಯ 3ಜನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಗುವುದು.

ಸಭೆಯನ್ನು ಉದ್ದೇಶಿಸಿ ಮುಖ್ಯ ಅತಿಥಿಗಳು ಮಾತನಾಡಿ ಸಂಸ್ಥೆಯ ಹಿರಿಮೆಯನ್ನು ಕೊಂಡಾಡಿದರಲ್ಲದೆ ಕೊಡಗು ಸಂಗಾತಿ ನೀಡಿದ ನಿಧಿಯ ಧ್ಯೇಯೋದ್ದೇಶವನ್ನು ಸಭೆಗೆ ವಿವರವಾಗಿ ತಿಳಿಸಿ, ಸಂಗಾತಿ ದಂಪತಿಗಳ ಆಶೋತ್ತರಗಳೆಲ್ಲಾ ಆದಷ್ಟು ಬೇಗ ನೆರವೇರಲೆಂಬುದಾಗಿಯೂ ಮತ್ತು ಅವರ ಆಶೀರ್ವಾದವನ್ನು ಕಾವೇರಿ ಸಂಸ್ಥೆಗೆ ತಿಳಿಸಿ ಶುಭ ಹಾರೈಸಿದರು.

ಸಮಾರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪೋಷಕರು, ಮಕ್ಕಳು ಮತ್ತು ಅತಿಥಿಗಳು ಭಾಗವಹಿಸಿದ್ದರು.

ವರದಿ : ಅಮ್ಮಾಜೀರ ಧೃತಿ ಪೊನ್ನಪ್ಪ

ಆಲಿಕಲ್ಲುಗಳಿಂದ ಗುಡಿಕಟ್ಟಲು ಸಾಧ್ಯವೆ?

HAPPY VALENTINE'S DAY

VALENTINE'S DAY - " ಪ್ರೇಮಿಗಳ ದಿನ" ಆಹ... ಈ ಹೆಸರೇ ನಮ್ಮನ್ನು ಭಾವನಾಲೋಕಕ್ಕೆ ಕೊಂಡೊಯ್ಯುತ್ತದೆ. ಪ್ರಿಯತಮನು ತನ್ನ ಪ್ರೇಯಸಿಯ ಕೈಹಿಡಿದು ನಿಧಾನವಾಗಿ ಸಾಗರತೀರದಲ್ಲಿ ನಡೆದು ಹೋಗುತ್ತಿರುವ ಚಿತ್ರ ಕಣ್ಣ ಮುಂದೆ ಹಾದು ಹೋಗುತ್ತದೆ. ಪ್ರೇಮಲೋಕದಲ್ಲಿ ಒಬ್ಬರ ತೆಕ್ಕೆಯಲ್ಲೊಬ್ಬರು ವಿರಮಿಸುತ್ತಾ, ಒಬ್ಬರನ್ನೊಬ್ಬರು ಮುದ್ದಿಸುತ್ತಾ ತಮ್ಮ ಉಜ್ವಲ ಭವಿಷ್ಯದ ಕನಸನ್ನು ಕಾಣುವ ಚಿತ್ರ ನಮ್ಮ ಸ್ಮೃತಿಪಟಲದಲ್ಲಿ ಸುಳಿದು ಹೋಗುತ್ತದಲ್ಲವೆ?!!

ನಿಜ ಸಂಗತಿ ಏನೆಂದರೆ "ಪ್ರೇಮಿಗಳ ದಿನ"ದ ಆಚರಣೆಯು "ಪ್ರೀತಿ"ಯೆಂಬ ಭಾವನೆಯ ವ್ಯಾಪಾರೀಕರಣ ಹಾಗು ನಿರ್ಮಲ ಪ್ರೇಮದ ಹೆಸರಿನಲ್ಲಿ -ದುರುಪಯೋಗ!" ತಾವು ಪ್ರೇಮಿಸಲ್ಪಟ್ಟಿದ್ದೇವೆ ಎಂಬ ಭಾವನಾಪರವಶತೆಯಿಂದ ಕಂಗೆಟ್ಟ ಯುವಕ-ಯುವತಿಯರು ಆ ದಿನದಂದು ಗುಲಾಬಿ ಬಣ್ಣದ ಬಟ್ಟೆ ತೊಟ್ಟು, ಆ ದಿನಕ್ಕೋಸ್ಕರ ಕೂಡಿಟ್ಟಿದ್ದ Pocket Moneyಯಿಂದ ತಾವು ಪ್ರೀತಿಸುತ್ತಿರುವ ಕನಸಿನ ರಾಣಿ/ರಾಜನಿಗಾಗಿ ಉಡುಗೊರೆ, ಸಿಹಿ ಹಾಗೂ Greeting Cards ಖರೀದಿ ಮಾಡುವ ಹುಟ್ಟು ಸಂಪ್ರದಾಯವನ್ನು ಪಾಲಿಸುವ ದಿನ.

ಕ್ರಿ.ಶ. 269ರಲ್ಲಿ ರೋಮ್ ರಾಜ್ಯದಲ್ಲಿ ಸಂತ ವೇಲೆಂಟೀನ್ ಸತತವಾಗಿ ಕ್ರಿಶ್ಚಿಯನ್ ಧರ್ಮವೀರರ ರಕ್ಷಣೆಗಾಗಿ ಹೋರಾಡಿದ್ದಕ್ಕಾಗಿ ಆತನನ್ನು ಕ್ಲಾಡಿಯಸ್ ಚಕ್ರವರ್ತಿಯು ಸೆರೆಹಿಡಿಸಿ, ಫೆಬ್ರುವರಿ 14ರಂದು ತಲೆ ತೆಗಿಸಿಬಿಟ್ಟನಂತೆ. ಮುಂದೆ ಕ್ರಿ.ಶ. 469ರಲ್ಲಿ, ಸಂತ ವೇಲೆಂಟೀನ್ ತನ್ನ ಜನರಮೇಲೆ ತೋರಿದ ಅಪಾರ ಪ್ರೀತಿಯ ನೆನಪಿಗಾಗಿ ಪೋಪ್ ಗೆಲಾಶಿಯಸ್ ಎಂಬಾತನು ಫೆ-14ರನ್ನು ಆತನ ಗೌರವಾರ್ಥಕ್ಕಾಗಿ ಮೀಸಲು ಎಂದು ಘೋಷಿಸಿದನಂತೆ.

ಈ ಕಂತೆಯನ್ನೇ ಆಯುಧವಾಗಿಟ್ಟುಕೊಂಡು ಫೆ-14ರಂದು ಲೋಕದಾದ್ಯಂತ ಪ್ರೇಮಿಗಳು ಯಥೇಚ್ಛವಾಗಿ ತಮ್ಮ ಸಂಗಾತಿಗಳೊಂದಿಗೆ ಕಳೆಯಲು, ತಮ್ಮ ಅಳಲನ್ನು ಪ್ರೀಯರೊಂದಿಗೆ ತೋಡಿಕೊಳ್ಳಲು, ಹಾಗೂ ಬಾಳ ಸಂಗಾತಿಗಳ ಅನ್ವೇಷಣೆಗಾಗಿ ಉಪಯೋಗಿಸಿಕೊಳ್ಳುತ್ತಾ ಬಂದಿದ್ದಾರೆ. ಈ ದಿನದ ಆಚರಣೆ ಇತ್ತೀಚೆಗೆ ಭಾರತಕ್ಕೂ ವ್ಯಾಪಕವಾಗಿ ಹರಡಿದೆ.

ಪಾಪ, ಯಾರಿಗೆ ಪ್ರೇಮಿಗಳಿಲ್ಲವೊ ಅವರು ಈ ದಿನದಂದು ಮಿಕ್ಕವರನ್ನು ನೋಡಿ ಅಸೂಯೆ ಪಟ್ಟುಕೊಳ್ಳುತ್ತಾ ತಮ್ಮ ನಿರರ್ಥಕ ಜೀವನದ ಮೇಲೆ ಕನಿಕರ ಪಟ್ಟುಕೊಳ್ಳುತ್ತಾ ವ್ಯಸನಪಡುತ್ತಾರೆ.

'ಪ್ರೇಮಿಗಳ ದಿನ'ದಂದೇನಾದರೂ ಪ್ರೇಮಿ ತನ್ನ ಪ್ರಿಯತಮೆಯನ್ನು ಅಲಕ್ಷ್ಯ ಮಾಡಿದನೋ, ಮರುದಿನ ಆತ ನಿದ್ದೆಯಿಂದೆದ್ದಾಕ್ಷಣದಿಂದ ಆತನಿಗೆ 'ಪ್ರಳಯ ದಿನ', ಪ್ರಿಯೆಯಿಂದ ತುಚ್ಛಿಕಾರಕ, ನಿಂದನಾತ್ಮಕ, ತಾತ್ಸಾರವನ್ನೆದುರಿಸುವ ದಿನವಾಗಿ ಬಿಡುವುದು. ಬರೀ ಸ್ವಾರ್ಥಿಗಳು...

ತತ್ವ ಶಾಸ್ತ್ರಜ್ಞ ಪ್ಲೇಟೋನ ಪ್ರಕಾರ "ಯಾವ ಸ್ವಾರ್ಥ ಪರತೆಯೂ ಇಲ್ಲದ ನಿಸ್ವಾರ್ಥ ಪ್ರೀತಿಯೇ - ಪ್ರೇಮ" ಆದರೆ ಪ್ರೇಮಿಸುವುದು ಈಗಿನ ದಿಗಳಲ್ಲಿ ಒಂದು ಫ್ಯಾಷನ್ ಪರಸ್ಪರ ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳಲೆಂದೇ ಉದ್ಭವವಾಗಿರುವ ಒಂದು ಸಾಧನ. ಹೀಗಾಗಲು ಕಾರಣ?!... "ಪ್ರೇಮ" ಎಂಬುದು ಒಂದು ಗಂಡು-ಹೆಣ್ಣಿನ ನಡುವೆ ಮಾತ್ರ ಇರಲು ಸಾಧ್ಯ", ಎಂದು ಸಾರಿ ಹೇಳಲು ಪ್ರಯತ್ನ ಪಡುತ್ತಿರುವ ಸಿನಿಮಾ ಹಾಗೂ ದೂರದರ್ಶನ ಮಾಧ್ಯಮ ಹಾಗೂ ನಮ್ಮ ಸಮಾಜವೂ ಇದಕ್ಕೆ ಕಾರಣ.

ಈಗಿನ ಕಾಲೇಜ್ ಯುವತಿಯರಿಗಂತು, ಸ್ಫುರದ್ರೂಪಿ ಯುವಕ, ಓಡಾಡಲು ವಾಹನ, ಖರ್ಚಿಗೆ ದುಡ್ಡಿದ್ದರೆ ಸಾಕು, ಯಾವ ಜಾತಿಯಾದರೇನಂತೆ ಆತನೇ ಅವರ ಆಜನ್ಮ ಪ್ರೇಮಿ. ಹುಡುಗರು ಇವರಿಗೇನು ಕಡಿಮೆ ಇರುವುದಿಲ್ಲ... ಅವರಿಗೆ ಹುಡುಗಿಯ ಸೌಂದರ್ಯ ಪ್ರಮುಖವಾದದ್ದು ಹುಡುಗರು ತಮ್ಮ ಆಸೆ ಈಡೇರಲು ಹುಡುಗಿಯರಿಗೆ ಎಲ್ಲಾ ರೀತಿಯ ಭರವಸೆ ನೀಡುತ್ತಾರೆ. ತಮ್ಮ ಅಂತರಾಳದಲ್ಲಿ ಇಬ್ಬರಿಗೂ ಆ Time - pass ಸಂಬಂಧಗಳು ಮದುವೆಯವರೆಗೆ ತಲುಪುವ ನಿರೀಕ್ಷೆ ಇಲ್ಲದಿರುವುದರಿಂದ ಇಬ್ಬರೂ ಒಪ್ಪಂದಕ್ಕೆ ಬೀಳುತ್ತಾರೆ.

ಒಂದು ಯೋಗ್ಯವಾದ ಕೆಲಸವೂ ಇರದ ಒಬ್ಬ ಬಾಲಕ ಈ ಕಟ್ಟುಪಾಡಿನಲ್ಲಿ ಸಿಕ್ಕಿಹಾಕಿ ಕೊಳ್ಳುತ್ತಾನೆಯೇ? ಈ ರೀತಿಯ ಕಾಲೇಜ್ romanceಗಳು ತಮ್ಮ expiry dateಗಳು ಮುಗಿದ ತಕ್ಷಣ ಸ್ವಾಭಾವಿಕ ಮರಣ ಹೊಂದುತ್ತದೆ. ಈ ಬಲೆಯಿಂದ ಹೊರಗೆ ಬರುವ ಮನಸ್ಥೈರ್ಯ ಇರದವರು ಮಾನಸಿಕವಾಗಿ ಅಸ್ವಸ್ಥರಾಗುವವರೆಗೂ ಹೋಗುತ್ತಾರೆ. ಕಾಲೇಜ್ ಪ್ರೇಮ ಪ್ರಸಂಗಗಳು ಸ್ವಾರ್ಥಪರತೆಯ ಸೋಪಾನದ ಮೇಲೆ ನಿಂತಿರುವುದರಿಂದ ಇಬ್ಬರಿಗೂ ಕಹಿ ಅನುಭವ ಖಂಡಿತ. ಸಂಬಂದಗಳು ಯಾವಾಗಲೂ ಯೋಗ್ಯತೆ; ಹೊಂದಾಣಿಕೆ (compatibility); ದೃಢತೆ (stability) ಹಾಗೂ ತಿಳುವಳಿಕೆಯ ತಳಹದಿ ಇದ್ದರೆ ಮಾತ್ರ ಸಫಲವಾಗುತ್ತದೆ.

ಕಾಲೇಜಿನ ದಿನಗಳಲ್ಲಿ ನಾವು ಯಾವುದೇ ಒಂದೇ ಹುಡುಗ ಅಥವಾ ಹುಡುಗಿಯನ್ನು ಮನದಲ್ಲಿ ನೆನೆಯುತ್ತಾ ಹಗಲುಗನಸು ಕಾಣುವುದರ ಬದಲಾಗಿ ವಿವಿಧ ಗೆಳತಿ/ಗೆಳೆಯರ ಒಡನಾಟ ಬೆಳೆಸಿಕೊಳ್ಳಬೇಕು. ಆಗ ಭವಿಷ್ಯದಲ್ಲಿ ನಿಜವಾದ ಬಾಳ ಸಂಗಾತಿಯನ್ನು ಆಯ್ದುಕೊಳ್ಳುವ ಸಂಧರ್ಭದಲ್ಲಿ ಆ ಅನುಭವದ ಅಡಿಪಾಯ ಕೆಲಸಕ್ಕೆ ಬರುತ್ತದೆ.

ಹಾಗಾದರೆ 'ಪ್ರೇಮ'ವೆಂಬುದು ಮಾನವ ಜನಾಂಗ ಅರ್ಥ ಮಾಡಿಕೊಂಡಿರದ ಭ್ರಮೆಯ ವಸ್ತುವೆ? "ಪ್ರೇಮ"ಒಂದು ಜೋಡಿ ಸುಂದರ ಮುಖಗಳ ಒಡೆಯರ ನಡುವಿನ "ಆಕರ್ಷಣೆ" ಮಾತ್ರವೆ?" ಖಂಡಿತಾ ಇಲ್ಲ.

ಭಾರತದ ಇತಿಹಾಸದಲ್ಲೇ ದಿವ್ಯ ಪ್ರೇಮವನ್ನು ಜಗತ್ತಿಗೆ ಉಣಬಡಿಸಿದ ಬುದ್ಧ, ಗಾಂಧಿಗಳಂತ ಮಹಾತ್ಮರಿದ್ದಾರೆ. ಇಂತಹವರ ನಿಸ್ವಾರ್ಥ ಪ್ರೀತಿಯನ್ನು "ಪ್ರೇಮ" ಎಂದು ಬಣ್ಣಿಸಿದ

20ನೇ ಪುಟಕ್ಕೆ

ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

(ಹಿಂದಿನ ಸಂಚಿಕೆಂದ) ಧಾರಾವಾಹಿ - 5

ಸರಿ ಈ P. C. ರಂಗಪ್ಪದಡ್‌ತ್ತೇಳಿ ಕಾಲುಗಳನ್ನ ಜೋಡ್ಸಿ ಸೆಲ್ಯೂಟ್ ಹೊಡ್ತ್. ಇವೆಲ್ಲಾ ಹೊರಗೆ ಹೋಗಿ ಆದ ಮ್ಯಾಲೆ ಇನ್ನೊಬ್ಬ P. C. ಲಿಂಗಪ್ಪ ತಿಂಬಕೆ, ಕುಡಿಯಕೆ ಇರುವ ಪಾರ್ಸೆಲ್ ಬ್ಯಾಗ್‌ನ ಹೊತ್‌ಕಂಡ್ ಬಾತ್. ಅಷ್ಟೊತ್ತಿಗೆ ಪಕ್ಕಲಿ ಮಲಗಿದ್ದ ಸೆಮಿಕ್ರೇಕ್ ಪೇಶಂಟ್ ಎದ್ ಕುದ್ದತ್. ಅಂವ ಪ್ರಭುದೇವ್ ಪಿಲ್ಮ ಎಕ್ಟರ್ ತರ ವೇಷನ ಹಾಕಂಡ್ ಹೊರಗೆ ಹೊರಟ್‌ತ್ ಈ ಇಬ್ಬರೂ P.C.ಗಳಿಗೆ ಇವನ ಮ್ಯಾಲೆ ಅಷ್ಟೊಂದ್ ಕಾಳಜಿ ಇಲ್ಲೆ ಯಾಕೆತ್ತೇಳಿರೆ ಇಂವ ಕಳೆದ ಒಂದ್ ತಿಂಗ್ಳಿನಿಂದಲೂ ಏನೂತಕರಾರ್ ಇಲ್ದೆ ಈ ಹಾಸಿಗೆನ ಬುಟ್ ಎಲ್ಲಿಗೂ ಹೋಗಿತ್ಲೆ. ಯಾಕೆತ್ತೇಳಿರೆ ಇಂವಂಗೆ ಬೇರೆಗತಿ ಇಲ್ಲೆ. ಅವನಿಷ್ಟಕ್ಕೆ ಅಂವ ಹೊರಗೆ ಹೋಗಿ ನಿಡುತ್ತಾಗಿ ವಾಪಾಸ್ ಬಂದದೆ. ಯಾವುದೋ ಒಂದ್ ಕೇಸ್‌ನ ಕ್ಲೂ ಸಿಕ್ಕಿಕ್ಕೋಸ್ಕರ ಇಂವನ ಇಲ್ಲೇ ಇರ್‌ಸಿಕಂಡೊಳೊ.

ರಾಜು ಕೈಗೆ ಊಟದ ಪಾರ್ಸಲ್ ಸಿಕ್ಕಿದಂಗೆ ಅದರ ಲಾಯಕ್‌ಲಿ ತಿಂದ್ ಒಂದ್ ಬಾಟ್ಲ್ ನೀರ್ ಕುಡ್ತ್. ಆಮೇಲೆ ಆ ನರ್ಸ್ ಗೂಡೆ ಕೊಟ್ಟ ಪಿಲ್ಸ್‌ಗಳ್‌ನೆಲ್ಲಾ ತಕಂಡ್ ನೀರ್ ಕುಡ್ತ್. ಆಗ ಆ ಎರಡ್ P.C.ಗ ವಾರ್ಡ್ ಬಾಗಲ್‌ನ ಮುಚ್ಚಿ ಬೋಲ್ಟ್ ಹಾಕೊಂಡೊ. ಇಂವನ ಮುಂದೇ ಕುದ್ ಕಂಡ್ ಎರಡೆರಡ್ ಪೆಗ್ ರ್‍ರಂನ ಹಾಕಂಡ್ ಜೊತೆಗೆ ಖಾರ ಮಿಕ್ಷರ್‌ನ ನೊಣ್‌ಚಿಕಂಡ್ ತಿಂಬಕೆ ಶುರು ಮಾಡ್ಡೊ. ಅವುಕೆ ನಿಷೆ ಏರಿಕಾಕನ ಖುಷೀಲಿ ನೆಗೆ ಆಡಿಕಂಡ್ ಹರಟೆಗೆ ಶುರುಮಾಡ್ಡೊ. ಆಗ ರಾಜು ಅವುಕೆ ಎರಡ್ ಸಿಗರೇಟ್ ಕೊಟ್ಟ್ ತಾನೇ ಬೆಂಕಿಕಡ್ಡಿ ಗೀರಿ ಹಚ್ಚಿಸಿ ಕೊಡ್ತ್. ಅವರ ಸಂತೋಷದ ಜೊತೆಗೆ ರಾಜುಕೂಡಾ ಕೆಲವು ಜೋಕ್ಸ್‌ಗಳ ಸೇರ್ಸಿಕಂಡ್ ಮಾತಾಡಿಕೆ ಶುರುಮಾಡ್ತ್. ಹಂಗೇ ಒಳ್ಳೊಳ್ಳೆ ವಿಚಾರದ ಬಗ್ಗೆ ಮಾತಾಡಿಕಂಡ್ ಈ ಇಬ್ಬರು P.C.ಗಳ ವಿಶ್ವಾಸ ಗಳಿಸಿಕಂಡತ್.

ಮಿಸ್ಟರ್ ರಾಜುಗೆ ಹೊಟ್ಟೆಗೆ ಸ್ವಲ್ಪ ಅನ್ನ ಬಿದ್ದಾಕನ ಮೈಲಿ ಸ್ವಲ್ಪ ಶಕ್ತಿ ತುಂಬಿ ಕಂಡತ್. ಡಾಕ್ಟರ್ ಕೊಟ್ಟ ಇಂಜೆಕ್ಷನ್ ಫಿಲ್ಸ್‌ಗಳಿಂದ ಮೈಲಿದ್ದ ಸುಸ್ತ್, ಜ್ವರ, ಬೇನೆ ಎಲ್ಲಾ ಹೊರಟ್ ಹೋಗಿತ್. ಮನಸ್ಸ್ ಸ್ವಲ್ಪ ಹಗುರ ಆಗಿ ಚೈತನ್ಯ ತುಂಬಿತ್. ಹಂಗೇ ಪಕ್ಕದ ಬೆಡ್ ಮೇಲೆ ಮಲಗಿದ್ದ ಪ್ರಭುದೇವ್ ಎಕ್ಟರ್‌ನ ಬಕ್ತನ ನೋಡ್ತ್. ಅಂವ ಯಾವ ಒಂದ್ ಒರಿಸ್ಸ್ ಇಲ್ದೆ ಇನ್ನೂ ಗೊರೆಕೆ ಹೊಡೆಯುತಾ ಉಟ್ಟು. ಬಾಗಲ್‌ನ ನೋಡ್ರೇ ಅದ್‌ಕ್ಕೆ ಒಳಗಿಂದ ಲಾಕ್ ಮಾಡಿಕಂಡ್ ಈ ಇಬ್ರೂ ಪೋಲೀಸ್‌ಗ ಒಂದೇ ಕಟ್ಲ್‌ಲಿ ಇಬ್ಬರು ಸತ್ತ್ ಹೊದವರಂಗೆ ನಿದ್ರೆ ಹೊಡೀತಾ ಒಳೊ. ಸರಿ ರಾಜು ಕೂಡಾ ಒಳ್ಳೆ ನಿದ್ರೆ ಮಾಡೂಕುತ್ತೇಳಿಕಂಡ್ ಕಣ್ಣ್ ಮುಚ್ಚಿ ಮಗಿತ್. ಆದ್ರೇ ನಿದ್ರೆ ಮಾತ್ರ ಹತ್ರ ಸುಳ್ತ್‌ಲೆ.

ಈ ಸಂದರ್ಭಲೇ ಮಿ. ರಾಜುಗೆ ಜ್ಞಾನೋದಯ ಆದ್. ಇಂವನ ಕ್ರಿಮಿನಲ್ ಮೈಂಡ್‌ಗೆ ಒಂದೊಂದೇ ಐಡಿಯಾ ಗ ಹೊಳೆಯಕೆ ಶುರ್ ಆತ್. ಇಂವನ ಶರೀರದಲ್ಲಿದ್ದ ಒಂದೊಂದೇ ಸಬಾವಗ ಬುಟ್ಟು ಹೊರಡುತಿದ್ದೊ. ಅವು ಯಾವುದುತ್ತೇಳಿರೆ 1) ಪುಕ್ಕಲುತನ 2) ಸಂಕೋಚ 3) ಸೋಮಾರಿತನ 4) ಕೆಟ್ಟಬಾಳಿ ಈ ಖಾಲಿ ಆದ ಸ್ವಭಾವಗಳಿಗೆಲ್ಲಾ ತದ್ವಿರುದ್ಧ ಆದಂತಹ, 1) ಧೈರ್ಯ ಮತ್ತು ಹಠ 2) ಮೋಸಗಾರರಿಗೇ ತಿರುಮಂತ್ರ ಹಾಕುವ ಕುಯುಕ್ತಿ 3) ಎಂಥ ಕಷ್ಟದ ಸವಾಲ್‌ಗ ಬಂದ್ರೂ ಆದರ ಎದಿಸುವ ಆತ್ಮವಿಶ್ವಾಸ 4)ನಿಯತ್ತು ಹಾಗೂ ಪರೋಪಕಾರ. ಇಂತಹ ಶಕ್ತಿಗ, ಭಾವನೆಗೆ ಇವನ ಮೈತುಂಬಿ ಬಂದಾಕನ ಇವನ ಮನಸ್ಸಿಗೆ ತುಂಬಾ ಖುಷಿ ಆತ್. ಸಮಧಾನ ಆತ್. ಹಂಗೇ ಕಣ್ಣಿಗೆ ನಿದ್ರೆ ಹತ್ತಿತ್.

ಹೊರಗಡೆ ಮರಗಳಿಂದ ಕೋಗಿಲೆ ಹಕ್ಕಿ ಜೋರಾಗಿ ಕೂಗಾಡಿಕೆ ಶುರುಮಾಡಿದ್ದೊ ಆಗ Mr. ರಾಜುಗೆ ಎಚ್ಚರ ಆತ್. ಹಂಗೇ ಮೈಮುರ್ದ್ ಜೋರಾಗಿ ಆಗಳಿಸಿತ್. ಆಗ ಆ ಇಬ್ಬರೂ ಪೋಲಿಸ್‌ಗಳಿಗೆ ನಿದ್ರೆ ಹರ್ದ್ ಕಣ್ಣ್ ಬುಟ್ಟೊ.

ಹಲೋ ಗುಡ್ ಮಾರ್ನಿಂಗ್ ಸಾರ್! ವೆರಿ ವೆರಿ ಗುಡ್ ಮಾರ್ನಿಂಗ್ ನಿಮಗೆ ಶಭೋದಯ ಆಗ್ಲಿ ಸಾರ್‌ತ್ತೇಳಿ ಇಬ್ಬರಿಗೂ ನಮಸ್ಕಾರ ಮಾಡಿಕಂಡ್ ಆಹಾ ! ಒಳ್ಳೆ ನಿದ್ರೆ ಮಾಡ್ದರಿ ಅಲಾ ಸಾರ್? ತಾ ಹೇಳಿ ಅವಿಬ್ರೂ ಎದ್ ಕುದ್ದಂಗೆ ತಕ್ಕೊಳ್ಳಿ, ಹಚ್ಚಿಕೊಳ್ಳಿ ಸಾರ್ ಸಿಗರೇಟ್‌ನ ತಾ ಹೇಳಿ ಕೊಟ್ಟ್ ತನ್ನ ಲೈಟರಂದ ಬೆಂಕಿ ತಗಲಿಸಿ ಕೊಟ್ಟತ್. ಆ ಪೋಲಿಸ್‌ನವ್ರ ಪಸಂದಾದ ನಿದ್ರೆ ಹೊಡ್ದರುದ ಈಗ ಸ್ವಲ್ಪ ಖುಷಿ ಆಗಿ ಹಾಂ ಹೌದಯ್ಯ ಬರ್ರೋಬರಿ ನಿದ್ರೆ ಭಂದು ಬುಡ್ತ್ ತಾ ಹೇಳಿಕಂಡ್ ಧಂ ಎಳೆಯುತಾ ಆ ಮಂಚದ ಮೇಲೆ ಕುದ್ ಕಂಡ್ ಮಾತಾಡ್ತಾ ಇದ್ದವು ಒಬ್ಬೊಬ್ಬ ಎದ್ ಬಾತ್ ರೂಂಗೆ ಹೋಗಿ ಕೆಲ್ಸ ಮುಗಿಸಿ ಕಂಡ್ ಬಂದೊ. ಇದೆಲ್ಲಾ ಆದಮ್ಯಾಲೆ ಇವು ಒಳಗಡೆಲಿಪ್ಪ ಬೀಗನ ಬಿಚ್ಚಿ ಹೊರಗೆ ಹೊರಟೊ. ಆಗ ಈ ರಾಜು ಸಾರ್ ನೀವು ಬರುವಾಗ ನಂಗೂ ಎರಡು ಗ್ಲಾಸ್ ಸ್ಟ್ರಾಂಗ್ ಕಾಫಿತ್ತೇಳಿ ಖಾಲಿ ಬಾಟ್ಲ್‌ನ ಕೊಟ್ಟ ಕೈಗೆ 10 ರೂ ಒಂದ್ ನೋಟ್‌ನ ಹಿಡ್ಸಿತ್,

ಹಾಂ, ಆಯ್ತು ಕಣಯ್ಯತೇಳಿಕಂಡ್ ಆ ಇಬ್ಬರೂ ಹೊರಗಡೇಂದ ಬಾಗಿಲ್‌ಗೆ ಬೀಗ ಜಡ್ದ್ ಇಬ್ಬರೂ ಒಟ್ಟಿಗೇ ಬೆಡ್ ಕಾಫಿ ಗೊಸ್ಕರ ಅಲ್ಲೇ ಗಾಯತ್ರಿ ಭವನದ ಕಡೆ ಹೊರಟೊ.

ರಾಜು ಪುನಃ ಒಂದ್ ಸರ್ತಿ ತಿರುಗಿ ನೋಡ್ತ್. ಪಕ್ಕದ ಬೆಡ್ ಮೇಲೆ "ಮುಕಾಬುಲಾ" ಖ್ಯಾತಿ ಪ್ರಭುದೇವನ ಡ್ರೆಸ್ ತರದ ವೇಷದಾರಿ ಇನ್ನೂ ನಿದ್ರಾದೇವಿಯ ತೊಡೆಮೇಲೇ ಮಲಗಿಟ್ಟು ಅಂವನ V.I.P ಕಂಪನಿ Boxಲಿ ಇನ್ನೂ ಕೆಲವು ಬಟ್ಟೆಗ ಇದ್ದೊ.

ಇದೇ ಸರಿಯಾದ ಚಾನ್ಸ್‌ತ ಮಿಸ್ಟರ್ ರಾಜುನ ತಲೆಗೆ ಹೊಳ್ತ್. ಕೂಡ್ಲೆ ಆ ಕ್ರೇಕ್ ಪೇಶಂಟ್ ಪ್ರಭುದೇವನ ಮೆಲ್ಲಂಗೆ ಎತ್ತಿ ಇವನ ಕಟ್ಲ್‌ಮ್ಯಾಲೆ ಮಲಗಿಸಿತ್. ಅವನ ಕೆಂಪು Over coat ಜರ್ಕಿನ ಮೆಲ್ಲೆ ಬಿಚ್ಚಿ ಎತ್ತಿಕಂಡತ್. ಮತ್ತೆ ಅಲ್ಲಾಡದಂಗೆ ಅಂವನ ಮೈ, ಮುಖ ಪೂರ ಮುಚ್ಚುವಂಗೆ ಕಂಬ್ಳಿನ ಎಳ್ದ್ ಮುಚ್ಚಿತ್.

ಆಮ್ಯಾಲೆ ಬೇಗ ಬೇಗ ಆ ಪಾರ್ಟಿನ ಹಳದಿ ಹಳೇ ಕೊಳೆ ಹಿಡ್ದ ಸರಟ್‌ನ ತನ್ನ ಮೈಗೆ ಹಾಕಂಡತ್ ಅಂವನ ಹರ್ದ್ ಹೋಗಿ

ಒಗೆಯದೆ ವರ್ಷ ಆಗಿದ್ದಂತಹ ಕರೀ ಜೀನ್ಸ್ ಪ್ಯಾಂಟ್‌ನ ಹಾಕಂಡತ್ ಕಾಲ್ ಬೆರಳೆಲ್ಲಾ ಹೊರಗೆ ಹೊರಟ್ ಕಂಡಂತಹ ಅಂವನ ಸ್ಪೋರ್ಟ್ಸ್ ಶೂಸ್‌ನ ಕಾಲಿಗೆ ಹಾಕಂಡತ್. ಆಮೇಲೆ ಬ್ಯಾಗೊಳಗಿದ್ದ ಕೆಂಪು ಟೈನ ತಕಂಡ್ ಕುತ್ತಿಗೆಗೆ ಕಟ್ಟಿಕೆಂಡತ್. ಅಲ್ಲೆ ಕಪ್ ಬೋರ್ಡ್ ಮೇಲೆ ಇಟ್ಟಿದ ಅಂವನ ಕೆಂಪು ಕನ್ನಡಕನ ಸಿಕ್ಕಿಸಿಕಂಡತ್, ಬ್ಯಾಗೊಳಿಗೆಂದ ತೆಗ್ದ್ ಅಂವನ ಹ್ಯಾಟ್‌ನ ತಲೆಗೆ ಹಾಕಂಡತ್. ಈಗ ಮಿಸ್ಟರ್ ರಾಜು ಪಕ್ಕಾ ಹೀರೂ ಆ ಪ್ರಭುದೇವ್‌ನ ತರನೇ ಕಾಣುತಾ ಉಟ್ಟು.

ಈ ಸೆಮಿಕ್ರೇಕ್ ನಿಜವಾದ ಹುಚ್ಚ ಅಲ್ಲ. ಇಂವನ ಹೊಂದಾಣಿಕೆ ಆಗುವಂತಹ ವೇಷಭೂಷಣಗಳನೆಲ್ಲಾ ನೋಡ್ರೆ ಇಂವ ಈತೆರ ಯಾವುದೋ ಕಾರಣಕ್ಕೆ ಈ ತರಹದ ನಾಟಕ ಆಡಿಕಂಡ್ ಏನೋ ಒಂದ್ ಕೆಲ್ಸನ ಸಾದಿಕ್ಯೋಸ್ಕರ ಬಂದಂವ ಇರೋಕುತ್ತೇಳುವ ಅನುಮಾನ ಬರುತಾ ಉಟ್ಟು. ಅಷ್ಟೊತ್ತಿಗೆ ಆ ಇಬ್ಬರು ಪೋಲೀಸ್‌ಗ ವಾಪಾಸ್ ಮಾತಾಡಿಕಂಡ್ ಬರುತ್ತಿರುವ ಸದ್ದ್ ಕೇಳ್ಸಿದಂಗೆ ಆತ್. ಸರಿ ಮಿಸ್ಟರ್ ರಾಜು ಬಾಗಲ್ ಪಕ್ಕಲಿ ಹೊಗಿ ನಿಂತ್ ಕಂಡತ್. ಹೊರಗಡೇಂದ ಬಾಗ್‌ಲ್ ಬೀಗನ ತೆಗ್ದ್ ಒಳಗಡೆಗೆ ಕಾಲ್ ಮಡುಗಿದೊ. ಹೊರಗೆ ಹೊರ್ಡಿಕೆ ರೆಡಿ ಆಗಿದ್ದ ಆ ತಮಿಳ್ ಕ್ರೇಕ್ "ಎಂಗಳ್ ಸಾರುಕ್ಕು ನಮಸ್ಕಾರಂಗೋ" ತ್ತೇಳಿ ಒಂದ್ ಮಿಲ್ಟ್ರೀ ಸೆಲ್ಯೂಟ್ ಹೊಡ್ತ್ ಮತ್ತೆ ಕೈ ಸನ್ನೇಲೇ ಒಂದ್ ಬೀಡಿ ಸೇದಿಕಂಡ್ ಬಂದನೆತ್ತೇಳಿ ಕೇಳ್ತ್ "ಹಾಂ! ಸೀಗ್ರ ವಾಂಗೋ ಎಂಗೆ ಪೋಚ್ಚಾಂಗ್ಲೂ ಸೀಗ್ರ ವಂದ್ ಬಿಡಾಂಗೋ"ತ್ತಾ ಅಂವಂಗೆ ಹೊರಗೆ ಹೋಕೆ ಪರ್ಮಿಷನ್ ಕೊಟ್ಟೊ ಮತ್ತೆ ಈ ಇಬ್ರೂ ಮುಖ ಮುಖ ನೋಡಿಕಂಡ್ ನಗೆ ಆಡಿಕಂಡ್. ಒಳ್ಳೆ ಹುಚ್ಚನ ಸಹವಾಸ ಕಣಪ್ಪಾತಾ ನೆಗೆ ಆಡಿಕಂಡೊ.

ಮಿಸ್ಟರ್ ರಾಜು ಈಗ ಮುಖಪೂರ್ತಾ ಕಂಬ್ಳಿ ಹೊದ್ ಕಂಡ್ ಮಲಗಿಟ್ಟು. ಅದರಂದ ಆ ಇಬ್ರೂ ಪೋಲೀಸ್‌ನವು ಪುನಃ ಒಂದೊಂದು ಬೀಡಿನ ಹಚ್ಚಿಕಂಡ್ ಹಂಗೇ ಮಾತಾಡಿ ಕಂಡ ಅವರ ಮಂಚದ ಮೇಲೆ ಕುದ್ದು ಕಂಡೊ. ಸ್ವಲ್ಪ ಹೊತ್ತಿಗೆ ಡ್ಯೂಟಿ ನರ್ಸ್ ಔಷಧಿ ಟ್ರೇನ ಕೈಲಿ ಹಿಡ್‌ಕಂಡ್ ಒಳಗೆ ಬಾತ್ " ಓ ಎಲ್ಲಿ ಸಾರ್ ನಿಮ್ಮ ಪ್ರಭುದೇವ್ ಆವಾಗ್ಲೇ ಅಂವನ ಶೂಟಿಂಗ್‌ಗೆ ಕಳ್ಸಿ ಬಿಟ್ರಾ?ತ್ತೇಳಿ ನಗೆ ಆಡಿಕಂಡ್ ತಕ್ಕೊಳ್ಳಿ ಈ ಮಾತ್ರೆಗಳನ್ನು ಅಂವ ವಾಪಾಸ್ ಬಂದಂಗೆ ಇದರ ಕೊಟ್ಟ್ ಬುಡಿತ್ತೇಳಿ ಕೊಟ್ಟಿತ್. ಮತ್ತೆ ಈ ಕಟ್ಲ್‌ಲಿ ಮಲಗಿದ್ದ ಪೇಶಂಟ್‌ನ ಕಂಬ್ಳಿನ ಹಿಡ್ದ್ ಎಳ್ತ್. ಹಲೋ ಮಿಸ್ಟರ್ ರಾಜು ಎದ್ದೇಳಿ ತಾ ಹೇಳಿಕಂಡ್ ಅಂವನ ನೋಡ್ತ್. ಹೋ ತ್ತೇಳಿ ಆಶ್ಚರ್ಯಲಿ (ಸಿಸ್ಟರ್) ನರ್ಸ್ ಕಿರುಚಿಕಂಡತ್ Mr. ರಾಜುನ ಕಟ್ಲ್‌ಲಿ ಆ ಕ್ರೇಕ್ ಪೇಶಂಟ್ ಗೊರಕೆ ಹೊಡಿಯುತಾ ನಿದ್ರೆ ಹೊಡೀತಾ ಉಟ್ಟು. ಆಗ ಈ ಇಬ್ರೂ ಪೋಲಿಸ್‌ನವು ತಾವು ಸೇದುತಿದ್ದ ಬೀಡಿನ ಅರ್ಧಕ್ಕೆ ಬಿಸಾಡಿ Mr. ರಾಜುನ ಮೋಡ್ದೊ. ಅಂವ ಅಲ್ಲಿ ಎಲ್ಲೂ ಇಲ್ಲೆ. ಆಗ ಇಬ್ರು ಎದೆನೂ ದಸ್ಸಕ್‌ತ್ತೇಳ್ತ್, ಮತ್ತೆ ಇಬ್ರೂ ಬಾತ್‌ರೂಂ ಒಳಗೆ ಬಗ್ಗಿ ನೋಡ್ದೊ ಅಲ್ಲೂ ಇಲ್ಲೆ. ಹೋ ನಾವೇ ಅಲ್ವೇ? ಆ ಮನುಷ್ಯನ ಹೊರಗೆ ಹೋಗಲು ಬಿಟ್ಟು ಕೊಟ್ಟಿದ್ದು ಅಂದ್ರೇ ಅಂವ ಈ ಪ್ರಭುದೇವ ಅಲ್ಲ. ಅಂವನ ಡ್ರೆಸ್‌ನ ಹಾಕಂಡಿದ್ದ ಈ ಕಿಲಾಡಿ Mr. ರಾಜೂನೇ ಅವನ ಹಂಗೇತಾ ಗ್ಯಾನ ಮಾಡಿಕಂಡ್ ಆ ಇಬ್ರೂ ಅಲ್ಲಿಂದ ಹೊರಗೆ ಓಡಿಕಂಡ್ ಹೋಗಿ ಆಸ್ಪತ್ರೆಯ ಹೊರಗಡೆ ಗೇಟ್ ಹತ್ತಿರ ಅತ್ತ ಇತ್ತ ಹುಡುಕಾಡಿದೊ. ಅಲ್ಲಿ ಎಲ್ಲೂ ಕಾಂಬೊದಿಲ್ಲೆ. ಹೋ!! ಏನು ಮಾಡೋದು ಲಿಂಗಪ್ಪಾ? ಈ ರಸ್ತೆ ದರೋಡೆಕೋರ ನಮಿಗೆ ಚಳ್ಳೆಹಣ್ಣ್‌ನ ಹಿಂಗೆ ತಿನ್ಸಿಟ್ಟುತಾ ನಮ್ಮ ಇನ್‌ಸ್ಪೆಕ್ಟರ್‌ಗೆ ಗೊತ್ತಾದ್ರೆ ಮಾತ್ರ ನಮ್ಮಿಬ್ರೂನೂ ಕೆಲ್ಸದಿಂದ ತೆಗ್ದ್ ಹಾಕಿ ಬುಟ್ಟವೆ. ಆದ್ರಂದ ಆ ಬಡ್ಡೀಮಂಜನ ಈಗ್ಲೇ ನಾವು ಹುಡುಕಿ ಹಿಡ್ದ್ ತರೋಕು. ಅದ್ಕೆ ಮೊದ್ಲ್ ನಮ್ಮ ಮುಖನ ನಮ್ಮ ಇನ್‌ಸ್ಪೆಕ್ಟರ್‌ಗೆ ತೋರ್‍ಸುದು ಬೇಡತಾ ಹೇಳಿ ಕಂಡ್ ಹಂಗೆ ಇಬ್ರೂ ಒಂದೊಂದು ಗಲ್ಲಿ ಕಡೆಗೆ ದೌಡಾಯಿಸಿದೊ. ಅಲ್ಲೇ ಸುತ್ತಮುತ್ತ ಹತ್ರದ ಗಲ್ಲಿಗಳಲೆಲ್ಲಾ ಓಡಾಡಿ ಹುಡುಕಾಡಿದೊ. ಕೆಲವು ಮನೆ ಮುಂದೆ ಬಿಕ್ಸೆಗೆ ನಿಂತಿದ್ದ ಬಿಕ್ಷುಕುಗಳನ್ನು ಅಜ್‌ಮಾಯಿಸಿ ನೋಡಿ ವಿಚಾರ್ಸಿದೊ. ಕೊನೆಗೆ ಈ ಇಬ್ರೂ ಸೇರಿ ಕಂಡ್ ಹುಚ್ಚರಂಗಿದ್ದ ಹುಚ್ಚ ಜನನ, ಭಿಕ್ಷುಕ ವೇಷದಾರಿಗಳನ್ನೆಲ್ಲಾ ತುಂಬಾ ತಲೆಕೆಡ್ಸಿಕಂಡ್ ವಿಚಾರಿಸಿಕಂಡ್ ಬಸ್‌ಸ್ಟ್ಯಾಂಡ್ ಒಳಗೆ ದೇವರಾಜ್ ಮಾರ್ಕೆಟ್‌ನ ಒಳಗಡೆ, ಸಯ್ಯಾಜಿರಾವ್‌ರೋಡ್ ಪುಟ್‌ಪಾತ್ ಹಿಂಗೆಲ್ಲಾ ಜಾಲಾಡುತ್ತಾ ಒಳೊ.

ನಮ್ಮ ಮಿಸ್ಟರ್ ರಾಜು ಆ ಕಾದಲನ್ ಪ್ರಭುದೇವನ ವೇಷಲಿ ಟೊಪ್ಪಿ ಮತ್ತೆ ಕನ್ನಡಕನ ಗೇಟ್‌ದಾಟಿದಂಗೆ ತೆಗ್ದ್ ಬಿಸಾಕಿತ್. ಅಶೋಕ್ ಭವನ ಎದುರು ರಸ್ತೆಗೆ ಬಾಕಾಕನ ಹಾಕಂಡಿದ್ದ ಕೆಂಪು overಕೋಟ್‌ನ ಮತ್ತೆ ಆ ಹಳೇ ಸ್ಪೋರ್ಟ್ಸ್ ಶೂವ್‌ನ ಕಳಚಿ ಪುಟ್ ಪಾತ್ ಮ್ಯಾಲೆ ಬೀಸಾಕಿತ್, ಹಂಗೆ ಅಲ್ಲೇ ಎದುರುಗಡೆ ಇದ್ದ ಗಣಪತಿ ದೇವಸ್ಥಾನದ ಕಾಂಪೌಂಡ್‌ದಾಟಿ ಹೋಗಿ ಆ ಗಣೇಶ ದೇವ್ರುಗೆ ಅಡ್ಡ ಬಿದ್ದ್ ಸಾಷ್ಟಾಂಗ ನಮಸ್ಕಾರ ಮಾಡ್ತ್. ಮತ್ತೆ ಅಲ್ಲೇ ಪಕ್ಕದಲ್ಲಿದ್ದ ನಲ್ಲಿಂದ ಬೊಗಸೆ ಹಿಡ್ದ್ 2 litre ನೀರ್‌ನ ಕುಡ್ತ್. ಆಮ್ಯಾಲೆ ಸಮಾದಾನ್‌ಲಿ ದೇವಸ್ಥಾನದ ಒಳಕ್ಕೆ ಎದ್‌ಬಂದ್ ಆ ದೇವರ ಮುಂದೆ ಆರಾಂ ಆಗಿ 2ಗಂಟೆ ಕಾಲ ಕುದ್ದ್‌ಕಂಡ್ ಕಾಲಕಳ್ತ್. ಆಗ ಅಂವಂಗೆ ಸ್ವಲ್ಪ ಹೊಟ್ಟೆ ಹಸಿವುನ ಅರಿವು ಆತ್. ಹಂಗೆ ಇನ್ ಮುಂದೆನ ಕೆಲ್ಸ ಎಂತದು ಮಾಡ್ದುತಾ ಗ್ಯಾನ ಮಾಡಿಕಂಡ್ ಅಲ್ಲೇ ಎದುರುಗಡೆಯ ಪೌಂಟ್‌ನ್ ವ್ಯೂವ್ ಹೊಟೇಲ್ ಒಳಗೆ ನುಗ್ಗಿತ್. ಈಗ ಮನ್ಸಿಗೆ ಸಮದಾನ ಆಗುವಂತಹ ಒಂದ್ ಗಲಾಟೆ ಇಲ್ಲದ ಜಾಗಲಿ ಕೂರಿಕೆ ಕಣ್ಣಾಡಿಸಿ ಹೋಗಿ ಒಳಗೆ ಒಂದು ಮೂಲೆ ಟೇಬಲ್‌ನ ಮುಂದೆ ಕುದ್ದ್ ಕಂಡತ್. ಅಲ್ಲಿಗೆ ಬಂದ ಸಪ್ಲೈರ್‌ಗೆ ಒಂದ್ ಕಪ್ ಸ್ಟ್ರಾಂಗ್ ಕಾಫಿಗೆ ಆರ್ಡರ್ ಕೊಟ್ಟ್ ಒಂದ್ ಸಿಗರೇಟಿಗೆ ಬೆಂಕಿತಗುಲಿಸಿ ಅಲ್ಲೇ ಎದುರು ಗಡೆ ಟೇಬಲ್‌ಲಿ ಕುದ್ದಿದ್ದ ಒಂದು ಗುಂಪು ಫ್ರೆಂಡ್ಸ್‌ಗಳ ಅರಚಾಟನ ನೋಡಿ ಕಂಡ್ ಕುದ್ದತ್. ಆ ನಾಲ್ಕ್ ಜನ ಹುಡುಗರ ಆಟ ಎಂತದ್‌ತೇಳ್ರೆ ಅವೆಲ್ಲಾ ಸೇರಿ ಅಲ್ಲಿ ತಿಂದಿದ್ದ ತಿಂಡಿಯ ಬಿಲ್‌ನ ಈಗ ಯಾರು ಕೊಡ್ದುತಾ ವಾದ ಹುಟ್ಟಿಕಂಡಿತ್. ಅದ್ ಸ್ವಲ್ಪ ಜೋರಾಗಿ ಸ್ವಲ್ಪ ತಳ್ಳಾಟ ನೂಕಾಟ ನಡ್ತ್. ಅಷ್ಟೊತ್ತಿಗೆ ಅವರಲ್ಲೊಬ್ಬ ಒಂದ್ ಐಡಿಯಾನ ಹೇಳಿ

ಕೊಡ್ತ್. ಅದ್ ಏನ್ ತ್ತೇಳ್ರೆ ಒಬ್ಬನ ತೋಳುನ ಇನ್ನೊಬ್ಬ ಹಿಡ್ದ್ ಬೊಗ್ಗಿ ಮೇಜಿಗೆ ತಗಲುಸುದು. ಅದ್ಕ್ಕೆ ಆ ನಾಲ್ಕು ಜನರಲ್ಲಿ ಇಬ್ಬರು ಬಲಾಡ್ಯರು ಮುಂದೆ ಬಂದೊ. ಅವಿಬ್ಬರೂ ಎದುರು ಬದುರು ಕುದ್ದ್‌ಕಂಡ್ ಮೊಣಕ್ಕೈ ಮೂಳೆನ ಮೇಜಿನ ಮೇಲೆ ಊರ್‍ದ್ದೊ ಅಂಗ್ಯೆಯಿಂದ ಪರಸ್ಪರ ಹಿಡ್‌ಕಂಡೊ ಈಗ ಸ್ಟಾರ್ಟ್ ತ್ತೇಳಿಕಾಕನ ಈ ಇಬ್ಬರು ಶ್ಯಾಮ ಮತ್ತೆ ಬಾಲುತ್ತೇಳುವ್ರು ಪರಸ್ಪರ ಬಲಕೊಟ್ಟ್ ಹಿಡ್‌ಕಂಡ್ ತಳ್ಳಿಕೆ ಶುರು ಮಾಡ್ದೊ. ಹಂಗೇ ಇಬ್ಬರೂ ಹೆಚ್ಚ್‌ಹೆಚ್ಚ್ ಶಕ್ತಿಕೊಟ್ಟ್‌ಕಂಡ್ ತೊಳುನ ಹಿಂದಕ್ಕೆ ಬಾಗಿಸಿಕ್ಕೆ ಪ್ರಯತ್ನಿಸಿದೊ, ಕೊನೆಗೆ ಶ್ಯಾಮತ್ತೇಳುವ ಸ್ವಲ್ಪ ದಡೂತಿ, ರೌಡಿತರ ಇದ್ದಂವ ಅಂವಂದೇ ಶಕ್ತಿ ಹೆಚ್ಚಾತ್, ಬಾಲುನ ಹಸ್ತನ ಗಟ್ಟಿಯಾಗಿ ಹಿಡ್‌ದ್ ಅಮುಖಿ ಹಿಡ್ದ್ ನೋವು ಮಾಡಿ ಹಂಗೇ ನಿಧಾನಕ್ಕೆ ಅವನ ಮೊಣಕ್ಕೆ ತೋಳುನ ಮೇಜಿನ ಮಟ್ಟಕ್ಕೆ ಬೊಗ್ಗಿಸಿ ಬುಟ್ಟತ್. ಶ್ಯಾಮ ಗೆದ್‌ಬುಟ್ಟತ್. ಬಾಲು ಸೋತು ಹೋತ್. ಈಗ ಬಾಲು ಈ ಎಲ್ಲವೂ ತಿಂದ ತಿಂಡಿದ್ ಹಣನ ಕೊಡಕುತ್ತೇಳಿ ಶ್ಯಾಮ ಕಿರುಚಿಕಂಡ್ ಹೇಳ್ತ್. ನೋಡ್ರೋ ನನ್ನ ಶಕ್ತಿನಾ? ಬಕ್ರಗಳಾ? ನೀವು ಬೇಕಾದ್ರೇ ಎಲ್ಲವೂ ಒಬ್ಬೊಬರಾಗಿ ಬನ್ನಿ ನಿಮ್ಮ ಕೈನೆಲ್ಲಾ ಹಿಡ್ದ್ ಒಂದೇ ಕ್ಷಣಕ್ಕೆ ಬೆಂಡ್ ಮಾಡಿ ಬುಟ್ಟನೆ. ಧೈರ್ಯ‌ಇದ್ದರೆ ಬಾಕಿಯವ್ರು ಬನ್ನಿ ನನ್ನ ಇಲ್ಲಿ ಯಾರಾದ್ರೂ ಸೋಲಿಸಿ ಬುಟ್ರೆ ಈ ತಿಂದ ಬಿಲ್‌ನ್ನೊಟ್ಟಿಗೆ 200ರೂಪಾಯಿ ಸೇರ್‍ಸಿ ಕೊಟ್ಟುಬುಟ್ಟನೆ ಹಾಂ. ಬನ್ರೋ ಹೇಡಿಗಳತಾ ಹಂಗ್ಸಿ ಕಂಡ್ ಒಂದ್ ಕೆಟ್ಟನಗೆ ಆಡ್ತ್. ಆಗ ಬಾಲು ಹೇಳ್ತ್ ಹೇಯ್ ನೀನು ಅತೀ ಜಂಭ ಕೊಚ್ಚಿಕಂಬದು ಬ್ಯಾಡ ಗೊತ್ತಾತ? ಬೆಟ್ಟಕ್ಕಿಂತ ದೊಡ್ಡಬೆಟ್ಟಂಗ ತುಂಬಾ ಇದ್ದದೆ. ಆತಾ ನೀನ್ ಸ್ವಲ್ಪ ಬಾಯಿ ಮುಚ್ಚಿಕಾ. ಅಷ್ಟೊಂದ್ ಆಹಂಕಾರ ಆಡ್ದುಬ್ಯಾಡ ಮಗನೇ ತಾ ಹೇಳ್ತ್. ಹಾಂ! ಸರಿಕಣ ಅದ್ಯಾರಿದ್ದಾರೊ ಅಂತಹ ನನಗಿಂತ ದೊಡ್ಡ ದೊಡ್ಡ ಕುಂದ್ ಬೆಟ್ಟಂಗ? ಧಮ್ ಇದ್ದರೆ ತೊರ್‍ಸ್! ಅವೆಲ್ಲಾ ನನ್ನ ಎದ್‌ರ್ ಬರೀ ಕುನ್ನಿಗ ಅಷ್ಟೇತಾ ಸವಾಲು ಎಸ್ತತ್. ಈ ಸವಾಲ್‌ನ ಕೇಳಿ ಈ ಮೂರುಜನ ಸ್ನೇಹಿತರಿಗೆ ಅವಮಾನ ಆತ್. ಈ ಶ್ಯಾಮನ ಸೊಕ್ಕುಮುರಿವ್ರು ಯಾರೂ ಇಲ್ಲೆಲಪ್ಪಾತ ಬೇಜಾರ್ ಮಾಡಿಕಂಡೊ. ಆಗ ಎದುರುಗಡೆ ಅಷ್ಟೊತ್‌ಂದ ತಮ್ಮ ಎದುರುಗಡೇ ಕುದ್‌ಕಂಡ್ ಅವನ ಪಾಡಿಗೆ ಅಂವ ಕಾಫಿ ಕುಡಿಯುತಿದ್ದ ಈ ರಾಜುನ ನೋಡ್ತ್. ಒಳ್ಳೆ ಕಟ್ಟ್ ಮಸ್ತಾದ ಹೈದ, ಇಂವನ ಕೈಯಿಂದ ನಮ್ಮ ಶ್ಯಾಮನ ಸೊಕ್ಕು ಮುರ್‍ಸಕ್ಕುತಾ ಬಾಲು ಗೇನ ಮಾಡಿ, ಮೆಲ್ಲೆ ಅಲ್ಲಿಂದ ಎದ್ದ್ ಬಂದ್ ರಾಜುನ ಹತ್ರಕೆ ಬಾತ್. ಮೆತ್ತಂಗೆ ಅಂವನ ಕೆಮಿ ಹತ್ರ ಹೇಳ್ತ್. ನೋಡಿ ಸಾರ್ ನಮ್ಮ ಈ ದಾಂಡಿಗ ಬಹಳ ಅಹಂಕಾರಿ ಅವನ ಸೊಕ್ಕ್‌ನ ನೀವು ಖಂಡಿತ ಮುರಿಯುವರಿತ್ತೇಳುವ ವಿಶ್ವಾಸ ಉಟ್ಟು ಅಂವನ ಸೊಕ್ಕ್‌ನ ನೀವು ಅಡಗಿಸಿರೆ ಅಂವನ ಕೈಯಿಂದ 200 ರೂಪಾಯಿ ಅಲ್ಲದೆ ಅದರ ಮ್ಯಾಲೆ ನಾವು ಕೂಡಾ ನೂರು ರೂಪಾಯಿ ಹೆಚ್ಚಿಗೆ ಕೊಟ್ಟವೆ. ನೀವು ಒಂದ್ ಸಮಯ ಈ ಪಂಥಲಿ ಸೋತು ಹೋದ್ರೆ ಬೇಜಾರು ಪಡ್ದುಬೇಡ. ಒಂದು ಸಾರಿ ಸುಮ್ಮನೆ ಪ್ರಯತ್ನ ಪಡಿ ಸಾರ್ ಪ್ಲೀಸ್ ನಮ್ಮ ಮರ್ಯಾದೆನ ಉಳ್ಸಿ ಸಾರ್‌ತಾ ಕೇಳಿಕಂಡತ್.

(ಮುಂದ್‌ವರ್ದದೆ)

ಶಂಕರನ ಮುತ್ತಪ್ಪ ಬಸಪ್ಪ

"ಪ್ರೀತಿಯ ಸಂಗಾತಿಗೆ"

ಸಪ್ತ ಸಾಗರನ ದಾಟಿ ಸಂಜೀವಿನಿ ತರಲೆ
ನಾನು ಹನುಮಂತನಲ್ಲ
ಏಳು ಸುತ್ತಿನ ಕೋಟೆಗೆ ಲಗ್ಗೆ ಹಾಕಿ
ದೋಚಿತರಲು ನಾನು ಅಲೆಗ್ಸಾಂಡರ್‌ನಲ್ಲ

ಪುಟ ಪುಟಗಳನ್ನು ತುಂಬಿಸಿ ಪ್ರೇಮ
ಕಾವ್ಯಾಭಿಷೇಕ ಮಾಡಲು ನಾನು ಕವಿ ಕಾಳಿದಾಸನಲ್ಲ
ನಿನ್ನ ಪುತ್ತಳಿಕೆಯೊಂದನ್ನು ಕೆತ್ತಿ ಪಡೆಯಲು
ನಾನು ಅಮರ ಶಿಲ್ಪ ಜಕಣಾಚಾರಿಯಲ್ಲ

ಸುಖದ ಸುಪ್ಪತಿಗೆಯಲ್ಲಿ ನೂರಜಾನ್‌ಳನ್ನು ಮೈ
ಮರೆಸಿ ರಮಿಸಿದಂತೆ ರಮಿಸಲು ನಾನು ಜಹಾಂಗೀರ್‌ನಲ್ಲ
ನಿನಗಾಗಿ ನೀನು ಮೆಚ್ಚಿದ ಒಂದು
ಕೊಡಗು ಸಂಗಾತಿಯನ್ನು ತಂದು ಕೊಡಬಲ್ಲ
ನಿನ್ನ ಪ್ರೀತಿಯ ಅಭಿಮಾನಿ

ನಡುವಟ್ಟಿರ ಪ್ರಕಾಶ್ ಪೊನ್ನಪ್ಪ
ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು.

ಪೋಕ್ರಿ ಪುಟ್ಟು

ನಮ್ಮೂರ್ ಚಂಬೆ ಗೂಡೆ,
ಬಸ್ ಇಳ್ದ್, ಕೈಲಿ ಕೊಡೆ,
ಹಿಡ್ಕಂಡ್ ನಡೆ
ತಾವುಟ್ಟು ಸೀನಿಯರ್ ಕಾಲೇಜ್ ಕಡೆ ||
ಕಾಲೇಜ್ ಹೈದ ಪೋಕ್ರಿ ಪುಟ್ಟು,
ಕೀಲಾಡಿ ಮಾಡಿಕಂಡ್ ಹಿಂದೇನೇ ಬರ್‍ತಾವುಟ್ಟು.
ಇದ್ನ ಕಂಡ್ ಚಂಬೆಗೆ ಬಾತ್ ಸಿಟ್ಟು,
ಬಿಚ್ಚಿಕೆ ಸುರುಮಾಡ್ತ್ ಕಾಲಿಂದ ಬೂಟು ||
ಇದ್ರ ನೋಡಿ ಪುಟಉಟ ಕೇಳ್ತ್, "ಲಾಯ್ಕುಟ್ಟು ಹೊಸ ಚಪ್ಪಲಿ
ಇದ್ರ ಎಲ್ಲಿಂದ ತಕಂಡ್ರಿ ತ,
ಚಂಬೆ ಬುಸ್‌ಗುಟ್ಟಿಕಂಡ್ ಹೇಳ್ತ್
"ಇದರ್ಲೆ ಬಿಚ್ಚಿ ಕೊಡ್ಲ'ತ ||
ಮೆಲ್ಲೆ ನೆಗಾಡಿಕಂಡ್ ಹೇಳ್ತ್ ಕಿಲಾಡಿ
ಪುಟ್ಟು, "ಚಪ್ಪಲಿಗಿಂತ ಲಾಯ್ಕುಟ್ಟು ನಿಮ್ಮ ಮಿಡ್ಡಿ
ಅದರ್ಲೇ ಬಿಚ್ಚಿ ಕೊಡಿ"
ಪಾಪ ಆಗ ಚಂಬೆನ ಮುಖ ಹೆಂಗಾಗಿರ್ದು ತ ಗ್ಯಾನ ಮಾಡಿ

ಗೋವಿಂದಮ್ಮನ ಪ್ರವೀಣಕುಮಾರ್, ಬೆಂಗಳೂರು.

ಊಟ ತನ್ನಿಚ್ಚೆ ನೋಟ ಪರರಿಚ್ಚೆ

ನಾನು ಮತ್ತು ಸೆಕೆಂಡ್ ಸಾಟರ್ಡೆ ಹಾಸ್ಯ

ಇದೇನಪ್ಪ ಎರಡನೇ ಶನಿವಾರ ಅಂದ್ರೆ ಪ್ರತಿ ತಿಂಗಳು ಬರುತ್ತೇ ಅಂತ ಅನ್ತೀರಾ? ನಿಜವೇ, ಆದರೆ ಅದರ ಪ್ರಾಮುಖ್ಯತೆ ಬಹಳ ನನಗಂತೂ ಸೆಕೆಂಡ್ ಸಾಟರ್ಡೆ ಬಂದರೆ ಎಲ್ಲಿ ಹೋಗೋಣ ಅಂತ ಪ್ರೋಗ್ರಾಂ ಫಿಕ್ಸ್ ಮಾಡುವುದರಲ್ಲೇ ಇನ್ನೊಂದು ತಿಂಗಳ ಸೆಕೆಂಡ್ ಸಾಟ್ರಡೆ ಬಂದೆ ಬಿಡುತ್ತದೆ. ಹಾಗೂ ಹೀಗೂ ಈ ಶನಿವಾರದ ಕಾರ್ಯಕ್ರಮ ನಿಶ್ಚಯಿಸಿ ಬಿಟ್ಟೆ. ಅದೇನಿಲ್ಲ, ಸ್ನೇಹೀತೆಯನ್ನು ಭೇಟಿ ಮಾಡುವುದು ಮತ್ತು ದೇವಸ್ಥಾನಕ್ಕೆ ನನ್ನ ಭೇಟಿ ನೀಡಿ ದೇವರಿಗೆ 'ಹಾಯ್' ಹೇಳಿ ಯುಗಾದಿಯ ಗಿಫ್ಟ್ ಕೇಳುವುದು. ಎಲ್ಲಿ ಗಿಫ್ಟ್ ಅಂತ ಯಾಕೆ ಹೇಳುತ್ತೇ ನೆಂದರೆ 'ಗಿಫ್ಟ್' ಎನ್ನುವುದನ್ನು ಯಾವುದೇ ಪ್ರತಿಫಲ ಅಪೇಕ್ಷಿಸದೆ ಇನ್ನೊಬ್ಬರಿಗೆ ನೀಡಲಾಗುತ್ತದೆ. ಇಲ್ಲಿ ನನ್ನ ದೇವರು ನನ್ನಿಂದ ಯಾವ ಕಾಣಿಕೆಯನ್ನು ಅಪೇಕ್ಷಿಸದಿರಬೇಕು, ಎಲ್ಲಾದರೂ ಕಾಣಿಕೆ ಅಪೇಕ್ಷಿಸಿದರೇ ಕೂಡಲೇ ಹೇವರಿಗೆ 'ಬಾಯ್" ಹೇಳುವುದೆಂದು ನಿರ್ಧರಿಸಿದೆ. ಆಯ್ತು, ಇನ್ನು ಯಾವ ದೇವಸ್ಥಾನಕ್ಕೆ ಹೋಗೋಣ, ಯಾವ 'ವರ' ಕೇಳೋಣವೆಂದು ಪಟ್ಟಿ ಮಾಡಿದೆ. ಅಂತು ಕೊನೆಗೆ ಒಂದು ದೇವಸ್ಥಾನವನ್ನು ಆರಿಸಿದೆ. ಗರ್ಭ ಗುಡಿಯಲ್ಲಿಯ ದೇವರು ಸಹ ಆ ದೇವಸ್ಥಾನಕ್ಕೆ ಮುಖ್ಯ ತಾನೇ? ಹೆಣ್ಣು ದೇವರಾದರೆ ಒಳ್ಳೆಯದು ಮತ್ತು ಆಕೆಗೂ ನನಗೂ ಸ್ವಲ್ಪ ನಂಟು ತಾನೇ, ಸಮಯ ಸಂದರ್ಭ ಅರಿತು ಕೊಂಡಾಳು, ಸರಿ, ಗಂಜಾಂನ ಶ್ರೀ ನಿಮಿಷಾಂಬ ದೇವಿಯ ಸನ್ನಿಧಿಗೆ ಹೋಗುವುದೆಂದು ಕೊನೆಯ ನಿರ್ಧಾರ ತಾಳಿದೆ.

ನಾಳೆ ಬೆಳಿಗ್ಗೆ 7 ಗಂಟೆಗೆ ಬಸ್ ನಿಲ್ದಾಣಕ್ಕೆ ಬರಬೇಕೆಂದು ನನ್ನ ಗೆಳತಿಗೆ ತಿಳಿಸಿದೆ. ಮಾರನೇ ದಿನ ಮುಂಜಾನೆ ಎದ್ದು ಸ್ನಾನ ಮುಗಿಸಿ ಬರಿ ಕೈಯಲ್ಲಿ ಬಸ್ ನಿಲ್ದಾಣಕ್ಕೆ ಹೋದೆ (ಪರ್ಸ್ ಇದ್ದರೆ ತೊಂದರೆ ತಾನೇ). ನನ್ನ ಸ್ನೇಹಿತೆ ಬಂದೇ ಬಿಟ್ಟಳು 'ಯಮಧೂತ'ದಲ್ಲಿ ಸರಿ ನಾನು ಹತ್ತಿ ಕುಳಿತೆ. ನನ್ನಲ್ಲಿ ಆ ಕ್ಷಣಕ್ಕೆ ನಾವು ದೇವಸ್ಥಾನಕ್ಕೆ ಹೊರಟಿದ್ದೇವೋ ಅಥವಾ ಯಾವುದಾದರು 'ಟ್ರೆಕ್ಕಿಂಗ್' ಹೊರಟಿದ್ದೇವೋ ಅಂತ ಸ್ವಲ್ಪ ದಿಗಿಲಾಯಿತು. ತಕ್ಷಣ ನಾನು ಬರಿ ಕೈಯಲ್ಲಿ ಇದ್ದುದರ ನೆನಪಾಗಿ ನಾವು ಹೊರಟಿದ್ದು ದೇವಸ್ಥಾನಕ್ಕೆಂದು ಖಾತರಿ ಪಡಿಸಿಕೊಂಡೆ. (ಯಾಕೆಂದರೆ ಕೆಲವು ಸ್ಥಳಗಳಿಗೆ ಬರಿಕೈಯಲ್ಲಿದ್ರು ಪ್ರವೇಶ ಇರುತ್ತದೆ) ಹೀಗೆ 7 ಗಂಟೆಗೆ ನನ್ನ ಮತ್ತು ಆಕೆಯ ಪ್ರಯಾಣ ಮೈಸೂರು. ಬೆಂಗಳೂರು ರಸ್ತೆಯಲ್ಲಿ 'ಯಮ'ನಲ್ಲಿ ಕುಳಿತು ಸಾಗಿತು. 'ಯಮ ನಮ್ಮನ್ನು ಎಲ್ಲಿಗೆ ಕೊಂಡೊಯ್ಯುತ್ತಾನೆ ಯೆಂದು ನಿಮಗೆಲ್ಲಾ ಗೊತ್ತು ತಾನೇ?. ಮೈಸೂರಿನಿಂದ 5ಕಿ.ಮಿ. ದೂರ ಸಾಗಿದೆವಷ್ಟೆ 'ಯಮ'ನಮ್ಮನ್ನು ಹೊತ್ತು ಮುಂದಿದ್ದ ಮೇಘದೂತನನ್ನು ಹಿಂದೆ ಹಾಕಿ 80ಕಿ.ಮಿ. ವೇಗದಲ್ಲಿ ಸಾಗಿಯೇ ಬಿಟ್ಟ. ಇನ್ನು ಹೇಳ ಬೇಕೇ ಹಿಂದೆ ಬರುತ್ತಿದ್ದ 'ಮಾರುತಿ'ಗೆ ಕೋಪ ಬಂತು. ನಾನೇನು ಇವರಿ ಗಿಂತ ವೇಗದಲ್ಲಿ ಕಡಿಮೆ ಇಲ್ಲ ಎನ್ನುತ್ತಾ, ಕಿರುಚುತ್ತಾ ನಮ್ಮನ್ನು ಹಿಂದಕ್ಕೆ ಹಾಕಿ ಮುಂದೆ ಹಾರಿ ಹೋದ. ನನ್ನ ಸ್ನೇಹಿತೆಗೆ ಕೋಪ ಬಂತು. ನಮ್ಮ 'ಯಮ' ಏನೂ ಕಮ್ಮಿ ಇಲ್ಲ ಎನ್ನುತ್ತಾ ಅವನಿಗೆ ಓಡಲು ಪ್ರೋತ್ಸಾಹ ನೀಡಿದಳು. ಇವರ ಸ್ಪರ್ಧೆಗೆ ಹೆದರಿ ನಾನು ಗಟ್ಟಿ ಕುಳಿತು ಕಣ್ಣು ಮುಚ್ಚಿ ದೇವಿಯನ್ನು ಪ್ರಾರ್ಥಿಸಿದೆ.'ನಿನಗೆ ನನ್ನ ದರುಶನವಾಗಬೇಕಾದ್ರೆ ಯಾವುದೇ ಅಪಾವು ನಮಗಾಗದೆ ನಿನ್ನಲ್ಲಿಗೆ ಕರೆಸಿಕೋ, ಇಲ್ಲಾಂದ್ರೆ ನಾನು ನಿನ್ನ ಜೊತೆ "ಟು' ಬಿಡ್ತೀನಿ. ಕಣ್ಣು ತೆರೆದಿದ್ದೆ ತಡ ಯಮ ಅತ್ತಿತ್ತ ಓಲಾಡುತ್ತಿದ್ದ. ತಕ್ಷಣ ನನಗೆ 'ಸತ್ಯವಾನ'ನ ನೆನಪಾಯ್ತು.

ಥೂ! ಇವಳೊಂದಿಗೆ ಬರದೆ ಸತ್ಯವಾನನೊಂದಿಗೆ ಬಂದಿದ್ದರೆ ನನ್ನ ಪ್ರಾಣ ಹೋದರೂ ವಾಪಾಸ್ಸು ತಂದು ಕೊಡುತ್ತಿದ್ದ. ಯಾಕೆಂದರೆ ಹಿಂದಿನ ಯುಗದಲ್ಲಿ ಸತ್ಯವಾನನ ಜೀವವನ್ನು ಯಮನಿಂದ ಮರು ಪಡೆದವಳಲ್ವಾ ನಾನು. ಆದ್ದರಿಂದ ಈ ಯುಗದಲ್ಲಿ ಸಾವಿತ್ರಿಯ ಜೀವವನ್ನು ಮರು ಪಡೆಯುವಲ್ಲಿ ಈತನ್ಯಾಕೆ ಪ್ರಯತ್ನಿಸಬಾರದು. ಒಂದು ಛಾನ್ಸ್ ಕೊಟ್ಟು ನೋಡ ಬಹುದಿತ್ತು. ಬರೀ ಲೇಡಿಸ್ ಮಾತ್ರ ಸಫರ್ ಆಗಬೇಕಾ? ಅದೂ ಕಲಿಯುಗದಲ್ಲಿ! ಗಂಡಸರಿಗೂ ನಮ್ಮಿಂದಾಗಿ ಕ್ರೆಡಿಟ್ ಬರ್ತಾ ಇತ್ತು ಅಂತ ಅಂದು ಕೊಂಡೆ. ಇಷ್ಟೆಲ್ಲಾ ಯೋಚಿಸುವುದರಲ್ಲಿ ನನ್ನ ಗೆಳತಿ 'ಸಾವಿತ್ರಿ ಹೆದರಿಕೊಂಡಿಯೇನೆ?' ಅಂದಳು ನಾನು ಮೊದಲೇ ಕೋಪಿಷ್ಠೆ. ಬಾಯಿ ತೆರೆದ್ರೆ ಕಷ್ಟಾಂತ ಅಂದು ಸುಮ್ಮನ್ನಾದೆ. ಯಾಕೆಂದರೆ ನನ್ನ ಇವತ್ತಿನ ಮುಖ್ಯ ಉದ್ದೇಶ ದೇವಿಯಲ್ಲಿ ಯುಗಾದಿಯ ಗಿಫ್ಟ್ ಕೇಳುವುದಾಗಿತ್ತು. ಹೇಗೋ ಏನೋ ದೇವಸ್ಥಾನ ತಲುಪಿದೆವು. ದಾರಿಯಲ್ಲಿ ಬಿಕ್ಷುಕರು ಸಾಲಗಿ ಕುಳಿತಿದ್ದರು. ಅವರ ಕಡೆ ತಿರುಗಿ ನೋಡುವ ಸಾಹಸ ಮಾಡಲಿಲ್ಲ. ನನ್ನ ಗೆಳತಿ ಗರ್ಭಗುಡಿಯ ದ್ವಾರದಲ್ಲೇ ದೇವರಿಗೆ ನಮಸ್ಕರಿಸಿ ತನ್ನ ಪ್ಯಾಂಟ್ ಜೇಬಿನಲ್ಲಿದ್ದ ಚಿಲ್ಲರೆಯನ್ನು ಹುಂಡಿಗೆ ಹಾಕಿದಳು. ನಾನು ಸುತ್ತಾ ಮುತ್ತಾ ಹುಡುಕಾಡುವುದನ್ನು ನೋಡಿ ಚಿಲ್ರೆ ಬೇಕೇನೇ? ಎಂದಳು (ಛಿ ಇವಳಾ!) ನಾನು ಚಿಲ್ಲರೆ ಹುಡುಕಾಡ್ತಿಲ್ಲ ನನ್ನ ಚೀಟಿ ಕಳೆದು ಹೋಗಿದೆ ಅಂದೆ. ಅದಕ್ಕವಳು ಮಂಗಳಾರತಿ ಚೀಟಿ ತೆಗೆದುಕೊಂಡೆಯಾ ಎಂದಳು. ಆಗ ನನಗೆ ನಿಜವಾಗಿಯೂ ಕೋಪ ಬಂತು. ದೇವಸ್ಥಾನದಲ್ಲಿ ಮೊದಲ ಮಂಗಳಾರತಿ ಆಕೆಗೆ ಮಾಡಿ ದಢ-ದಢಾಂತ ಮೆಟ್ಟಿಲೇರಿ ಹೋಗಿ ದೇವಿಯ ಮುಂದೆ ಕುಳಿತೆ. ನನ್ನ ಸ್ನೇಹಿತೆ ನನ್ನನ್ನು ಚೆನ್ನಾಗೆ ಅರ್ಥಮಾಡಿಕೊಂಡಿದ್ದರಿಂದ ನನ್ನ ಹಿಂದೆಯೇ ಬಂದು 'ಸಾರಿ' ಕಣೆ 'ಏನಾಯ್ತು?' ಎಂದು ಕೇಳಿದಳು. ನನ್ನ ಕೋಪ ಮಂಜಿನಂತೆ ಕರಗಿ ಅವಳಿಗೆ ಹೇಳಿದೆ ನೋಡೇ ದೇವಿಯಿಂದ ಏನೇನೊ ಗಿಫ್ಟ್ ಕೇಳ ಬೇಕೆಂದು ಲಿಸ್ಟ್ ಮಾಡಿ ತಂದಿದ್ದೆ. ಅದು ದಾರಿಯಲ್ಲಿ ಎಲ್ಲೋ ಕಳೆದು ಹೋಗಿದೆಂತಾ. ಪಾಪ ಅವಳಿಗೂ ತುಂಬಾ ಬೇಸರವಾಯ್ತು ಆಕೆ ದೇವಿಯ ಮೇಲೆ ಸಿಡಿಮಿಡಿಗೊಂಡಳು. ಆಗಲೇ ಹೇಳಬಾರ್ದ ದೇವಿಯ ಹುಂಡಿಗೆ ಒಂದು ಕಾಸು ಹಾಕ್ತಿರಲಿಲ್ಲ, ಅವಳಿಗೆ ಗಿಫ್ಟ್ ಕೊಡಲು ಆಗದಿದ್ರೆ ಆಗಲ್ಲ ಅನ್ನಬಹುದಿತ್ತು. ನಾವು ಬೇರೆ ದೇವರ ಹತ್ತಿರ ಹೋಗ ಬಹುದಿತ್ತು. ನಾನು ಅವಳಿಗೆ ಸಮಧಾನ ಹೇಳಿ ನೋಡೇ ನಾನು ಬೇಕೆಂದೆ ಬರಿ ಕೈಯಲ್ಲಿ ದೇವಸ್ಥಾನಕ್ಕೆ ಬಂದೆ ಅದಕ್ಕೆ ಅವಳಿಗೆ ಕೋಪ ಬಂದಿರಬೇಕು. ಸ್ವಲ್ಪ ಲಂಚ ಅವಳಿಗೆ ಕೊಟ್ಟಿದ್ದಿದ್ದರೆ ನಮ್ಮ ಕೆಲಸ ಆಗುತ್ತಿತ್ತು. ಈಗ ಲಂಚವಿಲ್ಲದೆ ಯಾರು ಕೆಲಸ ಮಾಡ್ತಾರೇ(ಅದೂ ನಮ್ಮ ಜನ, ಈ ದೇಶದಲ್ಲಿ) ಹೋಗಲಿ ಬಿಡು, ನನಗೆ ಕೋಪ ನಿಗ್ರಹಿಸುವ ಶಕ್ತಿ ನೀಡಲಿ ನನ್ನಲ್ಲಿರುವ

13ನೇ ಪುಟಕ್ಕೆ

ಗಾಳಿ ಬೀಡು : (40 ವರ್ಷಗಳ ಹಿಂದಿನ ಬರಹ)

ಹೊರಮಲೆ ನಾಡು ಅಳಿಸಾಯ್ತು ಗಾಳಿ ಬೀಡೆಂದು ಹೆಸರಾಯ್ತು
ಮೂರು ಶತಮಾನಗಳ ಹಿಂದಿನ ಕಾಲ ಅದಾಗಿತ್ತು||
ಅಂದು ಕೊಡಗಿನ ದರ್ಬಾರ್| ದೊಡ್ಡ ವೀರಪ್ಪ ಒಡೆಯನದಾಗಿತ್ತು|
ಹೊರಮಲೆ ನಾಡು ನಂಜರಾಜರ ಆಡಳಿತದಲ್ಲಿತ್ತು||
ಹೊರಮಲೆ ನಾಡು ಮಲೆಬೀಡೇ ಆಗಿತ್ತು.
ಆಕಾಶ ಮುಟ್ಟುವ ಮರಗಳು | ಬೆಳೆದ ಬನ ಅದಾಗಿತ್ತು|
ವನ ಸಂಪತ್ತಿನ ಜೀವಕೋಟಿಗಳು ಅದರಲ್ಲಿತ್ತು.
ಆನೆ, ಕಾಟ, ಕಡವೆಗಳು, | ಹುಲಿ ಚಿರತೆ ಕೆನ್ನಾಯಿಗಳೂ
ನಾನಾ ಜಾತಿಯ ಹಾವುಗಳೂ,|ಕುಕ್ಕುಟ ವರ್ಗದ ಹಕ್ಕಿಗಳು|
ವನದಲಿ, ಆಶ್ರಯ ಪಡೆದಿದ್ದವು||
ಆನೆಯ ಮೇವಿಗೆ ಓಟೆ ಬಿದಿರು,|ಕಾಟಿಕಡವೆಗೆ ಹುಲ್ಲು ಪೊದರು|
ಹುಲಿ ಚಿರತೆಗೆ ಕಾಡಿನ ಹುಲ್ಲೆ| ನಾಡಿನ ಪಶುವೂ ಮೂಲಾಧಾರವೇ ಆಗಿತ್ತು|
ಹೊರಭಾಗವೆಲ್ಲಾ ಇಳಿಜಾರು ಭೂಮಿ ಗೂಂಡಾರಣ್ಯ,| ಒಳಭಾಗವೆಲ್ಲಾ ಕುರುಚಲು ಮರಗಳು,|ಪಚ್ಚೆ ಬೈಲು ಭತ್ತ ಬೆಳೆಯಲು ಸೊಗಸಿತ್ತು.
ರೈತರ ಹಿತ್ಲು, ಕದಳಿ ತೋಟ,|ಕಣಿವೆಗಳೆಲ್ಲಾ ಯಾಲ್ಕಕಿ ತೋಟ
ಇದರೊಳಗಿರುವ ಕಿತ್ತಳೆ ನಿಂಬೆ ನೋಡಲು ಆನಂದವಾಗಿತ್ತು.
ಹಬ್ಬಿದ ಹುಲ್ಲು ಕಣಿವೆಯ ನೀರು ದನಗಳಿಗೆ ಆಶ್ರಯವಾಗಿತ್ತು
ತಲೆ ಎತ್ತಿ ಮೇಯುವ ದನಗಳ ಹಿಂಡನು ಕಾಯಲು ಬಾಲರ ಗುಂಪಿತ್ತು
ಕೊಳಲನ್ನೂದುತ ಬಿಲ್ಲಾಟಾಡುವ ದನ ಕಾಯುವ ಬಾಲರದಾಗಿತ್ತು
ಕಾಲನು ಕೆದಕುತ ಗುಟುರನು ಹಾಕುವ ದನಗಳ ಅಬ್ಬರ ಜೋರಿತ್ತು
ಬಾಲವನೆತ್ತಿ ನೆಗೆನೆಗೆದ್ಹಾರುವ ಗುದ್ದಾಡುವ ತವಕ ಅವಕ್ಕಿತ್ತು
ಕೊಬ್ಬಿದ ದನಗಳ ಹಿಂಡಿನ ಮೇಲೆರಗಲು ವನರಾಜನಿಗೂ ಭಯವಿತ್ತು
ಹಾಲು, ಮೊಸರು, ಬೆಣ್ಣೆ, ತುಪ್ಪ ಕೆರೆಬಾವಿಗಳಂತೆ ತುಂಬಿತ್ತು
ಪರಿ ಪರಿ ವಿಧದ ಭಕ್ಷ್ಯಗಳೆಲ್ಲಾ ಹಾಲು ತುಪ್ಪದಿಂದಲೇ ಕೂಡಿತ್ತು
ಓದಲು ಬರೆಯಲು ಕಲಿಯುವ ತವಕ ರಾಜನವಂಶಕ್ಕೆ ನಿಗವಿತ್ತು
ಲೆಕ್ಕ ಪತ್ರವಾ ಬರೆಯುವ ಅರಮನೆ ಅಧಿಕಾರಿಯವರಿಗೆ ಬೇಕಿತ್ತು
ಓದು ಬರಹ ಕಲಿಸುವ ಪಂಡಿತ ರಾಜರ ಆಜ್ಞೆಯಲಿರುತಿದ್ದರು
ಓದಲು ಬರೆಯಲು ಶಾಲೆಗಳಿಲ್ಲ ಕಲಿಯುವ ತವಕ ಪ್ರಜೆಗಳಿಗಿಲ್ಲ,
ವಿದ್ಯೆಯು ಬಹಳ ಹಿಂದಿತ್ತು
ಕಣ್ಣಲಿ ಕಂಡು ಬಾಯಲ್ಲಿ ಹೇಳಿ ಕಿವಿಯಿಂದ ಕೇಳಿ ತಿನ್ನುವುದನ್ನು ಕಲಿತಿದ್ದರು
ನಡೆಯಲು ಕಾಲು ದುಡಿಯಲು ಕೈಯ್ಯು ನುಡಿಯಲು ಬಾಯಿ ಎಂದೇ ತಿಳಿದಿದ್ದರು
ಸ್ವಾರ್ಥವ ಬಿಟ್ಟು ನಿಸ್ವಾರ್ಥಿಗಳಾಗಿ ಜೀವಿಸಲು ಜನ ಅರಿತಿದ್ದರು
ಜಾತಿಯು ಮತವೆಂಬ ಪೀಡೆಯ ತೊರೆದು ಎಲ್ಲಾ ಮನುಷ್ಯರೆಂದೆ ನಂಬಿದ್ದರು
ಕಷ್ಟ ಸುಖಗಳಲಿ ಭಾಗಿಗಳಾಗಿ ಕೂಡಿ ಬೆರೆಯುವುದು ಕಲಿತಿದ್ದರು
ಕುಡುಕರ ಕೂಟ ಕಳ್ಳರ ಕಾಟ ಇಲ್ಲದ ಕಾಲವದಾಗಿತ್ತು.
ರಾಜನೇ ತಂದೆ, ಪ್ರಜೆಗಳೇ ಮಕ್ಕಳು ತುಂಬಿದ ಕುಟುಂಬದಂತಿತ್ತು
ಪ್ರಜೆಗಳ ಭಕ್ತಿಯ ತಿಳಿದವ ರಾಜ, ಹೊರಮಲೆ ಭಗವತಿ ದೇವಿಗೆ
ಕಲ್ಲಿನ ಗುಡಿಯೊಂದು ಕಟ್ಟಿಸಿದ, ಒಂದೆ ರಾತ್ರಿಲಿ
ಕಟ್ಟದ ಗುಡಿಯೆಂದು ಮಾತಿನ ಮಾಲೆಯು ಇರುತಿಹುದು
ತ್ವರಿತದಿಂದಲೇ ಕೆಲಸವಾದುದು, ನೋಡುವವರ ಮನ ಒಪ್ಪುವುದು
ಉತ್ಸವದಿನದಂದು ರಾಜನು ಮಂತ್ರಿಯು ಕುದುರೆಯ ಮೇಲೆ ಬರುತ್ತಿದ್ದರು
ಪಲ್ಲಕ್ಕಿ ಮೇಲೆ ರಾಜನ ಕೂರಿಸಿ ಮೆರೆಯುವ ಉತ್ಸವ ಅದಾಗಿತ್ತು
ಹೊರಮಲೆ ರಾಜರ ನೆನಪಿನ ಕಾಣಿಕೆ ಭಗವತಿ ಗುಡಿಯೊಂದಿರುತಿಹುದು
ರಾಜರ ನೆನಪಿಗೆ ಕೀರ್ತಿಪತಾಕೆ ಈಗ ಹಾರುತಿಹುದು ಪ್ರತಿ ಉತ್ಸವದಿ
ರಾಜರು ಹೋದರು ದೊರೆಗಳು ಬಂದರು; ಹೊರಮಲೆಗೆ ಕಂಟಕ ಕಾದಿತ್ತು
ಕಾಡನು ನೋಡಿದ ಪೌಲರ್ ಅಲ್ಲೇ ಠಾಣ್ಯವ ಹಾಕಿದರು
ಕಾಫಿ ತೋಟವ ಕೈಗೆತ್ತಿ ಮರ ಕಾಡೆಲ್ಲಾ ಕಡಿದ್ಹಾಕಿದರು
ಕಡಿದ ಕಾಡೆಲ್ಲಾ ಒಣಗಿದ ಮೇಲೆ ಖಾಂಡವ ವನದಂತೆ ದಹಿಸಿದರು
ರಸ್ತೆಯ ಕಡಿದರು ಗುಂಡಿಯ ತೆಗೆದರು ಕಾಫಿಯ ವ್ಯವಸಾಯ ಮಾಡಿದರು
ಕೂಲಿಯ ಜನರ ವಾಸಕ್ಕೆ ಗುಡಿಸಲು, ದೊರೆಗಳ ವಾಸಕ್ಕೆ ಬಂಗ್ಲೆಗಳೂ
ಕಂಡಕಂಡ ಕಡೇ ಬಂಡಿಯ ರಸ್ತೆ ಎಲ್ಲಾ ಮಾಡಿ ಮುಗಿಸಿದರು
ಗಾಳಿಯು ಬೀಸಿತು, ಮಳೆಯು ಹುಯ್ಯಿತು ಗಾಳಿಯ ರಭಸ ಜೋರಾಯ್ತು
ಗಾಳಿಯ ತಡೆಯುವ ಮರಗಳನೆಲ್ಲಾ ಮೊದಲೇ ಬೂದಿ ಮಾಡಿದ್ದರು
ಬೆಂದ ಮಣ್ಣಲಿ ಬೂದಿಯು ಸೇರಿ ಮಳೆಯ ನೀರಲಿ ಕೊಚ್ಕೊಯ್ತು
ಬೀಸುವ ಗಾಳಿಯ ಹೊಡೆತವ ತಡೆಯಲು ಕಾಫಿಗಿಡಕ್ಕೆ ಸೋಲಾಯ್ತು
ರಸಭರಿತ ಮಣ್ಣು ತೊಳೆದ್ಹೋಯ್ತು ಕಾಫಿ ಗಿಡವೆಲ್ಲಾ ಹೊರಟೋಯ್ತು
ಅದು ಬಂಜರು ಭೂಮಿಯೆ ಆಗ್ಹೋಯ್ತು
ಬಡಗ ದಿಕ್ಕಿನ ಗಾಳಿಗೆ ಸಿಕ್ಕಿದ ಗುಡಿಸಿಲುಗಳೆಲ್ಲಾ ತೇಲ್ಹೋಯ್ತು
ಬಂಗ್ಲೆಗಳೆಲ್ಲಾ ತಲೆಕೆಳಗಾಯ್ತು, ದೊರೆಗಳು ಊರಿದ ಠಾಣ್ಯ ಕಿತ್ಹೋಯ್ತು
ಬಂಡಿಯ ರಸ್ತೆ ಮುರುಕಲು ಬಂಗಲೆ ಪಲ್ಪರ್ ಮಿಷಿನುಗಳು ಉಳಿದ್ಹೋಯ್ತು
ಗಾಳಿಗೆ ಹೆದರಿ ಓಡಿದ ದೊರೆಗಳು ಹುಲಿಬೇಟೆಗೆ ಮಾತ್ರ ಬರುತ್ತಿದ್ದರು
ಗಾಳಿ ಬೀಡೆಂದು ಕರೆಕೊಟ್ಟರು. ಹೊರಮಲೆ ಎಂಬುದು ಅಳಿಸ್ಹೋಯ್ತು
ಗಾಳಿಬೀಡೆಂದು ಹೆಸರಾಯ್ತು, ಹೊರಮಲೆ ಭಗವತಿ ಸ್ಥಿರವಾಯ್ತು
ಇದನ್ನು ಬರೆವ ತವಕ ನನಗಾಯ್ತು. ದೊರೆಗಳು ಮಾಡಿದ ನೀತಿಯು ಮುದ್ಹೋಯ್ತು, ಹೊರಮಲೆನಾಡಿನ ಜನರದನ್ನು ಮರೆತಾಯ್ತು

ಮೂಲ : ಯಾಲದಾಳು ದೇವಯ್ಯ,
ಸಂಗ್ರಹ : ಚಂದನ್ ಯಾಲದಾಳು

ನಗೆ ಹನಿ

ಟೀಚರ್ : ನಿನ್ನ ಹೆಸರ್ ಹೆಂಗೆ?
ವಿದ್ಯಾರ್ಥಿ : ನನ್ನ ಹೆಸರ್‌ರ್ ಸೂರ್ಯ ಪ್ರಾಕಾಶತ
ಟೀಚರ್ : ಆದರ್ಶ ಇಂಗ್ಲೀಷ್‌ಲಿ ಹೇಳಂ ನೊಡ್ಲೊ
ವಿದ್ಯಾರ್ಥಿ : ಮೈ ನೇಮಿಸ್ ಸನ್ ಲೈಟ್

* * *

ರೋಗಿ : ಡಾಕ್ಟ್ರೆ ನಾನು ವಿಸ್ಕಿ ಎಂದು ಕೊಂಡು ಪೆಟ್ರೋಲ್ ಕುಡಿದು ಬಿಟ್ಟೆದ್ದೀನಿ.
ಡಾಕ್ಟರ್ : ಏನು ತೊಂದ್ರೆ ಆಯ್ತು?
ರೋಗಿ : ನಾನು ಈಗ ತುಂಬಾ ಓಡ್ತಾ ಇದ್ದೀನಿ ಅನ್ಸುತ್ತೆ
ಡಾಕ್ಟರ್ : ಪೆಟ್ರೋಲ್ ಖಾಲಿ ಆದ ನಂತರ ನೀವಾಗಿಯೇ ನಿಲ್ತೀರ ಬಿಡಿ

ಎತ್ತು ಏರಿಗೆಳೆಯಿತು, ಕೋಣ ನೀರಿಗಿಳಿಯಿತು

ವನಿತಾ ಲೋಕ : ಗೃಹ ಸಂಗಾತಿ

ಹುಳಿ ಪುಡಿ

ಬೇಕಾಗುವ ಸಾಮಾನು : 25 ಟೀ ಚ. ಕೊತ್ತಂಬರಿ ಬೀಜ, 4 ಟೀ ಚ. ಕಡಲೆ ಬೇಳೆ, ½ ಗಿಟಕು ಕೊಬ್ಬರಿ (ತುರಿದು), 2 ಟೀ ಚ. ಉದ್ದಿನ ಬೇಳೆ, 2-3 ತುಂಡು ದಾಲ್ಚಿನ್ನಿ, 200 ಗ್ರಾಂ ಒಣ ಮೆಣಸಿನ ಕಾಯಿ.

ವಿಧಾನ : ಎಲ್ಲಾ ಜೀನಸುಗಳನ್ನು ಬೇರೆ ಬೇರೆಯಾಗಿ ಕೆಂಪಾಗುವಂತೆ ಹುರಿಯಿರಿ. ಕೊಬ್ಬರಿ ತುರಿಯನ್ನು ಬೆಚ್ಚಗಾಗುವಂತೆ ಸ್ವಲ್ಪ ಹುರಿದರೆ ಸಾಕು. ನಂತರ ಎಲ್ಲವನ್ನು ಒಟ್ಟಿಗೆ ಸೇರಿಸಿ ಕುಟ್ಟಿ ಪುಡಿ ಮಾಡಿ.

ಕೂಟಿನ ಪುಡಿ

ಬೇಕಾಗುವ ಸಾಮಾನು : 8-10 ಕರಿಮೆಣಸಿನ ಕಾಳು, 250 ಗ್ರಾಂ ಉದ್ದಿನ ಬೇಳೆ, 10-12 ಒಣ ಮೆಣಸಿನ ಕಾಯಿ, 12-15 ಟೀ ಚ. ಕೊತ್ತಂಬರಿ ಬೀಜ, 12 ಟೀ ಚ. ಕಡಲೆ ಬೇಳೆ, 1 ಗಿಟಕು ಕೊಬ್ಬರಿ (ತುರಿದು)

ವಿಧಾನ : ಕೊಬ್ಬರಿ ಬಿಟ್ಟು ಉಳಿದ ಜೀನಸುಗಳನ್ನು ನಸು ಕೆಂಪಾಗುವಂತೆ ಬೇರೆ ಬೇರೆಯಾಗಿ ಹುರಿಯಿರಿ. ನಂತರ ಅವುಗಳನ್ನು ಒಟ್ಟಿಗೆ ಸೇರಿಸಿ ಕುಟ್ಟಿ ನುಣ್ಣಗೆ ಪುಡಿಮಾಡಿ. ಕೊಬ್ಬರಿ ತುರಿಯನ್ನು ಬೇರೆಯಾಗಿ ಕುಟ್ಟಿ ಅದಕ್ಕೆ ಬೆರಸಿ

ಪಲ್ಯದ ಪುಡಿ

ಬೇಕಾಗುವ ಸಾಮಾನು : 12-15 ಒಣ ಮೆಣಸಿನಕಾಯಿ, 250 ಗ್ರಾಂ ಉದ್ದಿನ ಬೇಳೆ ½ ಟೀ ಚ. ಜೀರಿಗೆ, 225 ಗ್ರಾಂ ಕಡಲೆಬೇಳೆ, 1-2 ಏಲಕ್ಕಿ, 4 ಮರಾಟ ಮೊಗ್ಗು, 1 ಗಿಟಕು ಕೊಬ್ಬರಿ (ತುರಿದು), 4 ಲವಂಗ.

ವಿಧಾನ : ಮರಾಟ ಮೊಗ್ಗು ಹಾಗೂ ಲವಂಗ ಇವುಗಳನ್ನು ಬಿಟ್ಟು ಉಳಿದ ಜೀನಸುಗಳನ್ನು ಬೇರೆ ಬೇರೆಯಾಗಿ ಕಂದು ಬಣ್ಣಕ್ಕೆ ಹುರಿಯಿರಿ. ಕೊಬ್ಬರಿ ತುರಿಗಳನ್ನು ಬಿಟ್ಟು, ಮಿಕ್ಕ ಎಲ್ಲಾ ಜೀನಸುಗಳನ್ನು ಒಟ್ಟಿಗೆ ಕೂಡಿಸಿ ಬೆರಸಿ ಕುಟ್ಟಿ ಪುಡಿ ಮಾಡಿ, ಅವುಗಳು ಸಣ್ಣಗಾಗುತ್ತಿದ್ದಂತೆ ಅದಕ್ಕೆ ಕೊಬ್ಬರಿ ಸೇರಿಸಿ ಮತ್ತೆ ಕುಟ್ಟಿ ಪುಡಿ ಮಾಡಿ.

ಗೊಜ್ಜಿನ ಪುಡಿ

ಬೇಕಾಗುವ ಸಾಮಾನು : 25 ಒಣ ಮೆಣಸಿನ ಕಾಯಿ, 1 ಊ. ಚ. ಜೀರಿಗೆ, 1 ಗಿಟಕು ಕೊಬ್ಬರಿ (ತುರಿದು), 1 ಊ. ಚ. ಮೆಂತೆ, 150 ಗ್ರಾಂ ಬೆಲ್ಲ, 3 ಊ. ಚ. ಎಳ್ಳು, ¾ ಅಂಗುಲ ಗಾತ್ರದಷ್ಟು ಹುಣಸೇಹಣ್ಣು.

ವಿಧಾನ : ಕೊಬ್ಬರಿ, ಹುಣಸೇ ಹಣ್ಣು ಮತ್ತು ಬೆಲ್ಲ ಇವುಗಳನ್ನು ಬಿಟ್ಟು ಉಳಿದ ಜೀನಸುಗಳನ್ನು ಬೇರೆ ಬೇರೆಯನಾಗಿ ಸ್ವಲ್ಪ ಸ್ವಲ್ಪ ಹುರಿದು ಆ ಮೇಲೆ ಅವುಗಳನ್ನು ಒಟ್ಟಿಗೆ ಸೇರಿಸಿ ಅದನ್ನು ಕೊಬ್ಬರಿ, ಹುಣಸೇಹಣ್ಣು ಮತ್ತು ಬೆಲ್ಲ ಇವುಗಳೊಂದಿಗೆ ಮಿಶ್ರಮಾಡಿ, ಬೆರಸಿ ಕುಟ್ಟಿ ಪುಡಿಮಾಡಿ.

ಬೇಕಾದರೆ ಮೇಲೆ ಹೇಳಿದ ಜೀನಸುಗಳ ಜೊತೆಗೆ ಈ ಕೆಳಗಿನವುಗಳಲ್ಲಿ ಕೆಲವನ್ನು ಅಥವಾ ಎಲ್ಲವನ್ನು ಸೇರಿಸಬಹುದು : 12 ಟೀ. ಚ. ಕಡಲೆ ಬೇಳೆ, 12 ಟೀ. ಚ. ಕೊತ್ತಂಬರಿ ಬೀಜ, 10 ಟೀ. ಚ. ಉದ್ದಿನ ಬೇಳೆ, 10 ಟೀ. ಚ ಹುರಿದ ಕಡಲೆಕಾಯಿ ಕಾಳಿನ ಹುಡಿ, 1-2 ತುಂಡು ದಾಲ್ಚಿನ್ನಿ, 2 ಟೀ. ಚ. ಜೀರಿಗೆ, 1 ಟೀ ಚ. ಗಸಗಸೆ, 2-3 ಟೀ ಚ. ಬಿಳಿ ಜಾತಿಯ ಎಳ್ಳು, 1 ಹಿಡಿ ಹುರಿಗಡಲೆಯನ್ನು ಸೇರಿಸಬಹುದು.

ಬಿಸಿ ಬೇಳೆ ಬಾತ್ ಪುಡಿ

ಬೇಕಾಗುವ ಸಾಮಾನು : 250 ಗ್ರಾಂ ಉದ್ದಿನ ಬೇಳೆ, 5 ಲವಂಗ, 250 ಗ್ರಾಂ ಕಡಲೆ ಬೇಳೆ, ½ ಗಿಟಕು ಒಣ ಕೊಬ್ಬರಿ (ತುರಿದು), ಟೀ ಚ. ಮೆಂತೆ, 12 ಒಣ ಮೆಣಸಿನ ಕಾಯಿ, 1 ಟೀ. ಚ. ಜೀರಿಗೆ, 2 ಟೀ. ಚ. ಕೊತ್ತಂಬರಿ ಪುಡಿ, 1 ಟೀ. ಚ. ಕರಿಮೆಣಸಿನ ಕಾಳು, 2 ಚಿಟಿಕೆ ಹಿಂಗು, 4 ಕಡ್ಡಿ ದಾಲ್ಚಿನ್ನಿ.

ವಿಧಾನ : ಹಿಂಗು, ಕೊಬ್ಬರಿ, ಲವಂಗ, ಒಣ ಮೆಣಸಿನ ಕಾಯಿ ಹಾಗೂ ಕೊತ್ತಂಬರಿ ಪುಡಿ ಇವುಗಳನ್ನು ಬಿಟ್ಟು ಉಳಿದ ಸಾಮಾಗ್ರಿಗಳನ್ನು ಕುಟ್ಟಿ ನುಣ್ಣಗೆ ಪುಡಿ ಮಾಡಿ ಅದಕ್ಕೆ ಹಿಂಗು, ಕೊಬ್ಬರಿ, ಲವಂಗ, ಒಣ ಮೆಣಸಿನ ಕಾಯಿ ಮತ್ತು ಕೊತ್ತಂಬರಿ ಇವುಗಳನ್ನು ಹಾಕಿ ಕಲಸಿ ಪುನಃ 5-6 ನಿಮಿಷಗಳ ಕಾಲ ಕುಟ್ಟಿ

ತರಕಾರಿ ಪಲಾವ್ ಮಸಾಲೆ

ವಿಧಾನ : 6 ಲವಂಗ, 1 ಚೂರು ಹಸಿಶುಂಠಿ, ಸ್ವಲ್ಪ ಹಿಂಗು, 2 ತುಂಡು ದಾಲ್ಚಿನ್ನಿ ಸ್ವಲ್ಪ ತೇಜಪತ್ರೆ, 6 ಏಲಕ್ಕಿ, 7-8 ಹಿಳಕು ಬೆಳ್ಳುಳ್ಳಿ, 1 ಈರುಳ್ಳಿ (ಹೆಚ್ಚಿ), ಇವುಗಳನ್ನು ಕುಟ್ಟಿ ಹಾಕಬೇಕು.

ಸಾರಿನ ಮಸಾಲೆ ಪುಡಿ ನಂ. 1

ಬೇಕಾಗುವ ಸಾಮಾನು : 500 ಗ್ರಾಂ ಕೊತ್ತಂಬರಿ ಬೀಜ, 500 ಗ್ರಾಂ ತೊಗರಿ ಬೇಳೆ, 250 ಗ್ರಾಂ ಒಣ ಮೆಣಸಿನ ಕಾಯಿ, 500 ಗ್ರಾಂ ಕಡ್ಲೆ ಬೇಳೆ, 1 ಊ. ಚ. ಮೆಂತೆ, 2 ಊ. ಚ. ಕರಿಮೆಣಸಿನ ಕಾಳು, 4 ಊ. ಚ. ಅರಿಸಿನ ಪುಡಿ, 1-2 ಗರಿ ಕರಿಬೇವಿನ ಎಲೆ.

ವಿಧಾನ : ಮೇಲೆ ಹೇಳಿದ ಎಲ್ಲಾ ಸಾಮಾಗ್ರಿಗಳನ್ನು ಎಣ್ಣೆ ಮುಟ್ಟಿಸದೆ ಹುರಿದು ಆರಿದ ನಂತರ ಪುಡಿಮಾಡಿ ಭರಣಿಯಲ್ಲಿ ಇಟ್ಟು ಕೊಳ್ಳುವುದು.

ಸಾರಿನ ಮಸಾಲೆ ಪುಡಿ ನಂ. 2

ಬೇಕಾಗುವ ಸಾಮಾನು : 250 ಗ್ರಾಂ ತೊಗರಿ ಬೇಳೆ, ½ ಕಪ್ ಜೀರಿಗೆ, 4 ಕಪ್ ಕೊತ್ತಂಬರಿ ಬೀಜ, 225 ಗ್ರಾಂ ಉದ್ದಿನ ಬೇಳೆ, 225 ಗ್ರಾಂ ಕಡ್ಲೆಬೇಳೆ, 2 ಕಪ್ ಖಾರದ ಪುಡಿ, 1 ಟೀ ಚ. ಮೆಂತೆ, 1 ಕಪ್ ಬೆಳ್ತಿಗೆ ಅಕ್ಕಿ, 1ಟೀ ಚ. ಕರಿಮೆಣಸಿನ ಕಾಳು.

20ನೇ ಪುಟಕ್ಕೆ

ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು

ಸಂಗಾತಿ ರಾಶಿ ಫಲ ಮಾರ್ಚ್ 1-15

ಜೋತಿಷರು : ಗಿರೀಶ್‌ಕುಮಾರ್, ಕೊಯನಾಡು

ಮೇಷರಾಶಿ : ದೈವಾನುಕೂಲವಿಲ್ಲ. ಮನಸ್ಸಿಗೆ ಒಂದು ರೀತಿಯ ಚಿಂತೆ ಒದಗುವುದು. ಅನ್ಯ ಜನರ ಕಿವಿಮಾತನ್ನು ದೂರ ಮಾಡಿ. ಯಾವುದೇ ವ್ಯವಹಾರ ಉದ್ಯೋಗ ಮಾಡುವಾಗ ಎಚ್ಚರ ಅಗತ್ಯ. ರಾತ್ರಿ ಕಂಡ ಬಾವಿಗೆ ಹಗಲು ಬೀಳಬೇಡಿ. ಈಶ್ವರನ ಆರಾಧನೆ ಮಾಡಿಕೊಂಡು ಬಂದಲ್ಲಿ ಕ್ಷೇಮಕಾರಕ.

ವೃಷಭ ರಾಶಿ : ದೈವಾನುಕೂಲ ಸೂಕ್ಷ್ಮ ರೀತಿಯಲ್ಲಿರುವುದು. ಜನ್ಮರಾಶಿಯಲ್ಲಿ ಶನಿ ಉಪಟಳದಿಂದ ಕಾರ್ಯಹಾನಿ ಆಗುವ ಸಂಭವ. ಕಷ್ಟ ಸುಖಗಳೆರಡು ನಿಮ್ಮ ಹತ್ತಿರದಲ್ಲಿರುವುದು. ಕುಟುಂಬದ ಹಿರಿಯರಲ್ಲಿ ವೈಮನಸ್ಯ ಮೃತ್ಯುಂಜಯ ಜಪ ಮಾಡಿ ಸುಖ ಪಡೆಯಿರಿ.

ಮಿಥುನ ರಾಶಿ : ದೈವಾನುಕೂಲವಿದೆ. ವ್ಯವಹಾರ ಉದ್ಯೋಗದಲ್ಲಿ ಸ್ವಲ್ಪ ಮೆಟ್ಟಿಗೆ ಜಯವಿದೆ. ಸತಿಪತಿಯಲ್ಲಿ ಸುಖಬೋಗಗಳಿಗೆ ಅಡ್ಡಿ ಆತಂಕಗಳು, ಅವಿವಾಹಿತರಿಗೆ ಲಗ್ನ ಭಾಗ್ಯಗಳು ಕೂಡಿ ಬರಲಿದೆ. ಗುರು ಜಪ ಮಾಡಿಕೊಂಡು ಬನ್ನಿ ಕ್ಷೇಮಕಾರಕ.

ಕಟಕ ರಾಶಿ : ಸರ್ವ ರೀತಿಯ ಸುಖ ಭೋಗಗಳು ನಿಮ್ಮ ಪಾಲಿನದಾಗುತ್ತದೆ. ಹೊಸ ವ್ಯವಹಾರ ಉದ್ಯೋಗ ಮಾಡಲು ಸುಸಂದರ್ಭ. ನಾಗ ಹತ್ಯಾ ದೋಷಗಳಿಗೆ ಸರ್ವದೋಷಗಳಿಗೆ ಸಾನಿಧ್ಯ ಕ್ಷೇತ್ರಗಳಲ್ಲಿ ಪೂಜೆ ಪುರಸ್ಕಾರ ಮಾಡಿ ಕೊಂಡು ಬನ್ನಿ.

ಸಿಂಹ ರಾಶಿ : ಹೊಸ ಭೂಮಿ ಖರೀದಿಸಿ. ವಾಹನ ಖರೀದಿಸಿ. ಇದು ಒಳ್ಳೆಯ ಸಮಯ. ಮನೆಯ ಆರಾಧ್ಯ ದೇವರುಗಳಿಗೆ ಪೂಜೆ ಪುರಸ್ಕಾರ ವಗ್ಯೆರೆ ಮಾಡಿಕೊಂಡು ಬನ್ನಿ. ಗುಪ್ತವಾಗಿ ಯಾವುದೇ ವ್ಯವಹಾರಕ್ಕೆ ಕೈ ಹಾಕಬೇಡಿ. ನವಗ್ರಹ ಆರಾಧನೆ ಮಾಡಿ.

ಕನ್ಯಾರಾಶಿ : ಗುರಹಿರಿಯರ ಅನುಗ್ರಹ ಚೆನ್ನಾಗಿದ್ದು ವಿವಾಹ ಯೋಗ ಭಾಗ್ಯ ಕೂಡಿ ಬರಲಿದೆ. ಸತಿಪತಿಗೂಡಿ ತೀರ್ಥಯಾತ್ರೆ ಹೊರಡುವ ಯೋಗವಿದೆ. ಯಾವುದೇ ರೀತಿಯ ಸತ್ಕಾರಗಳಿಗೆ ಕೊರತೆಇಲ್ಲ. ಸತ್ಯನಾರಾಯಣ ಸ್ವಾಮಿಯನ್ನು ಆರಾಧನೆ ಮಾಡಿಕೊಂಡು ಬನ್ನಿ.

ತುಲಾರಾಶಿ : ಶಿನಿಯು ಗ್ರಹಚಾರದಿಂದ ಮನಸ್ಸಿಗೆ ಮನೋವ್ಯಾಧಿ ಪ್ರತಿನಿತ್ಯ ಸ್ಥಿರವಿಲ್ಲದ ಕೆಲಸಗಳು ಪ್ರತಿಯೊಂದು ವ್ಯವಹಾರದಲ್ಲೂ ಕಷ್ಟನಷ್ಟಗಳು ಮನೆಯಲ್ಲಿ ಅನೇಕರಿಂದ ಹಿಂಸೆ. ಜೀವನ ಹಾನಿ ಮಾಡಿಕೊಳ್ಳಬೇಡಿ. ನಿಮ್ಮ ಧರ್ಮ ನಿಮ್ಮನ್ನು ಅಪಾಯದಿಂದ ಪಾರು ಮಾಡುತ್ತದೆ, ದೇವಿ ಆರಾಧನೆ ಮಾಡಿ.

ವೃಶ್ಚಿಕ ರಾಶಿ : ಇನ್ನಾದರೂ ನಾಗಹತ್ಯಾ ಮಾಡಬೇಡಿ. ಮಾಡಿದ ಹತ್ಯಾಗಳಿಗೆ ಕೂಡಲೇ ದೋಷ ಪರಿಹಾರಮಾಡಿ. ಸುಬ್ರಮಣ್ಯ ನಾಗ ಪ್ರತಿಷ್ಠಪನೆ ಮಾಡಿ ನಾಗ ತಂಬಲಾದಿಗಳನ್ನು ನಡೆಸಿಕೊಂಡು ಬನ್ನಿ. ವಿವಾಹ ಸಂತಾನಾಭಿವೃದ್ಧಿ ಆಗುತ್ತದೆ. ಧನ ಸಂಪಾದನೆ ಕೊರತೆ ಬರಬಾರದು ಸುಬ್ರಹ್ಮಣ್ಯ ಆರಾಧನೆ ಮಾಡಿಕೊಂಡು ಬನ್ನಿ.

ಧನುಸ್ಸುರಾಶಿ : ಹಣ ಕಾಸಿನ ವ್ಯವಹಾರದಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಕೊರತೆಯುಂಟಾದೀತು. ನವಗ್ರಹ ಆರಾಧನೆ ಮಾಡುವುದರಿಂದ ಸುಖ ಶತೃಗಳು ನಿಮ್ಮ ವಶವಾಗುವರು. ಸಂಗ ದೋಷ ಶತ್ರ ಎಂಬಂತೆ ದೂರಮಾಡಿ. ಗಣ ಹೋಮಮಾಡಿ ಸುಖ ಪಡೆಯಿರಿ.

ಮರಪರಾಶಿ : ವ್ಯವಹಾರ ಉದ್ಯೋಗಗಳಲ್ಲಿ ಸ್ವಲ್ಪ ಮಟ್ಟಿನ ಜಯ ಸಾಧಿಸಬಹುದು. ದೇವತಾರಾಧನೆ ಮಾಡಿಕೊಂಡು ಬಂದಲ್ಲಿ ಮನಸ್ಸಿಗೆ ನೆಮ್ಮದಿ. ಮನೆಯ ಆರಾಧನೆ ದೈವಗಳಿಗೆ ಪೂಜೆ ಸಲ್ಲಿಸತಕ್ಕದ್ದು. ಸಕಲ ಸನ್ಮಾನಗಳು ಒದಗಿ ಬರಲಿದೆ. ಪಂಚೇಂದ್ರಿಯಗಳಿಗೆ ಕಡಿವಾಣ ಹಾಕಿ ವ್ಯವಹಾರ ಮಾಡಿ.

ಕುಂಭರಾಶಿ : ಅನೇಕ ರೀತಿಯ ಕಷ್ಟನಷ್ಟಗಳಿಗೆ ಬಲಿ ಆಗುವಿರಿ. ಪ್ರತಿಯೊಂದು ವ್ಯವಹಾರದಲ್ಲಿ ನಷ್ಟ ಸಂಭವಿಸಬಹುದು. ಈಶ್ವರನಿಗೆ ಪೂಜೆ ಸಲ್ಲಿಸಿ ನಿತ್ಯ ಕಲಹದಿಂದ ದೂರವಿರಿ. ಪತ್ನಿಯೊಂದಿಗೆ ನಿತ್ಯ ಕಾದಾಟ ಬೇಡ. ಮನೋವ್ಯಾಧಿಗೆ ಔಷಧಿ ಮಾಡಿ.

ಮೀನರಾಶಿ : ದೈವಾನುಕೂಲವಿರುವಾಗ ಕಣ್ಣು ಮುಚ್ಚಿ ಕೂತಿದ್ದೀರಿ. ಈಗ ಯಾಕೆ ಒದ್ದಾಟ. ಸ್ವಜನರಲ್ಲಿ ವಿರುದ್ಧ ಮಾಡಬೇಡಿ. ಹೆಂಡತಿಯೊಡನೆ ಜಗಳ ಬೇಡ. ಮಕ್ಕಳಿಂದ ಕಿರಿ ಕಿರಿ. ಒಟ್ಟಾರೆ ಮನಸ್ಸಿಗೆ ವ್ಯಾಧಿ ಸಂಶಯವೆಂಬ ಕೆಟ್ಟ ವಸ್ತುವನ್ನು ತ್ಯಜಿಸಿ ಭೋಗ ಸುಖ ನಿಮ್ಮದಾಗುತ್ತದೆ.

10ನೇ ಪುಟದಿಂದ

ಕೋಪದ ತಾಪ ಅವಳಿಗಾಗಲಿ, ಅದನ್ನು ತಡೆದುಕೊಳ್ಳುವ ಮಹಾ ಶಕ್ತಿ ಅವಳಿಗೆದೆ, ನಮಗೆ ತಾಳ್ಮೆ ಸ್ವಭಾವವನ್ನು ಕರುಣಿಸಲಿ ಎಂದು ಪ್ರಾರ್ಥಿಸೋಣ' ಅಂತ ಅಂದೆ. ಅಂತೂ ನಾವು ಲಂಚ ಕೊಡದೆ ಕೆಲಸ ಮಾಡಿಸಿಕೊಳ್ಳಲು ಹೋಗಿದ್ದಕ್ಕೆ ನಮ್ಮ ಬಗ್ಗೆ ನನಗೆ ಹೆಮ್ಮೆಯೆನಿಸಿತ್ತು. ನನ್ನ ಮಾತಿಗೆ ಅವಳು ಸಮ್ಮತಿಸಿದಳು. ಇಬ್ಬರೂ ದೇವರಿಗೆ 'ಬಾಯ್' ಹೇಳಿ ನಮ್ಮೂರಿಗೆ ವಾಪಾಸ್ಸು ಹೊರಟೆವು.

ಹಿಂತಿರುಗುವಾಗ 'ಯಮ'ನಿಗೆ ನಮ್ಮ ಮೇಲೆ ಅಭಿಮಾನ, ಕರುಣೆ ಉಕ್ಕಿ ಬಂದಿರಬೇಕು. ತಾಳ್ಮೆಯಿಂದ ರಾಜಧಾನಿ ರಸ್ತೆಯಲ್ಲಿ ಸಾವಧಾನವಾಗಿ ಓಡುತ್ತಾ ನಮ್ಮ ಮನೆಯನ್ನು ತಲುಪಿಸಿ ನಮ್ಮ ಜೀವವನ್ನು ಯಾವುದೇ ಪ್ರತಿಫಲ ಅಪೇಕ್ಷಿಸದೆ ವಾಪಾಸ್ಸು ಕೊಟ್ಟ. ಆಗಲೇ ರಾತ್ರಿ ಗಂಟೆ ಎಂಟಾಗಿತ್ತು. ರಾತ್ರಿಯ ಅಡುಗೆಗೆ ಕುಕ್ಕರ್ ಜೋಡಿಸುತ್ತಾ ಮುಂದಿನ ಸೆಕೆಂಡ್ ಸಾಟ್ರಡೆ ಎಲ್ಲಿಗೆ ಹೋಗುವುದೆಂದು ಯೋಚಿಸುತ್ತಿದ್ದೇನೆ ಹೊಳೆಯುತ್ತಲೇ ಇಲ್ಲ. ದಯವಿಟ್ಟು ನಿಮಗೇನಾದ್ರೂ ಐಡಿಯ ಇದೆಯಾ? ಖಂಡಿತಾ ತಿಳಿಸಿ. ಬರಿಕೈಯಲ್ಲಿ ಒಬ್ಬಳೇ ಒಂಟಿಯಾಗಿ ಹೋಗುವ ಸ್ಥಳ ಮಾತ್ರ ಬೇಡ. ಯಾಕೆಂದರೆ ನಾನು 'ಯಮ'ನೊಂದಿಗೆ ಹೋಗಲು ರೆಡಿ ಇಲ್ಲ. ಗುಡ್ ಬೈ.

ಕೆದಂಬಾಡಿ ಜಿ. ಶಾಂತಿ , ವಕೀಲರು

ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಹಾಕಿದರಂತೆ

3

ಸರ್ಪ ಗಂಧ



✦ ಕೌಂಡಿನ್ಯ : ಧಾರವಾಹಿ -25

ರೇವತಿ ಭಯದಿಂದ ನಡುಗುತ್ತಿದ್ದಾಳೆ!

ಅವಳ ಮುಖ ಬಿಳುಚಿಕೊಂಡಿದೆ!

ರೂಮಿನ ಬಾಗಿಲು ತೆರೆದುಕೊಂಡಿತು. ಅಜ್ಜಿ, ಶ್ರೀಕಂಠ ಗಾಬರಿಯಿಂದ ಓಡಿ ಬಂದರು.

"ರೇವತಿ...... ಏನಾಯ್ತಮ್ಮ?"

ರೇವತಿ ಬೆವರನ್ನು ಒರೆಸಿಕೊಂಡು ತುಸು ಕಂಪಿಸುವ ಸ್ವರದಲ್ಲಿ "ಯಾರೋ.... ಯಾರೋ ಬಂದಿದ್ದರು!".

ಶ್ರೀಕಂಠ ತಟ್ಟನೆ "ಹಿತ್ತಲಿನ ಬಾಗಿಲು ತೆರೆದಿದೆ, ಅಲ್ಲಿಂದಲೇ ಯಾರೋ ಬಂದಿರ ಬೇಕು."

ಅಜ್ಜಿ ಭಯದಿಂದ "ನಾನು ಅವತ್ತೇ ಹೇಳಿದೆ ನಿನಗೆ ಅಪಾಯ ಇದೆ, ಊರಿಗೆ ಹೋಗಿ ಬಿಡು ಅಂತ ಕೇಳುತ್ತಿಲ್ಲ ನೀನು. ಈಗ ನೋಡು ಈ ಮನೆಯೊಳಗೆ ನುಗ್ಗಿ ಯಾರೋ ನಿನ್ನನ್ನು ಸಾಯಿಸಲು ಪ್ರಯತ್ನಿಸಿದ್ದಾರೆ."

ಶ್ರೀಕಂಠ "ಈ ಮನೆಯ ಹಿತ್ತಲಿನ ಬಾಗಿಲು ಸರಿಯಿಲ್ಲ. ಯಾರು ಬೇಕಾದರು ಸುಲಭವಾಗಿ ನುಗ್ಗಬಹುದು."

ರೇವತಿ "ಯಾರೋ ಪರಿಚಯದವರೇ ಇರಬೇಕು. ಇಲ್ಲದಿದ್ದರೆ ಈ ರೀತಿ ನುಗ್ಗಲು ಸಾಧ್ಯವೇ?"

ಶ್ರೀಕಂಠ "ರೇವತಿಯವರೆ .... ನಿಮ್ಮನ್ನು ಸಾಯಿಸಲು ಹುತ್ತದ ಹತ್ತಿರ ಸಹ ಪ್ರಯತ್ನಿಸಲಾಗಿತ್ತು. ಯಾರಿಗೋ ನೀವು ಈ ಊರಿನಲ್ಲಿ ಇರುವುದರಿಂದ ತೊಂದರೆಯಾಗುತ್ತಿದೆ. ಅದಕ್ಕೆ ನಿಮ್ಮನ್ನು ಯಾವ ರೀತಿಯಿಂದಲಾದರೂ ಮುಗಿಸಲು ಪ್ರಯತ್ನಿಸುತ್ತಿದ್ದಾರೆ. ನೀವು ಊರಿಗೆ ಹೋಗಿ ಬಿಡಿ."

"ಹೌದು ಕಣಮ್ಮ ನಾನು ಈಗಾಗಲೇ ಮೊಮ್ಮಗಳನ್ನು ಕಳೆದುಕೊಂಡಿದ್ದೇನೆ. ಈ ಮನೆಯಲ್ಲಿ ನಿನಗೆ ತೊಂದರೆಯಾಗುವುದನ್ನು ನಾನು ಸಹಿಸಲಾರೆ. ನೀನು ಊರಿಗೆ ಹೋಗಿ ಬಿಡು.

ರೇವತಿ ಅವರಿಬ್ಬರ ಮುಖಗಳನ್ನು ಒಂದು ಸಲ ನೋಡಿದಳು ನಂತರ ದೃಢವಾಗಿ "ನಾಳೆ ಹೊರಡುತ್ತೇನೆ."

ಅವರಿಗೆ ತುಸು ನೆಮ್ಮದಿಯಾಯಿತು.

ಮಾರನೆ ದಿನ ಬೆಳಿಗ್ಗೆ!

ರೇವತಿ ಸ್ನಾನ ಮುಗಿಸಿ ತನ್ನ ಸೂಟ್‌ಕೇಸ್ ಅನ್ನು ಎತ್ತಿಕೊಂಡು ಆ ಮನೆಯಿಂದ ಹೊರಟಳು.

ಶ್ರೀಕಂಠ ಬೇಸರದಿಂದ ನಿಮ್ಮನ್ನು ಬಲವಂತವಾಗಿ ಕಳಿಸುತ್ತಿದ್ದೇವೆ ಅಂತ ತಪ್ಪು ತಿಳಿಯಬೇಡಿ".

ರೇವತಿ ಉತ್ತರಿಸಲಿಲ್ಲ ನಕ್ಕಳು.

ಅಜ್ಜಿಗೆ ಸಹ ದುಃಖವಾಗಿತ್ತು.

ರೇವತಿ ಆ ಮನೆಯ ಎದುರುಗಡೆಯೇ ಇದ್ದ ಈಶ್ವರನ ದೇವಸ್ಥಾನಕ್ಕೆ ಶ್ರೀಕಂಠನ ಜೊತೆ ಬಂದಳು.

ಪೂಜಾರಿ ಅಭಿಷೇಕ ಮಾಡುತ್ತಿದ್ದನು.

ರೇವತಿ ಬಂದಿದ್ದನ್ನು ಕಂಡು ಗರ್ಭ ಗುಡಿಯಿಂದ ಹೊರಗೆ ಬಂದನು.

ಲಗೇಜ್ ಸಮೇತ ಬಂದಿರುವ ರೇವತಿಯನ್ನು ಕಂಡು ಪೂಜಾರಿ ಆಶ್ಚರ್ಯದಿಂದ "ಅರೆ..... ಇದೇನು ಈ ಊರಿನಿಂದಲೇ ಹೊರಟಿರುವ ಹಾಗಿದೆ."

ರೇವತಿ ತಲೆಯಾಡಿಸಿದಳು.

"ದಿಢೀರ್ ನಿರ್ಧಾರಕ್ಕೆ ಕಾರಣವೇನು?"

ಶ್ರೀಕಂಠ ಹಿಂದಿನ ರಾತ್ರಿ ನಡೆದದ್ದನ್ನು ಈಗ ವಿವರವಾಗಿ ಹೇಳಿದನು.

ಪೂಜಾರಿ ಸಹ ಭಯಗೊಂಡನು. ನಂತರ "ಇಷ್ಟೆಲ್ಲಾ ನಡೆಯುತ್ತಿರುವಾಗ ನೀವು ಇಲ್ಲಿರೋದು ಕ್ಷೇಮ ಅಲ್ಲ. ನೀವು ಹೋಗಿ ಬನ್ನಿ ರೇವತಿ".

ರೇವತಿ ದೇವರಿಗೆ ನಮಸ್ಕರಿಸಿದಳು!

"ಈಶ್ವರ ನಿಮಗೆ ಒಳ್ಳೆಯದನ್ನು ಮಾಡಲಿ" ಎಂದು ಹೂವಿನ ಪ್ರಸಾದವನ್ನು ನೀಡಿದನು.

ರೇವತಿ ಮೆಲ್ಲಗೆ "ನಾನು ಹೊರಡುತ್ತಿರುವುದು ನನ್ನ ಗೆಳತಿಯ ಮನೆಯಿಂದ ಮಾತ್ರ!"

ಶ್ರೀಕಂಠ ಬೆಚ್ಚಿಬಿದ್ದನು!

ಪೂಜಾರಿ ಗಾಬರಿಯಿಂದ ನೋಡಿದನು.

ರೇವತಿ ನಗುತ್ತಾ "ನಾನು ಇದೇ ಊರಿನಲ್ಲಿ ಇರುತ್ತೇನೆ. ಬೇರೆ ಕಡೆ ಇದ್ದು ನನ್ನ ಪ್ರಯತ್ನವನ್ನು ಮುಂದುವರಿಸುತ್ತೇನೆ."

ಶ್ರೀಕಂಠ ಗಾಬರಿಯಿಂದ "ನೀವು..... ನೀವು ಯಾಕೆ ಈ ರೀತಿ ಹಟ ಮಾಡುತ್ತಿದ್ದೀರ?"

ರೇವತಿ ತೀಕ್ಷ್ಣವಾಗಿ "ಒಬ್ಬ ಗಂಡಸಾಗಿ ನೀನ್ಯಾಕೆ ಈ ರೀತಿ ಹೆದರಿ ಸಾಯುತ್ತಿದ್ದೀಯ?"

ಶ್ರೀಕಂಠನ ಮುಖ ಕೆಂಪೇರಿತು

ಪೂಜಾರಿ ಗಾಬರಿಯಿಂದ "ರೇವತಿ..... ನೀನು ಈ ಊರಿನಲ್ಲಿ ಬೇರೆ ಎಲ್ಲಿ ಉಳಿದು ಕೊಳ್ಳುತ್ತೀಯ?"

ರೇವತಿ ನಗುತ್ತಾ "ಹೆದರಬೇಡಿ ಪೂಜಾರಿ. ನಾನು ಖಂಡಿತಾ ನಿಮ್ಮ ದೇವಸ್ಥಾನದ ಆಶ್ರಯ ಪಡೆಯೊಲ್ಲ."

ಅವಮಾನದಿಂದ ಮುಖ ಕೆಂಪೇರಿತು.

"ಹಾಗಾದ್ರೆ ನೀವು ಎಲ್ಲಿರುತ್ತೀರ?"

"ಎಡತೊರೆ ಬಂಗಲೆಯಲ್ಲಿ!"

ಅದನ್ನು ಕೇಳಿದ ಕೂಡಲೇ ಅವರಿಬ್ಬರು ಭಯ, ಗಾಬರಿಯಿಂದ ಹೌ ಹಾರಿದರು.

20ನೇ ಪುಟಕ್ಕೆ

ಇಲ್ಲಿಯವರೆಗೆ.........

ರೇವತಿ, ಶ್ರೀಕಂಠ ಮತ್ತು ಪೂಜಾರಿ ನಡೆದಿರುವ ಘಟನೆಗಳ ಬಗ್ಗೆ ಚರ್ಚೆ ಮಾಡುತ್ತಾರೆ. ನಂತರ ರಾತ್ರಿ ರೇವತಿ ಮಲಗಿರುವ ಜಾಗಕ್ಕೆ ಮುಸುಕು ಧರಿಸಿದ್ದ ವ್ಯಕ್ತಿಯೊಬ್ಬ ಬರುತ್ತಾನೆ. ರೇವತಿಗೆ ಎಚ್ಚರವಾಗಿ ಅವಳು ಕಿರುಚಿಕೊಳ್ಳುತ್ತಾಳೆ, ಅಪಾಯದಿಂದ ಪಾರಾಗುತ್ತಾಳೆ

ಮುಂದೆ ಓದಿ..........

ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಯಲ್ಲಿರುವ ಗೌಡರು ಗಂಗಡಿಕಾರರೇ?

ಈ ಲೇಖನವನ್ನು ಬರೆಯುವುದಕ್ಕೆ ನಮ್ಮಲ್ಲಿ ಕೆಲವರು ಕೊಡಗಿನಲ್ಲಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾಸವಾಗಿರುವ "ಗೌಡರು" ಗಂಗಡಿಕಾರ ಒಕ್ಕಲಿಗ ಬುಡಕಟ್ಟಿನವರೆಂದು ಕೆಲವು ಲೇಖನಗಳನ್ನು ಓದಿ ಆಶ್ಚರ್ಯವಾಯಿತು. ಕಾರಣವೇನೆಂದರೆ ಬರೆದ ಲೇಖಕರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಭಾಷೆಯ ಪಾಡ್ದನಗಳ ಆಧಾರದ ಮೇಲೆ ಅಲ್ಲಿನ ಕೆಲವು ಭೂತಗಳನ್ನು ಕಟ್ಟುವ ಕಾಲದಲ್ಲಿ ಹೇಳುವ ಪಾಡ್ದನಗಳಲ್ಲಿ ಆ ಭೂತಗಳು ಐಗೂರು ಸೀಮೆಯಿಂದ ಬಂದವೆಂದೂ ಐಗೂರು ಹಾಸನ ಜಿಲ್ಲೆಯಲ್ಲಿದ್ದು ಅಲ್ಲಿ ಕೆಲವು ಹೆಸರುಗಳನ್ನು ಪಾಡ್ದನದಲ್ಲಿ ಹೇಳುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಗೌಡರು ಬರುವಾಗ ಈ ಭೂತಗಳು ಇವರೊಡನೆ ಬಂದುದರಿಂದ ಗೌಡರು "ಗಂಗಡಿಕಾರರ ಬುಡಕಟ್ಟಿನವರೆಂಬ ಊಹನೆಯಿಂದ ಬರೆದಂತೆ ತೋರುತ್ತದೆ. ಇದು ಸರಿಯಲ್ಲವೆಂಬುದಕ್ಕೆ ಈ ಕೆಳಗಿನ ಕಾರಣಗಳನ್ನು ಕೊಡುತ್ತಿದ್ದೇನೆ.

1) ಒಂದನೆಯದಾಗಿ ತುಳುಪಾಡ್ದನಗಳು ಕರ್ನಾಟಕದ ಇತರ ಭಾಷೆಗಳಲ್ಲಿ ಇರುವಂತೆ ಜನಪದ ಹಾಡುಗಳು. ಈ ಹಾಡುಗಳಲ್ಲಿ ಅಲ್ಲಿನ ಜನರ ಜೀವನದ ವಿಧಿವಿಧಾನಗಳು ಅವರು ಪೂಜಿಸುವ ದೇವರು ಭೂತಗಳ ವಿಷಯವನ್ನು ಜನರ ಬಾಯಿಂದ ಬಾಯಿಗೆ ಹಾಡಿ ತಿಳಿಸುವ ಗೀತೆಗಳು. ತುಳುನಾಡಿನಲ್ಲಿ ಆರಾಧಿಸುವ ಭೂತಗಳು ಬಹುಷ್ಯ ಐಗೂರುಸೀಮೆಯಿಂದ ಬಂದವು. ಆಗಿದ್ದು ತಲೆಮಾರುಗಳಿಂದ ಅವರು ಬಂದಸ್ಥಳದ ಮಹಿಮೆ ಅಲ್ಲಿಯ ಸ್ಥಳಗಳ ಹೆಸರನ್ನೂ ಹೇಳುತ್ತವೆ. ಆದ್ದರಿಂದ ಗೌಡರು ಪೂಜಿಸುವ ಭೂತಗಳು ಹೇಳುವ ಪಾಡ್ದನಗಳಿಂದಾಗಿ ಗೌಡರ ಮೂಲವನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ತುಳು ಪಾಡ್ದನಗಳು ಗೌಡ ಹಾಡುಗಳಲ್ಲ. ಪಾಡ್ದನ ಹೇಳುವವರು ಗೌಡರು. ದಕ್ಷಿಣಕನ್ನಡ ಜಿಲ್ಲೆಗೆ ಬಂದು ನೆಲಸುವುದಕ್ಕೆ ಮೊದಲೇ ಐಗೂರು ಸೀಮೆಯಿಂದ ಬಂದು ತುಳುಭಾಷೆಯನ್ನು ಕಲಿತು ಐಗೂರು ಪ್ರದೇಶದ ಜನರ ಹಾಗೂ ಭೂತಗಳ ಹೆಸರನ್ನು ಜಾತಿಯ ಹೆಸರನ್ನು ಸೇರಿಸಿರಬೇಕು. ಅದೂ ಅಲ್ಲದೆ "ಗೌಡರ" ಭಾಷೆ ಅವರು ದಕ್ಷಿಣ ಕನ್ನಡ ಜಿಲ್ಲೆಗೆ ಬರುವುದಕ್ಕೆ ಮೊದಲು "ಅರೆ ಭಾಷೆಯಾಗಿತ್ತು, ಈ ಅರೆಭಾಷೆ ಯಾಡುವ" ಗೌಡರು ತುಳುಭಾಷೆಯನ್ನಾಡುವ ಜನರೇ ಹೆಚ್ಚಾಗಿ ಆಡುವವರೊಡನೆ ಸೇರಿದಾಗ ತಮ್ಮ ಭಾಷೆಯನ್ನು ಬಿಟ್ಟು ತುಳು ಬಾಷೆಯನ್ನು ಆಡಲು ಪ್ರಾರಂಭಿಸಿದರು. ಆದರೂ ಸುಳ್ಯ ತಾಲೂಕಿನ "ಗೌಡರು ಅರೆಭಾಷೆಯನ್ನೆ ಮುಂದುವರಿಸಿಕೊಂಡು ಬಂದರು. ಅದೇ ರೀತಿ ಕೊಡಗಿನಲ್ಲಿರುವ ಗೌಡರು ಕೊಡವರು ಹೆಚ್ಚಾಗಿರುವ ಸ್ಥಳಕ್ಕೆ ಬಂದಾಗ ಅವರ ಹಿಂದಿನ ಭಾಷೆಯನ್ನು ಬಿಟ್ಟು ಕೊಡಗು ಭಾಷೆಯನ್ನು ಆಡುವುದಕ್ಕೆ ಪ್ರಾರಂಭಿಸಿ ಅವರ ಮನೆಗಳಲ್ಲಿ ಕೊಡಗು ಭಾಷೆಯನ್ನು ಆಡುತ್ತಿದ್ದಾರೆ, ಉದಾಹರಣೆಗೆ ಪಾಡಿನಾಲ್ಕು ನಾಡಿನ ಜೈನೀರ ಮನೆಯವರು, ಕೊಂಬನ ಮನೆಯವರು ಮನೆಯಲ್ಲಿ ಕೊಡಗು ಭಾಷೆಯನ್ನಾಡುತ್ತಿದ್ದಾರೆ.

ಅದೇ ರೀತಿ ನಾಲ್ಕು ನಾಡಿನ ಮರಂದೋಡ ಮುಕ್ಕಾಟಿ ಮನೆಯವರು, ಪುತ್ತೂರು ತಾಲೂಕಿನಿಂದ ಬಂದವರಾದುದರಿಂದ ಬಹಳ ಇತ್ತೀಚಿನವರೆಗೆ ತುಳುಭಾಷೆಯನ್ನಾಡುತ್ತಿದ್ದವರು ಈಗ ಪೂರ್ತಿಯಾಗಿ ಅರೆಭಾಷೆಯನ್ನೇ ಆಡುತ್ತಿದ್ದಾರೆ.

ನರಿಯಂದಡ ಗ್ರಾಮದ ಮಂಞ್ಞಪುರ ಮತ್ತು ತೋಟಂಬೈಲು ಮನೆಯವರು ಒಂದೇ ಮನೆಸ್ಥಾನದವರಾಗಿದ್ದು ಈಗಲೂ ಸಹ ಕೆಲವರು ಅವರವರಲ್ಲಿಯೇ ಮಾತನಾಡುವಾಗ ತುಳುಭಾಷೆಯನ್ನೇ ಉಪಯೋಗಿಸುತ್ತಿದ್ದಾರೆ.

ಆದೂ ಅಲ್ಲದೆ ತುಳು ಭಾಷೆಯ ಹಾಗೂ ತುಳು ನಾಡಿನ ಸಂಸ್ಕೃತಿಯನ್ನು "ಗೌಡರು" ತುಳು ನಾಡಿಗೆ ಬಂದು ನೆಲಸಿದ ಮೇಲೆ ಅಳವಡಿಸಿಕೊಂಡಿದ್ದಾರೆಯೇ ಹೊರತು ಅವರು ತುಳುನಾಡಿಗೆ ಬರುವುದಕ್ಕೆ ಮೊದಲು ಇತ್ತಿಲ್ಲ. ಉದಾಹರಣೆಗೆ "ಗೌಡರು" ಕೊಡಗಿಗೆ ಬಂದ ನಂತರ ಅವರು ಕೊಡಗಿನ ದೇವತೆ ಹಾಗೂ ಭೂತಗಳಾದ ಇಗ್ಗುತಪ್ಪ, ಭಗವತಿ, ಕುಟ್ಟಿಚಾತ, ಮಲೆ ತಮ್ಮಚ, ಚಾಮುಂಡಿ ಮುಂತಾದ ದೇವರುಗಳು ಹಾಗೂ ಭೂತಗಳನ್ನು ದಕ್ಷಿಣ ಕನ್ನಡ ಜಿಲ್ಲೆಯ ತುಳುಮಾತಾಡುವ ಪಂಜುರುಳಿ ಕಲ್ಲುಕುಟ್ಟಿ, ಪಾಷಾಣಮೂರ್ತಿ, ಅಜ್ಜಿಕುಟ್ಟಿ ದೇವತೆಗಳು, ಕೊಲೆ, ಭೂತಗಳು ಮುಂತಾದ ಭೂತಗಳನ್ನು ಆರಾಧಿಸುತ್ತಾರೆ. ಕೊಡವ ಭಾಷೆ ಮಾತನಾಡುವ ಅಜ್ಜಪ್ಪನನ್ನ ಆರಾಧಿಸುತ್ತಾರೆ. ಪಾಲೂರಿನ ಅಮ್ಮನೂರು ದೇವತೆ ಕನ್ನಡವನ್ನು ಮಾತನಾಡುತ್ತಾಳೆ. ವೆಂಕಟರಮಣ ಸ್ವಾಮಿ, ಅವರ ಬಂಟರುಗಳಾದ ಕೆಂಚಿರಾಯ, ಕರಿ ಕೆಂಚಿರಾಯರು ಕನ್ನಡದಲ್ಲೇ ಮಾತನಾಡುತ್ತಾರೆ. ಚಂಡಿ ಚಾಮುಂಡಿ, ಭಗವತಿ ದೇವರುಗಳು ಮಲೆಯಾಳ ಭಾಷೆಯನ್ನು ಆಡುತ್ತವೆ. ಗೌಡರು ಈ ದೇವತೆಗಳನ್ನು ಆರಾಧಿಸುವುದರಿಂದ "ಗೌಡರು" ಮಲೆಯಾಳದಿಂದ ಬಂದವರೆಂದು ಹೇಳಲಿಕ್ಕಾಗುವುದಿಲ್ಲ. ಎರಡನೆಯದಾಗಿ ಗಂಗಡಿಕಾರರ ಬುಡಕಟ್ಟಿನ ಸಂಬಂಧವನ್ನು ಹೇಳುವವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೆಲವು ಜಾತಿಗಳಿಗೆ ಬಳಿಗಳು ಇರುವುದರಿಂದ ಗೌಡರೂ ಬಳಿಗಳನ್ನ ಹೆಸರಿಟ್ಟು ಕೊಂಡಿದ್ದಾರೆ ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಇದು ಸರಿಯಲ್ಲ. ಯಾಕೆಂದರೆ ದಕ್ಷಿಣ ಜಿಲ್ಲೆಯಲ್ಲಿರುವ ಜಾತಿಗಳಲ್ಲದೆ ಉತ್ತರ ಕನ್ನಡ, ಚಿಕ್ಕಮಗಳೂರು ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಕಾಣಸಿಗುವ ಕರೇ ಒಕ್ಕಲಿಗರು ಹಾಲಕ್ಕಿ ಒಕ್ಕಲಿಗರು ದೇವರ ಮಕ್ಕಳು ಗ್ರಾಮ ಒಕ್ಕಲಿಗರು ಸಹ ಬಳಿಗಳನ್ನು ಅಳವಡಿಸಿಕೊಂಡಿದ್ದಾರೆ. ಕರೇ ಒಕ್ಕಲಿಗರಿಗೆ 7 ಬಳಿಗಳಿವೆ. ಬಂಟರಿಗೆ 8 ಬಳಿಗಳಿವೆ, ಬಿಲ್ಲವರಿಗೆ 14 ಬಳಿಗಳಿವೆ. ಗೌಡರಿಗೆ 18 ಬಳಿಗಳಿದ್ದು ಇವರು ದಕ್ಷಿಣ ಕನ್ನಡ ಜಿಲ್ಲೆಗೆ ಬಂದ ಮೇಲೆ ಬಳಿಪದ್ಧತಿ ಬಂತೆಂಬುದು ಸರಿಯಲ್ಲ.

ಆದ್ದರಿಂದ ಒಂದು ಜಾತಿಯ ವಿಷಯವನ್ನು ಬರಿವಾಗ ಆ ಜಾತಿಯ ಚಾರಿತ್ರಿಕ ಆಧಾರದ ಮೇಲೆ ಬರೆಯಬೇಕು. ಬರೇ ಊಹನೆಗಳಿಂದ ಬರೆದರೆ ತಪ್ಪಾಗುತ್ತದೆ. ಮುಗ್ಧ ಜನರಿಗೆ ಇದರಿಂದಾಗಿ ಸಂಶಯ ಉಂಟಾಗುತ್ತದೆ.

ಓದಿ ಓದಿ ಮರುಳಾದ ಕೂಚಂಭಟ್ಟ

ಈಗ ನಾವು "ಗಂಗಡಿಕಾರರ ಪದ್ಧತಿಗಳಿಗೂ ಗೌಡರ ಪದ್ಧತಿಗಳಿಗೂ ಇರುವ ವ್ಯತ್ಯಾಸವನ್ನು ನೋಡೋಣ. ಗಂಗಡಿಕಾರ ಎಂದರೆ ಗಂಗವಾಡಿಕಾರ ಎಂದರ್ಥ. ಅಂದರೆ ಬಹಳ ಹಿಂದೆ ಕೊಡಗಿನ 4ನೇ ಶತಮಾನ ಪೂರ್ವ ಭಾಗದಿಂದ ಹಿಡಿದು ಹಳೇ ಮೈಸೂರಿನ ದಕ್ಷಿಣದಲ್ಲಿ ಗಂಗರು ರಾಜ್ಯಭಾರ ಮಾಡುತ್ತಿದ್ದ ಪ್ರದೇಶಕ್ಕೆ ಗಂಗವಾಡಿ ಎಂದು ಚರಿತ್ರೆಕಾರರು ಕರೆಯುತ್ತಾರೆ. ಅಲ್ಲಿ ವಾಸಮಾಡುತ್ತಿದ್ದ ಒಕ್ಕಲಿಗರನ್ನು ಗಂಗಡಿಕಾರರೆಂದು ಕರೆಯುತ್ತಿದ್ದುದರಿಂದ ಅವರನ್ನು ಗಂಗಡಿಕಾರ ಒಕ್ಕಲಿಗರೆಂದು ಕರೆಯುತ್ತಾರೆ.

ಇವರಿಗೆ 43 ಗೋತ್ರಗಳಿವೆ. ಆದರೆ ದಕ್ಷಿಣ ಕನ್ನಡ ಜಿಲ್ಲೆ ಹಾಗೂ ಕೊಡಗು ಜಿಲ್ಲೆಯಲ್ಲಿರುವ ಗೌಡರಿಗೆ 18 ಗೋತ್ರಗಳಿವೆ. ಗಂಗಡಿಕಾರರಲ್ಲಿ ಮೂರು ಉಪಜಾತಿಗಳಿವೆ. ಅವು ಯಾವುವೆಂದರೆ.

(1) ಪೆಟ್ಟಿಗೆಯವರು (2)ಬುಜ್ಜಣಿಗೆಯವರು (3)ಚೆಲ್ಲೂರು ಗಂಗವಾಡಿಕಾರರೆಂದೂ ಕರೆಯುತ್ತಾರೆ. ಇವರು ಪೂರ್ಣ ಸಸ್ಯಹಾರಿಗಳು. ಅರೆಭಾಷೆ ಗೌಡರು ಹಿಂದ ಸಸ್ಯಹಾರಿಗಳಂತೆ.

ಗಂಗಡಿಕಾರಲ್ಲಿ ಶಿವನನ್ನು ಪೂಜಿಸುವವರನ್ನು ಮುಲಜನರೆಂದು, ವಿಷ್ಣುವನ್ನು ಪೂಜಿಸುವವರನ್ನು ದಾಸಜನ ಎಂಬುದಾಗಿ ಕರೆಯುತ್ತಾರೆ. ಗಂಗಡಿಕಾರರ ಮನೆದೇವರು ಆದಿ ಚುಂಚನಗಿರಿಯ ಬೈರವೇಸ್ವರ "ಗೌಡರ" ಮನೆದೇವರು ತಿರುಪತಿ ವೆಂಕಟರಮಣ ಸ್ವಾಮಿ. ಗಂಗಡಿಕಾರರು ಸತ್ತವರನ್ನು ಹೂಳುತ್ತಾರೆ."ಗೌಡರು" ಸತ್ತವರನ್ನು ಸುಡುತ್ತಾರೆ. ಗೌಡರು ಸತ್ತ ಮಕ್ಕಳನ್ನು ಹೂಳುತ್ತಾರೆ. ಗಂಗಡಿಕಾರರು ಹೊಸಗನ್ನಡದ ಗ್ರಾಮ್ಯ ಭಾಷೆಯನ್ನು ಮನೆಯಲ್ಲಿ ಆಡುತ್ತಾರೆ. "ಗೌಡರು" "ಅರೆಭಾಷೆ" ಮತ್ತು ತುಳು ಭಾಷೆಯನ್ನು ಆಡುತ್ತಾರೆ. ಈ ಗೌಡರನ್ನು ನಮ್ಮ ಕಟ್ಟೆಮನೆಯಾದ ಕೂಜುಗೋಡು ಮನೆಯಲ್ಲಿ ಸಿಕ್ಕಿದ ನಿರೂಪದ ಪ್ರಕಾರ ಹಾಲುವೊಕ್ಕಲು ಮಕ್ಕಳು ಎಂದು ಕರೆದಿದ್ದಾರೆ. ನಮ್ಮ ಹಿರಿಯರು ತಮ್ಮ ಜಾತಿ ಪದ್ಧತಿಗಳನ್ನು ಆಚರಿಸುವ ಬಗ್ಗೆ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ 1910,1911,1912 ಮತ್ತು 1013ರಲ್ಲಿ ಸಭೆಸೇರಿ ತೀರ್ಮಾನಿಸಿದ ಕಟ್ಟು ಕಟ್ಟಳೆಗಳನ್ನು ಶ್ರೀ ಶೃಂಗೇರಿ ಮಠಾಧೀಶರ ಸನ್ನಿದಿಯಲ್ಲಿ ಅವರ ಮೋಕ್ಷಕೊಟ್ಟ ನಿರೂಪದಲ್ಲಿ ಹಾಲು ವೊಕ್ಕಲು ಮಕ್ಕಳ (ಗೌಡರ) ನಿರೂಪವೆಂದು ಬರೆಸಿರುವಾಗ ಈ ಗೌಡರು ಗಂಗಡಿಕಾರರ ಸಂತಾನದವರೆಂದು ಹೇಳುವುದು ಸರಿಯೇ? ನಾವು ಗಂಗಡಿಕಾರರಾಗಿದ್ದರೆ ನಮ್ಮ ಹಿರಿಯರು ಗಂಗಡಿಕಾರರೆಂದು ಬರೆಸುವ ಬದಲು ಹಾಲು ವೊಕ್ಕಲು ಮಕ್ಕಳೆಂದು ಬರೆಸಲು ಕಾರಣವೇನು?

ನಮ್ಮ ಹಿರಿಯರು ದಕ್ಷಿಣ ಕನ್ನಡ ಜಿಲ್ಲೆಗೆ ವಿಜಯನಗರದಿಂದ ಬಂದವರೆಂದು ವಿಜಯನಗರ ಸಾಮ್ರಾಜ್ಯ ಪತನವಾದ ನಂತರ ತಾವು ಮಹಮ್ಮದೀಯರ ಬಲತ್ಕಾರಕ್ಕೆ ಕಟ್ಟುಬಿದ್ದು ತಾವು ಸಹ ಮುಸಲ್ಮಾನರಾಗಬೇಕಾಗ ಬಹುದೆಂಬ ಭಯದಿಂದ ವಿಜಯನಗರದ ರಾಜರನ್ನು ಕೇಳಿದಾಗ ವಿಜಯನಗರದ ಸಾಮಂತರೂ ಹಾಗೂ ಆತ್ಮೀಯ ಸ್ನೇಹಿತರಾದ ಇಕ್ಕೇರಿನಾಯಕರ ರಾಜ್ಯಕ್ಕೆ ಹೋಗಿ ಆಶ್ರಯ ಪಡೆಯಬಹುದೆಂಬ ಸೂಚನೆಯ ಪ್ರಕಾರ ಇಕ್ಕೇರಿಗೆ ಬಂದರೆಂದೂ, ಅಲ್ಲಿದ್ದ ಸಮಯದಲ್ಲಿ ಅಲ್ಲಿನ ಲಿಂಗಾಯಿತರು ಇವರನ್ನು ಲಿಂಗಾಯಿತರಾಗಬೇಕೆಂದು ಹಿಂಸೆಮಾಡಿದುದರಿಂದ ಅಲ್ಲಿಂದ ಹಾಸನಜಿಲ್ಲೆಯ ಐಗೂರು ಸೀಮೆಗೆ ಬಂದು ಅಲ್ಲಿ ಸ್ವಲ್ಪ ಕಾಲ ಇದ್ದು ಅಲ್ಲಿಯೂ ಅವರಿಗೆ ಸರಿಹೊಂದದ್ದರಿಂದ ಪುನಃ ಇಕ್ಕೇರಿ ನಾಯಕರನ್ನು ಕೇಳಿಕೊಂಡ ಮೇರೆ ಅವರು ತಮ್ಮ ಸ್ವಾಧೀನದಲ್ಲಿದ್ದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಸುವಂತೆ ವ್ಯವಸ್ಥೆ ಮಾಡಿದರೆಂದು ಹೇಳುತ್ತಿದ್ದರು. ಗೌಡರು ವಿಜಯನಗರದಿಂದ ಬಂದವರೆಂದು ಕೊಡಗು ಜಿಲ್ಲಾ ಗೆಝೆಟಿಯರ್‌ನಲ್ಲಿ ಉಲ್ಲೇಖವಿದೆ.

ಗೌಡರು ಮೇಲೆ ಹೇಳಿದ ರೀತಿಯಲ್ಲಿ ಈಗಿನ ಶಿವಮೊಗ್ಗ ಮತ್ತು ಈಗಿನ ಉತ್ತರ ಕನ್ನಡ ಜಿಲ್ಲೆ ಹಾಗೂ ದಕ್ಷಿಣ ಕನ್ನಡ, ಚಿಕ್ಕಮಗಳೂರು ಜಿಲ್ಲೆಗಳು ಇಕ್ಕೇರಿ ರಾಜ್ಯಕ್ಕೆ ಸೇರಿದ್ದುದರಿಂದ ನಮ್ಮ ಹಿರಿಯರು ಹೇಳುತ್ತಿದ್ದ ಮಾತು ಸತ್ಯವೆನ್ನವುದಕ್ಕೆ ಕೊಡಗಿನ ಸುಪ್ರಸಿದ್ದ ಚರಿತ್ರೆಗಾರರಾದ ದಿವಂಗತ ಶ್ರೀ ಡಿ. ಯನ್. ಕೃಷ್ಣಯ್ಯನವರು ಅವರು ಬರೆದ "ಕೊಡಗಿನಲ್ಲಿ ಗೌಡ ಜನಾಂಗದವರು" ಎಂಬ ಲೇಖನದಲ್ಲಿ ಹೀಗೆ ಹೇಳುತ್ತಾರೆ. ಕೃಷಿಯಲ್ಲಿ ಪರಿಣತರಾದ ಹವ್ಯಕಬ್ರಾಹ್ಮಣರು ಮತ್ತು ಗೌಡರನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೆಲಸುವಂತೆ ದಕ್ಷಿಣ ಕನ್ನಡ ಜಿಲ್ಲೆಯ ಇಕ್ಕೇರಿ ನಾಯಕರು ಆಶ್ರಯಕೆ ಸೇರಿದ ನಂತರ ಪ್ರೋತ್ಸಾಹಿಸಿರಬೇಕು. ಹವೀಕ ಬ್ರಾಹ್ಮಣರು ಮೊದಲೇ ಬಂದು ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮದ ಬಯಲು ಪ್ರದೇಶವನ್ನು ವ್ಯವಸಾಯಮಾಡುತ್ತಿದ್ದರು. ಆದರೆ ಪೂರ್ವ ಭಾಗದ ಘಟ್ಟ ಪ್ರದೇಶ ಅರಣ್ಯಗಳಿಂದ ಆವೃತವಾದ ಪ್ರದೇಶಗಳನ್ನು ವ್ಯವಸಾಯಮಾಡಲು ಗೌಡರನ್ನು ಪ್ರೋತ್ಸಾಹಿಸಿದ ಹಾಗೆ ಕಾಣುತ್ತದೆ. (ಗೌಡರು ಈಗಿನ ಸುಳ್ಯ, ಪುತ್ತೂರು, ಬಂಟ್ವಾಳ, ಬೆಳ್ತಂಗಡಿ, ಕಾಸರುಗೋಡಿನ ಕೆಲವು ಪ್ರದೇಶಗಳು ಕಾಡುಪ್ರದೇಶಗಳಾಗಿದ್ದು ಈ ಪ್ರಾಂತ್ಯದಲ್ಲಿ ಗೌಡರು ಹೆಚ್ಚಾಗಿ ನೆಲೆನಿಂತಿದ್ದಾರೆ)

"ದಕ್ಷಿಣ ಜಿಲ್ಲೆಯ ನಿವಾಸಿಗಳಾದ ಹವೀಕ ಬ್ರಾಹ್ಮಣರು ಕೋಟಬ್ರಾಹ್ಮಣರು ತಮ್ಮ ಮನೆಗಳಲ್ಲಿ ಹಳೆಗನ್ನಡವನ್ನು ಮಾತಾಡುತ್ತಾರೆ. ಗೌಡರು ಈ ಕನ್ನಡದ ರೂಪಾಂತರ ಮಾತನ್ನ ಮನೆಯಲ್ಲಿ ಮಾತಾಡುತ್ತಾರೆ.(ಅರೆಭಾಷೆ)ಆದುದಿಂದ ನಮ್ಮ ಹಿರಿಯರು ಹೇಳುತ್ತಿದ್ದ ಮಾತುಗಳಿಗೂ ಶ್ರೀ ಡಿ. ಯನ್. ಕೃಷ್ಣಯ್ಯನವರ ಲೇಖನಕ್ಕೂ ಸಾಮ್ಯ ಇದೆ. ಗೌಡರು ವಿಜಯನಗರದ ಹತ್ತಿರದ ಪ್ರದೇಶಗಳಲ್ಲಿ ವಾಸವಾಗಿದ್ದುದರಿಂದ ಅವರು ಮಾತಾಡುತ್ತಿರುವ ಅರೆಭಾಷೆ ವಿಜಯನಗರದ ಸುತ್ತ ಮುತ್ತಲಿನ ಭಾಷೆಯಾಗಿ ನಂತರ ಉತ್ತರ ಕನ್ನಡ ಜಿಲ್ಲೆಯ ಹಾಗೂ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಜನರು ಆಡುವ ಭಾಷೆಗೂ ಸಾಮ್ಯವಿದೆ ಎನ್ನಬಹುದು.

ಕತ್ತೆ ಬಲ್ಲದೆ ಬತ್ತದ ಗುಣವ

ನಮ್ಮ ಬರಹಗಾರರು ಹೇಳಿಕೊಂಡಂತೆ ಗೌಡರು ದಕ್ಷಿಣ ಕನ್ನಡಕ್ಕೆ ಬಂದನಂತರ ಅಲ್ಲಿ ಇದ್ದ ಬಂಟ್ರು ಹಾಗೂ ಬಿಲ್ಲವರ ಬಳಿಗಳನ್ನು ಅಳವಡಿಸಿಕೊಂಡರೆಂಬ ಹೇಳಿಕೆ ಸರಿಯಲ್ಲ. ಯಾಕೆಂದರೆ ಈ ಬಳಿ ಪದ್ಧತಿ ನಾನು ಈ ಹಿಂದೆ ಹೇಳಿದಂತೆ ಇಕ್ಕೇರಿ ರಾಜ್ಯದ ಎಲ್ಲಾ ಭಾಗದಲ್ಲಿ ಇತ್ತು. ಬರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾತ್ರ ಅಲ್ಲವೆಂಬುದಕ್ಕೆ ಸಾಕ್ಷಿಯಾಗಿ ಉತ್ತರ ಕನ್ನಡ ಜಿಲ್ಲೆಯ ಹಾಲಕ್ಕಿ ಒಕ್ಕಲು, ಈಡಿಗರಲ್ಲಿ ಒಂದು ಪಂಗಡವಾದ ದೇವರ ಮಕ್ಕಳು, ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲ್ಲೂಕುಗಳಲ್ಲೂ ಮತ್ತು ಉತ್ತರ ಕನ್ನಡ ಜಿಲ್ಲೆಯ ಗಡಿಪ್ರದೇಶಗಳಲ್ಲಿ ವಾಸವಾಗಿರುವ ಕರೇಒಕ್ಕಲಿಗರು 7ಬಳಿಗಳನ್ನು ಹೊಂದಿದ್ದಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ದೇವಾಡಿಗರು ಬಳಿಗಳನ್ನು ಅಳವಡಿಸಿದ್ದು, ದಕ್ಷಿಣ ಕನ್ನಡ, ಜಿಲ್ಲೆಯಲ್ಲಿ ಗೌಡರಿಗೆ 18 ಬಳಿಗಳಿದ್ದರೆ ಬಿಲ್ಲವರಿಗೆ, 14 ಬಳಿಗಳು, ಬಂಟರಿಗೆ 8 ಬಳಿಗಳಿವೆ.

ಆದ್ದರಿಂದ ಬಳಿಗಳು ಬರೇ ದಕ್ಷಿಣ ಕನ್ನಡ ಜಿಲ್ಲೆಯದ್ದೇ ಸಂಸ್ಕೃತಿ ಎಂದು ತಿಳಿಯುವುದು ಸರಿಯಲ್ಲ.

ಹಳೇ ಮೈಸೂರಿನ ಕುಂಚಟಿಗ ಒಕ್ಕಲಿಗರು, ಹಳ್ಳಿಕಾರ, ಒಕ್ಕಲಿಗರು, ಗಂಗಡಿಕಾರ ಒಕ್ಕಲಿಗರು ಈ ಬಳಿಯನ್ನು ಕುಲವೆಂದು ಕರೆಯತ್ತಾರೆ. ಲೇಖಕರು ಹೇಳಿದ ರೀತಿಯಲ್ಲಿ "ಗೌಡರು" ಗಂಗಡಿಕಾರ ಒಕ್ಕಲಿಗರ ಸಂತತಿಯವರಾಗಿದ್ದರೆ ಅವರಲ್ಲಿರುವ ಕುಲ ಅದೇ ರೀತಿ ದೇವರ ಆರಾಧನೆಯೂ ಸಹ ಬೇರೆ ಬೇರೆಯಾಗಿದೆ ಗಂಗಡಿಕಾರರು ಸತ್ತ ಹೆಣವನ್ನು ಹೂಳುತ್ತಾರೆ ಆದರೆ "ಗೌಡರು" ಹೆಣವನ್ನು ಸುಡುತ್ತಾರೆ. ಗೌಡರಲ್ಲಿ ಉಪ ಜಾತಿಗಳಿಲ್ಲ. ಗಂಗಡಿಕಾರರಲ್ಲಿ ಉಪ ಜಾತಿಗಳಿವೆ. ಪೆಟ್ಟಿಗೆಯವರು, ಬುಜ್ಜಣಿಗೆಯವರು, ಚೆಲ್ಲೂರು ಗಂಗಡಿಕಾರರೆಂದು. ಆದ್ದರಿಂದ ಜಾತಿಯ ವಿಷಯದಲ್ಲಿ ಯುವುದೋ ಊಹೆಯಿಂದ ಲೇಖನಗಳನ್ನಾಗಲಿ ಮಾತಾಡುವುದಾಗಲೀ ಮಾಡಿದರೆ ಅದು ಸಾಮಾನ್ಯ ಜನರ ಮನಸ್ಸಿನಲ್ಲಿ ಸಂಶಯ ಉಂಟಾಗುತ್ತದೆ. ಇದನ್ನು ಯಾಕೆ ಹೇಳುತ್ತೇನೆಂದರೆ **ಈಗಿನ ಕಾಲದ ಜಾತಿಯ ಸರ್ಟಿಪಿಕೇಟನ್ನು ಪಡೆಯಬೇಕಾದರೆ ಸ್ಪಷ್ಟವಾಗಿ "ಗೌಡ"ರೆಂದೇ ಬರೆಯ ಬೇಕೇ ಹೊರತು ಕೊಡಗಿನ ಗೌಡ, ಸುಳ್ಯದ ಗೌಡ ಒಕ್ಕಲಿಗ ಗೌಡ ಎಂಬುದಾಗಿ "ಗೌಡ" ಎಂಬ ಪದಗಳ ಹಿಂದೆ ವಿಶೇಷಣ ಪದವನ್ನು ಉಪಯೋಗಿಸಿದರೆ ಅಂಥವರಿಗೆ ಸರ್ಟಿಫಿಕೇಟ್ ಸಿಗಲಾರದು.** ಒಂದು ವೇಳೆ ಲೇಖಕರು ಹೇಳಿಕೊಂಡಂತೆ ಈ "ಗೌಡರು" ಗಂಗಡಿಕಾರರೆಂದು ಪರಿಗಣಿಸಿದರೆ ಅದರಿಂದ ಏನೂ ಪ್ರಯೋಜನವಿಲ್ಲ.

ಕೊಡಗಿನ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ "ಗೌಡ" ಎಲ್ಲಾ ಸರ್ಕಾರಿ ದಾಖ್ಲೆಗಳಲ್ಲಿ "ಗೌಡ" ಎಂಬುದಾಗಿದೆ ಹೊರತು ಮೇಲೆ ಕಾಣಿಸಿದ ವಿಶೇಷಣಗಳಿಂದ ಕೂಡಿಲ್ಲ. ಹಾಗೂ ಕರ್ನಾಟಕ ಸರ್ಕಾರದ ಪಟ್ಟಿಯಲ್ಲಿ ಒಕ್ಕಲಿಗರು ಎಂಬ ಗುಂಪಿನಲ್ಲಿ "ಗೌಡರ" ಹೆಸರಿದೆ.

ಗಂಗಡಿಕಾರ ಹಾಗೂ ಇತರ ಒಕ್ಕಲಿಗರ ಜೊತೆಯಲ್ಲಿ ಈಗ ಸುಮಾರು 60 ವರ್ಷಗಳ ಈಚೆಗೆ ಹಾಗೂ ಕೊಡಗಿನ ಗೌಡರು ಸೋಮವಾರ ಪೇಟೆ ಕಡೆಯ ಒಕ್ಕಲಿಗರು, ಚಿಕ್ಕ ಮಗಳೂರು, ಹಾಸನ ಶಿವಮೊಗ್ಗ ಜಿಲ್ಲೆಗಳ ವಿವಿದ ಒಕ್ಕಲಿಗರೊಡನೆ ಮದುವೆಯ ಸಂಬಂಧ ಬೆಳೆಸಿದ್ದಾರೆ. ನಾವು ಅವರನ್ನು "ನಮ್ಮವರೇ" ಎಂದು ಕಂಡು ಕೊಂಡಿದ್ದೇವೆ. ಅವರುಗಳೂ ನಮ್ಮನ್ನು "ಅವರವರು" ಎಂದು ಕಂಡು ಕೊಳ್ಳುತ್ತಿದ್ದಾರೆ.

ಪುರಾಣಗಳ ಹಾಗೂ ಋಗ್ವೇದಗಳಲ್ಲಿ ಬರುವ **ಯಾದವ ತರುವಸುಗಳೇ ಈಗ ಕರ್ನಾಟಕದಲ್ಲಿ "ಒಕ್ಕಲಿಗರೆಂದು"** ಗುಂಪು ಮಾಡಿರುವವರೂ, ತಮಿಳುನಾಡಿನ ವೆಲ್ಲಾಳ ಗೌಡರೂ, ತೆಲುಗು ದೇಶದ ವೆಲ್ಲಂರವರು, ಕಾಪು ಕಮ್ಮ, ರೆಡ್ಡಿಗಳು, ಮಲೆಯಾಳದ ವೆಲ್ಲಂರವರು, ಮಹರಾಷ್ಟ್ರದ ಕುನುಬಿಯವರು ಸೇರಿದ್ದಾರೆಂದು ಚರಿತ್ರೆಕಾರರು ಹೇಳುತ್ತಾರೆ. ಆದರೆ ಇವರುಗಳು ಬೇರೆ ಬೇರೆ ಕಾಲಗಳಲ್ಲಿ ವಿವಿದ ಸ್ಥಳಗಳನ್ನು ಸುತ್ತಿ, ಕರ್ನಾಟಕದಲ್ಲಿ ನೆಲಸಿದ್ದಾರೆ. ಇವರೆಲ್ಲಾ **ತರ್ವಸುಮೂಲದವರೇ.** ಆದರೆ ಈಗಿನ ಸರ್ಕಾರದ ಧೋರಣೆಯಿಂದ ಈ ದೇಶದಲ್ಲಿ ಜಾತಿಯ ಆಧಾರದ ಮೇಲೆ ವಿದ್ಯಾರ್ಥಿ ವೇತನ, ಸರ್ಕಾರಿ ಉದ್ಯೋಗಗಳ ಆಯ್ಕೆಗಳಿಗಾಗಿ ಜಾತಿ ಸರ್ಟಿಫಿಕೇಟ್‌ಗಳಿಗಾಗಿ ಈ ಜಾತಿಯ ಹೆಸರು ಉಳಿಯಲೇಬೇಕು. ಹಿಂದೂ ಸಂಸ್ಕೃತಿ ಮುಖ್ಯವಾಗಿ ಜಾತಿ ಸಂಸ್ಕೃತಿಯ ಮೇಲೆ ಹೊಂದಿರುವುದರಿಂದ ಪ್ರತಿಜಾತಿಯ ಸಂಸ್ಕೃತಿಯನ್ನು ಉಳಿಸಿಕೊಳ್ಳ ಬೇಕಾದರೆ ಜಾತಿಗಳ ಪ್ರತ್ಯೇಕತೆ ಇರಬೇಕಾಗುತ್ತದೆ. ಆದರೆ ಕುವೆಂಪುರವರ ವಿಶ್ವಮಾನವ ಸಮಾಜ ಉಂಟಾದರೆ ಈ ಜಾತಿಗಳ ಸಮಸ್ಯೆಯೇ ಇರುವುದಿಲ್ಲ.

ಪ್ರೊ. ಪೂಜಾರಿ ಮೊಣ್ಣಪ್ಪ

ನಗೆ ಹನಿಗಳು

ಮನೆಯ ಮಾಲಿಕ: ಏನ್ರ ನೀನ್ ಕಳದ ಆರು ತಿಂಗಳಂದ ಮನೆ ಬಾಡಿಗೆನೇ ಕೊಟ್ಟತ್ಲೆಲ. ಈಗ ಬಾಡಿಗೆ ಕೊಡಿಂತ ಕೇಳಿರೆ ಬರಿ ಇಪ್ಪತ್ತೇ ರೂಪಾಯಿ ಕೊಡಿಕೆ ಬಂದಿಯಲಾ

ಬಾಡಿಗೆ ದಾರ:: ಅಕಸ್ಮಾತ್ ಹಿಂದಿನ ಬಾಗಲ್ ಕಟ್ಲೆ ಮುರದ್ ಮಾರದಿದ್ದರೆ ಈ ಇಪತ್ತೆ ರೂಪಾಯಿ ಕೂಡ ಸಿಗ್‌ತಿತ್ಲೆ. ಏನೋ ನಿಮ್ಮ ಪುಣ್ಯ ತಗಣೆ.

* * *

ಗ್ರಾಹಕ : ಸ್ವಾಮಿ, ಕಡಲೆ ಬೇಳೆ ಇದೆಯಾ?
ಮಾಲೀಕ : ಇಲ್ಲಾ
ಗ್ರಾಹಕ : ಸೋಪಿದೆಯಾ?
ಮಾಲೀಕ : ಇಲ್ಲಾ
ಗ್ರಾಹಕ : ಬೆಂಕಿ ಪೊಟ್ಟಣ ಇದೆಯಾ?
ಮಾಲೀಕ : ಇಲ್ಲಾ
ಗ್ರಾಹಕ : ಬೀಗ ಇದೆಯಾ?
ಮಾಲೀಕ : ಇದೆ.
ಗ್ರಾಹಕ : ಹಾಗಾದರೆ ಬೀಗ ಹಾಕಿ ಮನೆಗೆ ಹೋಗಿ.

ಯಾಲದಾಳು ಚಂದ್ರಕಲಾ

ಕೊಟ್ಟ ಹೆಣ್ಣು ಕುಲಕ್ಕೆ ಹೊರಗು

ಸಮಾಜ ಸುಧಾರಣೆ

ಒಬ್ಬ ವ್ಯಕ್ತಿ, ವ್ಯಕ್ತಿಗಳ ಸಮೂಹ ಸಮಾಜ, ಒಂದು ಮರ ವನವಾಗಲಾರದು. ಮರಗಳ ಸಮೂಹ ವನವಾಗುವುದು. ವ್ಯಕ್ತಿಗಳ ಅವಶ್ಯಕತೆ ಸಮಾಜಕ್ಕೆ. ಸಮಾಜವಿಲ್ಲದೆ ವ್ಯಕ್ತಿ ಇಲ್ಲ. ವ್ಯಕ್ತಿ ಇಲ್ಲದೆ ಸಮಾಜವಿಲ್ಲ. ವ್ಯಕ್ತಿಗೆ ಮಾನವ ಎಂದು ಹೇಳುತ್ತಾರೆ. ಮಾನವನ ಮನುಷ್ಯತ್ವವೇ ಸಮಾಜದ ಸಮಾಜ ತತ್ವ.

ಇಂದು ಮಾನವನು ಎತ್ತಲೋ ಬದಲಾಗುತ್ತಾ ಹೋಗುತ್ತಿದ್ದಾನೆ. ಇದ್ದದ್ದನ್ನು ಬಿಟ್ಟು, ಇಲ್ಲದ್ದನ್ನು ಅರಸುತ್ತಿದ್ದಾನೆ. ತನ್ನನ್ನು ತಾನು ಮಲಿನಗೊಳಿಸುತ್ತಿರುತ್ತಾನೆ. ನಮ್ಮ ದೇಹ ಶುಭ್ರವಾದದ್ದು. ದೇವರ ಸೃಷ್ಟಿಯಲ್ಲಿ ಮಾನವನ ಯಂತ್ರ ಸುಭದ್ರ ಮತ್ತು ವಿಚಿತ್ರ ವಾದದ್ದು. ಪವಿತ್ರವಾದದ್ದು. ಅದನ್ನು ಇಂದು ಆಧುನಿಕತೆಯ, ನಾಗರೀಕತೆಯ ಹೆಸರಿನಲ್ಲಿ ಅಪವಿತ್ರಗೊಳಿಸಿ ಕೊಳ್ಳುತ್ತಿದ್ದೇವೆ. ಹೃದಯ ಸ್ವಚ್ಛತೆ ಆತ್ಮ ಸ್ವಚ್ಛತೆಯೆನ್ನುತ್ತೇವೆ. ಅಂಥಾ ಹೃದಯವನ್ನು ಧೂಮಪಾನದಿಂದ ಮಸುಕಾಗಿಸಿಕೊಳ್ಳುತ್ತೇವೆ. ಮನಸ್ಸೆಂಬ ಪಾವನವನ್ನು ಮದ್ಯ ಪಾನದಿಂದ ಮಲಿನಗೊಳಿಸಿ ಕೊಳ್ಳುತ್ತೇವೆ. ಪರನಿಂದೆ, ಪರರ ದೂಷಣೆ ದೈನಂದಿನ ಜೀವನವಾಗಿದೆ. ಹೀಗಾಗಿ ತನ್ನೊಂದಿಗೆ ತನ್ನ ಸಮಾಜವನ್ನೂ ದುರ್ಗತಿಗೆ ತಳ್ಳುತ್ತಿದ್ದೇವೆ. ಇಂತಾ ದುರ್ಗತಿಯಿಂದ ವ್ಯಕ್ತಿಯನ್ನು ಪರಿವರ್ತನೆ ಮಾಡಿ (Transformation) ಸತ್ಪಥದಲ್ಲಿ ನಡೆಸುವುದಕ್ಕೆ ಭಗವಂತನ ಅವತಾರವಾಗುವುದೆಂದು ಭಗವದ್ಗೀತೆ ಸಾರುತ್ತದೆ.

ನಮ್ಮನ್ನು ನಾವು ತಿದ್ದಿಕೊಳ್ಳಬೇಕು. ತಿದ್ದಿಕೊಳ್ಳುವ ಅರ್ಹತೆ ಬೇಕು. ಅದಕ್ಕೆ ಮಾರ್ಗದರ್ಶನ ಬೇಕು. ಉದಾಹರಣೆ ದೀಪ, ಎಣ್ಣೆ, ಬತ್ತಿ ಬೆಂಕಿ ಪೆಟ್ಟಿಗೆ ಇದ್ದಮಾತ್ರಕ್ಕೆ ದೀಪ ಉರಿಯುವುದಿಲ್ಲ ಅದನ್ನು ಹೊತ್ತಿಸುವವನೊಬ್ಬ ಬೇಕು. ಬಂಗಾರ, ಅರಳು, ವಜ್ರಗಳಿದ್ದರೆ ಆಭರಣವಾಗದು. ಅದನ್ನು ಕಲಾ ಕೃತಿಯಲ್ಲಿ ರಚಿಸುವ ಚಿನಿವಾರೊಬ್ಬಬೇಕು. ಸೂಜಿ, ದಾರ, ಹೂವುಗಳಿದ್ದರೆ ಹೂವಿನ ಹಾರವಾಗುವುದಿಲ್ಲ. ಅದನ್ನು ಪೋಣಿಸುವವನೊಬ್ಬಬೇಕು. ಅಕ್ಷರ ಮಾಲೆಗಳಿವೆ. ಅದನ್ನು ಕಲಿಯಲು, ಕಲಿಸಲು, ಪೋಣಿಸಲು, ಪೋಷಿಸಲು, ಯಾವ ರೀತಿ ಉಚ್ಚರಿಸಬೇಕೆಂದು ತಿಳಿಸಲು ಒಬ್ಬ ಗುರು ಬೇಕು. ಹಾಗೆಯೇ ಸಮಾಜ ಉನ್ನತಿಯಾಗಬೇಕಾದರೆ ಅದಕ್ಕೊಬ್ಬ ಮುಂದಾಳುವಿರ ಬೇಕು. ಸಮಾಜದಲ್ಲಿನ ಅಸುರಿ ಶಕ್ತಿಯನ್ನು ನಿಗ್ರಹಿಸಿ, ದೈವ ಶಕ್ತಿ, ಅಧ್ಯಾತ್ಮಕ ಶಕ್ತಿ ತುಂಬಲು ಅವತಾರಿ ಪುರುಷರಿರಬೇಕು. ಇದನ್ನೇ ಭಗವದ್ಗೀತೆಯಲ್ಲಿ ಶ್ರೀ ಕೃಷ್ಣಪರಮಾತ್ಮನು "ಯದಾ ಯದಾ ಹಿ ಧರ್ಮಸ್ಯ ಗ್ಲಾನಿ ಭವತಿ ಭಾರತ, ಅಭ್ಯುತ್ಥಾನಮ ಧರ್ಮಸ್ಯ ತದ್ಯಾತ್ಮಾನಂ ಸೃಜಾಮ್ಯಹಮ್. ಪರಿತ್ರಾಣಾಯ ಸಾಧೂನಾಂ, ವಿಶಾಯ ಚ ದುಷ್ಕೃತಾಮ್, ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ: ಎಂಬುದಾಗಿ ಅನಾಸಕ್ತಿಯೋಗದಲ್ಲಿ ಉದ್ಗರಿಸಿದ್ದಾರೆ. ಅಂದರೆ ನಮ್ಮ ಉನ್ನತಿಗೆ ಉತ್ತಮವಾದ ಮಾರ್ಗದರ್ಶನ ಬೇಕೇ ಬೇಕು. ಅವರು ನಮ್ಮನ್ನು ಪರಿವರ್ತನೆ ಮಾಡಬೇಕು. ಪರಿವರ್ತನೆಯೆಂದರೆ S : Spriritual transformation; (ಅಧ್ಯಾತ್ಮಕ ಪರಿಣಾಮ ; A : Association Transformation (ಸಾಮಾಜಿಕ ಪರಿಣಾಮ I : Individuval Transformation (ವ್ಯಕ್ತಿ ಪರಿಣಾಮ) ಇದಕ್ಕೆ SAI ಎಂಬ ಪದವನ್ನು ಬಳಸುತ್ತೇವೆ. ಆಟ (Games) ದಲ್ಲಿಯೂ SAI (ಸಾಯಿ) ಸಂಸ್ಥೆಗಳಿವೆ. ಅಂದರೆ ಆಟಪಾಟಗಳೆರಡರಲ್ಲೂ ಸಾಯಿ ಸಂಸ್ಥೆಗಳನ್ನು ಬಳಸುತ್ತೇವೆ. ಆಟ ಪಾಠದಷ್ಟೇ ಅವಶ್ಯಕ.

ಇಂತಾ ಪರಿವರ್ತನೆಗೆ ಮುಖ್ಯವಾಗಿ ಪ್ರೀತಿ, ಸಹನೆ, ತ್ಯಾಗಗಳ ಸಮ್ಮಿಶ್ರಣ ಮುಖ್ಯ. ಇದರ ಪ್ರತಿರೂಪ ಹೆಂಗಸು (ಮಾತೆ). ನಾವಿಂದು ಲೌಕಿಕ ವಿಷಯಗಳಿಗೆ ಮಾರು ಹೋಗುತ್ತಿದ್ದೇವೆ. ಅದೇ Deep - wine ಅಂದರೆ ಮದ್ಯಪಾನ. Deep - wine ಸೇವನೆಯಿಂದ Divin (ದಿವ್ಯತ್ವ)ವನ್ನು ಅರ್ಥ ಮಾಡಿಕೊಳ್ಳಲಾಗದು. ಅದರ ಅರ್ಥ ತಿಳಿಯಬೇಕಾದರೆ ನಿರ್ಮಲ, ನಿಶ್ಚಲ ಪ್ರೇಮವನ್ನು ನಾವು ನಮ್ಮಲ್ಲಿ ಅಭಿವೃದ್ಧಿ ಪಡಿಸಿ ಕೊಳ್ಳಬೇಕು. ಇದರ ಮೊಟ್ಟ ಮೊದಲಿನ ಪಾಠ ತಾಯಿಯಿಂದಲೇ ಬರಬೇಕು. ಹೆಂಗಸು ಅಬಲೆಯಲ್ಲ. ಸಬಲೆ ನಾವು ಮಹಾಭಾರತವನ್ನು ಓದಿ, ತಿಳಿಯದಿದ್ದರೂ. T.V.ಯಲ್ಲಾದರೂ ಮಹಾಭಾರತದ ತುಣುಕನ್ನು ನೋಡಿರುತ್ತೇವೆ. ಅದರಲ್ಲಿ ಪಾಂಚಾಲಿ ಎಂಬ ಶಬ್ದ ಪವಿತ್ರತೆಯ ಮಾತೆ ದ್ರೌಪದಿಯ ಪ್ರಸ್ತಾವನೆ ಇದೆ. ಪಾಂಚಾಲಿ ಎಂದರೆ ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳ ಸಮನ್ವಯ ರೂಪ, ಕೋಪ, ಅಸೂಯೆ, ಡಂಭಗಳಿಂದ ಕೂಡಿದ ಭೀಮನನ್ನು ಸರಿದಾರಿಯಲ್ಲಿ ನಡೆಸಿದವಳು ಪಾಂಚಾಲಿ, ತುಂಬು ಸಭೆಯಲ್ಲಿ ಅವಮಾನವಾಗುವಾಗ ಸಹನೆ ತೋರಿದವಳು ಪಾಂಚಾಲಿ ಸಹನೆ, ಕಳೆದುಕೊಳ್ಳದೆ ಸಾಹಸತನದಿಂದ ಭಕ್ತಿಯಿಂದ ತನ್ನ ಶಕ್ತಿಯನ್ನು ಬಳಸಿ ಭಗವಂತನನ್ನು ಹೃದಯವಾಸೀ ಎಂದು ಕರೆದದ್ದರ ಪ್ರತಿಫಲ ಭಗವಂತನ ಅಭಯ ಹಸ್ತ. ಮಾನರಕ್ಷಣೆ ಇದು. ಅಬಲೆಯರಿಂದ ಅಸಾಧ್ಯ. ಸಬಲೆ ಇಂಥವರಿಂದಲೇ ಸಮಾಜದ ಉದ್ಧಾರ, ಮನು ಕುಲದ ಉನ್ನತಿ, ಕರ್ಮಾಚರಣೆಗೆ ದೇಹವನ್ನು ಬಗ್ಗಿಸಬೇಕು. ವಿನಯ ವಿಧೇಯತೆಯಿಂದ ನಾವು ಬಾಗಬೇಕು. ಹಿರಿಯರನ್ನು ಗೌರವಿಸಬೇಕು. ಈ ಭೂಮಿಯ ಮೇಲೆ ನಮ್ಮ ತಂದೆ ಹೇಳುವ ಮಾತನ್ನು ಕೇಳಸಿಕೊಳ್ಳದ ನಾವು, ಸ್ವರ್ಗದಲ್ಲಿರುವ ಭಗವಂತನು ನಮ್ಮ ಪ್ರಾರ್ಥನೆಗಳಿಗೆ ಓಗೊಡಬೇಕೆಂದು ನಿರೀಕ್ಷಿಸುದಾದರೂ ಹೇಗೆ? ಧರ್ಮದ ಮೊದಲ ಹೆಜ್ಜೆ ಕೃತಜ್ಞತೆ. ಮಗುವಿನ ಮೊದಲನೆಯ ಕರ್ತವ್ಯ ತನ್ನ ತಂದೆ ತಾಯಿಂದಿರಿಗೆ ಗೌರವ ತೋರಿಸುವುದು. ಮೊದಲನೆಯ ಹೆಜ್ಜೆಯೇ ತಪ್ಪಿ ಹೋದರೆ ಇನ್ನು ಮೇಲಕ್ಕೆ ಹತ್ತುವುದೆಲ್ಲಿ ಬಂತು? ನಮ್ಮಲ್ಲಿ ಪರಿವರ್ತನೆಯಾದರೆ ಮಾತ್ರ ಸಮಾಜ ಪರಿವರ್ತನೆ. ಇದರ ಮೊದಲ ಹೆಜ್ಜೆ ಮಾತೆಯರಲ್ಲಿ ಅಧ್ಯಾತ್ಮಕ ಪರಿವರ್ತನೆ ತನ್ನ ಪರಿವರ್ತನೆಯಿಂದ, ಮಕ್ಕಳ ಪರಿವರ್ತನೆ, ಪರಿವರ್ತನೆ ಎಂದರೆ ಪ್ರಭಲವಾದ ಆಧ್ಯಾತ್ಮಕ ಪರಿವರ್ತನೆ. ಆಧ್ಯಾತ್ಮಕವೆಂದರೆ ದಿನ ನಿತ್ಯದ ನಮ್ಮ ಪ್ರೇಮ, ಅಸೂಯೆರಹಿತ ನಿತ್ಯಜೀವನ ಅದೇ ಸಮಾಜ ಸುಧಾರಣೆ.

ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ

ಕೊಟ್ಟವನು ಕೊಡಂಗಿ, ಈಸಿಕೊಂಡವನು ಈರಭದ್ರ

ಮೈಸೂರಿನಲ್ಲಿ ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವದ್ಧಿ ಸಂಘ ಉದಯ

ದಿನಾಂಕ 20-2-2000 ರಂದು ಮೈಸೂರಿನಲ್ಲಿ ನೆಲೆಸಿರುವ ಮಾಜಿ ಸೈನಿಕರು ಕೊಡಗು ಗೌಡ ವಿದ್ಯಾಸಂಘದ ಆವರಣದಲ್ಲಿ ಸೇರಿ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘವೆಂಬ ಹೆಸರಿನಲ್ಲಿ ಸಂಘಟನೆಯನ್ನು ಹುಟ್ಟು ಹಾಕಲಾಯಿತು. ಅಂದಿನ ಸಭೆಯಲ್ಲಿ ಹಾಜರಿದ್ದ ಮಾಜಿ ಸೈನಿಕರು ಚೆಟ್ಟಿಮಾಡ ಜನಾರ್ಧನರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಒಮ್ಮತದಿಂದ ಆಡಳಿತ ಮಂಡಳಿಯನ್ನು ರಚಿಸಿ, ಆಡಳಿತ ಮಂಡಳಿಯ ಅಧ್ಯಕ್ಷರಾಗಿ ತಡಿಯಪ್ಪನ ಕುಮಾರಜಯ ನವರನ್ನು ಸರ್ವಾನುಮತದಿಂದ ಆರಿಸಲಾಯಿತು.

ತಡಿಯಪ್ಪನ ಕುಮಾರ್‌ಜಯ ಅಧ್ಯಕ್ಷರು,	ಕುಯ್ಯಮುಡಿ ರಾಮಪ್ಪ ಉಪಾಧ್ಯಕ್ಷರು,	ಕರ್ಣಯ್ಯನ ಲಕ್ಷ್ಮಣ ಕಾಯದರ್ಶಿ
ಚೆಟ್ಟಿಮಾಡ ಜನಾರ್ಧನ ಖಜಾಂಚಿ,	ಪಟ್ಟಡ ಪ್ರಭಾಕರ ನಿರ್ದೇಶಕರು	ಮೆರ್‌ಕಜೆ ವಿಶ್ವನಾಥ ನಿರ್ದೇಶಕರು
ಪುದಿನೆರವನ ಪೊನ್ನಪ್ಪ ನಿರ್ದೇಶಕರು	ಪೊನ್ನೆಟಿ ಪೊನ್ನಪ್ಪ " "	ಕರ್ಣೆಯ್ಯನ ಮುದ್ದಯ್ಯ " "
ಕೊಂಬಾರನ ಸುಬ್ಬಯ್ಯ " "	ಹೊಸೊಕ್ಲು ಬೆಳ್ಯಪ್ಪ " "	

ಅಂದಿನ ಸಭೆಯಲ್ಲಿ ಅಥಿತಿಗಳಾಗಿ ಕೊಡಿ ಚಂದ್ರ ಶೇಖರ್ (ಕಾರ್ಯದರ್ಶಿ, ಕೊಡಗು ಗೌಡ ಸಾಂಸ್ಕೃತಿಕ ಅಕಾಡಮಿ, ಮಡಿಕೇರಿ) ಉಪಸ್ಥಿತರಿದ್ದು ಸಂಘಟನೆಗೆ ಬೇಕಾದ ಸಲಹೆ ಸೂಚನೆಗಳನ್ನು ನೀಡಿದರು. ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘದ ನೂತನ ಪ್ರಥಮ ಅಧ್ಯಕ್ಷರಾದ ತಡಿಯಪ್ಪನ ಕುಮಾರ್‌ಜಯನವರು ಹಾಗೂ ನಿರ್ದೇಶಕರುಗಳ ಸಹಕಾರವನ್ನು ಸಂಘದ ಬೆಳವಣಿಗೆ ಕೋರಿದರು. ಸಂಘದ ಕಾರ್ಯದರ್ಶಿ ಕರ್ಣಯ್ಯನ ಲಕ್ಷ್ಮಣನವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮಾರ್ಚ್‌ತಿಂಗಳ 19ನೇ ತಾರೀಕಿಗೆ ನಿಗದಿಪಡಿಸಿ ಸಭೆಯನ್ನು ಬರಕಾಸ್ತು ಮಾಡಲಾಯಿತು.

ವರದಿ : ಕರ್ಣಯ್ಯನ ಲಕ್ಷ್ಮಣ

ಕೃಷ್ಣ ಸರ್ವಿಸ್ ಸ್ಟೇಶನ್ - ಭಾಗಮಂಡಲ

ದಿನಾಂಕ 24-2-2000 ರಂದು ಕುದುಪಜೆ ಕವಿತ ಶ್ರೀಮತಿ ಕಿಶೋರ್ ಕುಮಾರ್ ಮಾಲಿಕತ್ವದ ಕೃಷ್ಣ ಸರ್ವಿಸ್ ಸ್ಟೇಶನ್ ಭಾಗ ಮಂಡಲದಲ್ಲಿ ಉಸ್ತುವಾರಿ ಸಚಿವ ಯಂ. ಯಂ. ನಾಣಯ್ಯನವರಿಂದ ಉದ್ಘಾಟಿಸಲ್ಪಟ್ಟಿತು. ಅಧ್ಯಕ್ಷತೆಯನ್ನು ಮಾಜಿ ಸಚಿವ ದಂಬೆಕೋಡಿ ಚಿಣಪ್ಪನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸಿ. ಗಣೇಶ್, ಡಿವಿಜನಲ್ ಮ್ಯಾನೇಜರ್ ಇಂಡಿಯನ್ ಆಯಿಲ್ ಕಾರ್ಪೋರೇಶನ್, ಮಂಗಳೂರು, ಶ್ರೀ ಅಮ್ಮವನ ವಾಸು ಪಟ್ರೋಲಿಯಂ ಡೀಲರ್, ಬೆಂಗಳೂರು, ಶ್ರೀ ಡಿ. ಬಿ. ಬಾಲಕೃಷ್ಣ ಮಾಜೀ ತಾಲೂಕು ಬೋರ್ಡ್ ಅಧ್ಯಕ್ಷರು, ಶ್ರೀ ಕೆ. ಜಿ. ರಘುನಾಥ, ಪ್ಲಾಂಟರ್ ಚೆಟ್ಟಿಮಾನಿ ಇವರುಗಳು ಆಗಮಿಸಿದ್ದರು. ಶ್ರೀಮತಿ ಕವಿತರವರು ಕುದುಪಜೆ ಬೈರಪ್ಪ ಇವರ ಸೊಸೆಯಂದಿರು

ಶುಭ ವಿವಾಹ

ಪಾಲೂರು ಗ್ರಾಮದ ಪುದಿನೆರವನ ತಮ್ಮಯ್ಯನವ್ರ ಪುತ್ರಿ ಜಯಶೀಲಾಳಿಗೂ ಮತ್ತೆ ಬೆಂಗಳೂರ್‌ನಿವಾಸಿ ಕೊಂಪುಳಿ ಪುಟ್ಟಯ್ಯನವ್ರ ಮಂಜ್ಞ ಧನಂಜಯಂಗೂ ತಾರೀಖ್ 24-2-2000ಲಿ ಮಡಿಕೇರಿ ಗೌಡ ಕಲ್ಯಾಣ ಮಂಟಪಲಿ ಬಾರೀ ಪೊರ್ಲಾಗಿ ನಡ್ತ್.

* ಮದೆ ಗ್ರಾಮದ ಪಟ್ಟಡ ಬೆಳ್ಯಪ್ಪ (Dy. S.P) KSRP. ಇವ್ರ ಮಗ್ಳು. ವನಿತಾಳಿಗೂ ಮತ್ತೆ ಭಾಗಮಂಡಲ ಉದಿಯನ ನಂಜುಂಡನವ್ರ ಮಂಜ್ಞ ಸೀತಾರಾಮ್, B.E. ಇವ್ರ ಮದುವೆ ತಾರೀಖ್ 10-2-2000ಲಿ ಮಡಿಕೇರಿ ಮೇಲಿನ ಕೊಡವ ಸಮಾಜಲಿ ನಡ್ತ್.
* ಮದೆಗ್ರಾಮದ ಬಿರುಮಣ್ಣನ ತಿಮ್ಮಯ್ಯನವ್ರ ಮಗ್ಳು ಜಯಂತಿಗೂ ಮತ್ತೆ ಸಿಂಗತ್ತೂರ್ ಗ್ರಾಮದ ಸುಳ್ಯ ಕೋಡಿ ಗಣಪತಿಯವ್ರ ಮಂಜ್ಞ ವಸಂತ ಕುಮಾರ್‌ಗೂ ತಾರೀಖ್ 23-1-2000ಲಿ ಗೂಡೆನ ಮದುವೆ ಮನೇಲಿ ಬಾರಿ ಗೌಜಿಲಿ ನಡ್ತ್.

ವೈಕುಂಠವಾಸಿ

ಸುಳ್ಯ ಸರ್ಕಾರಿ ಜೂನಿಯರ್ ಕಾಲೇಜಿಲಿ ದೈಹಿಕ ಶಿಕ್ಷಕರಾಗಿದ್ದ್ ಪಿಂಚಿಣಿದಾರರಾಗಿದ್ದ ಕಾನತ್ತಿಲ ಮನೆ ಪದ್ಮಯ್ಯಗೌಡರು ತಾರೀಖ್ 22-11-1999ಕ್ಕೆ ವೈಕುಂಠ ವಾಸಿಆದೋ. ಇವು ನಮ್ಮ ಚಂದದಾರಾಗಿದ್ದೋ, ಸಂಗಾತಿ ಇವರ ಆತ್ಮಕ್ಕೆ ಶಾಂತಿನ ಕೋರಿದೆ.

* ಅವಂದೂರು ಗ್ರಾಮದ ಬೆಳ್ಳಿನ ಬೋಪಯ್ಯನವರು ದಿನಾಂಕ 14-11-1999 ರಂದು ವೈಕುಂಠವಾಸಿಯಾದರು. ಇವರಿಗೆ 51 ವರ್ಷಪ್ರಾಯವಾಗಿತ್ತು. ಇವರು ಪತ್ನಿ, ಓರ್ವಪುತ್ರ ಹಾಗೂ ಇಬ್ಬರು ಪುತ್ರಿಯರನ್ನು ಮತ್ತು ಅಪಾರ ಬಂಧು ಬಳಗದವರ್‍ನು ಅಗಲಿದ್ದಾರೆ. ಮಡಿಕೇರಿಯಲ್ಲಿರುವ ದಿನಕರ ಪ್ರೆಸ್ಸ್‌ನ ಮಾಲಿಕರು ಸಹ ಆಗಿದ್ದರು.
* ಸಿಂಗತ್ತೂರು ಗ್ರಾಮದ ಅಸಿಸ್ಟೆಂಟ್ ಕಮಾಂಡೆಂಟ್ (ನಿವೃತ್ತ) ಕುದುಪಜೆ ಬೈರಪ್ಪನವ್ರ ಧರ್ಮಪತ್ನಿ ರುಕ್ಮಿಣಿಯವ್ರು ಫೆಬ್ರವರಿ 13ನೇ ಐತ್ಯವಾರ ದಿನ ಸ್ವರ್ಗಸ್ಥರಾದೊ. ಇವ್ರುಕೆ 68ವರ್ಷ ಪ್ರಾಯ ಆಗಿತ್ತ್‌ಗಡ. ಇಬ್ಬರು ಗಂಡುಮಕ್ಕ ಮತ್ತೆ ಇಬ್ಬರು ಹೆಣ್ಣುಮಕ್ಕ, ಮೊಮ್ಮಕ್ಕಳನ ಅಪಾರ ಬಂಧು ಬಳಗನ ಬುಟ್ಟ್ ಹೋಗೋಳೊ.

ದೇವರ ಭಯವೇ ಜ್ಞಾನದ ಆರಂಭ

12ನೇ ಪುಟದಿಂದ

ವಿಧಾನ : ಮೇಲೆ ಹೇಳಿದ ಎಲ್ಲಾ ಜೀನಸುಗಳನ್ನು ಒಟ್ಟಿಗೆ ಸೇರಿಸಿ ಹುರಿದು ಕುಟ್ಟಿ ಪುಡಿ ಮಾಡಿ ಸುರಕ್ಷಿತವಾಗಿ ಇಟ್ಟುಕೊಳ್ಳಿ.

ರಸಂ / ಪೌಡರ್ ನಂ.1

ಬೇಕಾಗುವ ಸಾಮಾನು : 2 ಊ. ಚ. ಮೆಂತೆ, 1 ಕಪ್ ಕೊತ್ತಂಬರಿ, 1 ಊ. ಚ. ಸಾಸಿವೆ, 1 ಕಪ್ ಒಣ ಮೆಣಸಿಕಾಯಿ, 5 ಗರಿ ಕರಿಬೇವು

ವಿಧಾನ : ಮೇಲೆ ಹೇಳಿದ ಸಾಮಗ್ರಿಗಳನ್ನು ಬೇರೆ ಬೇರೆಯಾಗಿ ಬಾಣಲಿಯಲ್ಲಿ ಹಾಕಿ ಕಂದು ಬಣ್ಣಕ್ಕೆ ಬರುವಂತೆ ಹುರಿದು ಪುಡಿಮಾಡಿ. ಆ ಮೇಲೆ ಅವುಗಳನ್ನೆಲ್ಲಾ ಒಟ್ಟಿಗೆ ಸೇರಿಸಿ ಬೆರಸಿ ಬಾಟಲಿಯಲ್ಲಿ ಹಾಕಿಟ್ಟುಕೊಳ್ಳಿ.

ರಸಂ / ಪೌಡರ್ ನಂ. 2

ಬೇಕಾಗುವ ಸಾಮಾನು : 1 ½ ಊ. ಚ. ಮೆಂತೆ, 1 ಕಪ್ ತೊಗರಿಬೇಳೆ, ½ ಕಪ್ ಕರಿ ಮೆಣಸಿನ ಕಾಳು, 1 ಕಪ್ ಜೀರಿಗೆ, 1 ಕಪ್ ಕೊತ್ತಂಬರಿ ಬೀಜ.

ವಿಧಾನ : ಮೇಲೆ ಹೇಳಿದ ಸಾಮಗ್ರಿಗಳನ್ನೆಲ್ಲಾ ಬೇರೆ ಬೇರೆಯಾಗಿ ಬಾಣಲೆಯಲ್ಲಿ ಹಾಕಿ ಕಂದು ಬಣ್ಣಕ್ಕೆ ಬರುವಂತೆ ಒಣ ಹುರಿದು ಪುಡಿಮಾಡಿ ಆಮೇಲೆ ಆ ಪುಡಿಗಳನ್ನೆಲ್ಲಾ ಒಟ್ಟಿಗೆ ಬೆರಸಿ ಬಾಟಲಿಯಲ್ಲಿ ಹಾಕಿಟ್ಟುಕೊಳ್ಳಿ.

ತರಕಾರಿ ಸಾರು ಪದಾರ್ಥದ ಪುಡಿ

ಬೇಕಾಗುವ ಸಾಮಾನು : ½ ಕಿ. ಗ್ರಾಂ ಒಣ ಮೆಣಸಿನ ಕಾಯಿ, ½ ಕಿ. ಗ್ರಾಂ ಕೊತ್ತಂಬರಿ, 2 ಅಂಗುಲ ಅರಿಸಿನ ತುಂಡು, 1 ಊ. ಚ. ಕರಿಮೆಣಸಿನ ಕಾಳು, 125 ಗ್ರಾಂ ಸಾಸಿವೆ, 1 ಟೀ. ಚ. ಓಮ, 1 ಟೀ. ಚ. ಮೆಂತೆ, ಒಂದೊಂದು ಊ. ಚ. ದಪ್ಪ ಉದ್ದಿನ ಬೇಳೆ, ತೊಗರಿಬೇಳೆ ಮತ್ತು ಹೆಸರು ಬೇಳೆ, 125 ಗ್ರಾಂ ಕುಚ್ಚಲು ಅಕ್ಕಿ (Boiled rice), 1 ಊ. ಚ. ಎಳ್ಳು, ಬೇಕಾದರೆ 1 ಗ್ರಾಂ ಇಂಗು.

ವಿಧಾನ : ಎಲ್ಲಾ ಜೀನಸುಗಳನ್ನು ಮಣ್ಣಿನ ಕಾವಲಿಯಲ್ಲಿ ಇಲ್ಲವೆ, ಇತರ ಬಾಣಲಿಯಲ್ಲಿ ಬೇರೆ ಬೇರೆಯಾಗಿ ಎಣ್ಣೆ ಮುಟ್ಟಿಸದೆ ಹುರಿದು ಆ ಬಳಿಕ ಒಟ್ಟಿಗೆ ಸೇರಿಸಿ ಪುಡಿ ಮಾಡಿ ಕೊಳ್ಳುವುದು, 1 ಊ. ಚ. ಪುಡಿಯು ½ ಕಿ. ಗ್ರಾಂ ತರಕಾರಿಯ (ಕುಂಬಳಕಾಯಿ, ಬೂದಗುಂಬಳಕಾಯಿ, ಸೋರೆಕಾಯಿ, ಬಾಳೆಕಾಯಿ ಇತ್ಯಾದಿ) ಆಹಾರ ಪದಾರ್ಥಕ್ಕೆ ಬೇಕಾಗುತ್ತದೆ. ಸಿಗಡಿಯ ಮತ್ತುಮಾಂಸದ ಪದಾರ್ಥಗಳನ್ನು ತಯಾರಿಸಲಿಕ್ಕೆ ಕೂಡಾ ಈ ಪುಡಿಯನ್ನು ಉಪಯೋಗಿಸಬಹುದು.

ಗರಮ್ ಮಸಾಲೆ ಪುಡಿ

ಬೇಕಾಗುವ ಸಾಮಾನು : 50 ಗ್ರಾಂ ಜೀರಿಗೆ, 25 ಗ್ರಾಂ ದಾಲ್ಚಿನ್ನಿ, 25 ಗ್ರಾಂ ಕೊತ್ತಂಬರಿ ಬೀಜ, 2 ಗ್ರಾಂ ಕರಿಬೇವಿನ ಎಲೆ (ಒಣಗಿಸಿದ್ದು), 25 ಗ್ರಾಂ ಕರಿಮೆಣಸಿನ ಕಾಳು, 10 ಲವಂಗ.

ವಿಧಾನ : ಈ ಎಲ್ಲಾ ಜೀನಸುಗಳನ್ನು ಬಾಣಲೆಯಲ್ಲಿ ಬೇರೆ ಬೇರೆಯಾಗಿ (ಎಣ್ಣೆ ಮುಟ್ಟಿಸದೆ) ಹುರಿದು ಒಟ್ಟಿಗೆ ಕೂಡಿಸಿ ಪುಡಿ ಮಾಡಿ ಜಾಡಿಯೊಳಗೆ ಅಥವಾ ಬಾಟಲಿಯಲ್ಲಿ ಹಾಕಿ ಗಾಳಿ ತೂರದಂತೆ ಮುಚ್ಚಟ್ಟುಕೊಳ್ಳುವುದು.

6ನೇ ಪುಟದಿಂದ

ಮೇಲೆ, ಕ್ಷುಲ್ಲಕ ಅಗತ್ಯಗಳಿಗಾಗಿ ಸೃಷ್ಟಿಸಿಕೊಂಡ ನಮ್ಮ ಪೀಳಿಗೆಯ ಪ್ರೀತಿಯನ್ನು ಪ್ರೇಮವೆಂದು ಕರೆಯಲಾದೀತೆ?

ಈಗ ಹೇಳಿ, ನಿಜವಾದ ಪ್ರೀತಿ ಯಾವುದು ? ಪ್ರೇಮ ಎಂದಾಗ ನಮ್ಮ ಕಣ್ಣ ಮುಂದೆ ನಿಲ್ಲುವ ಚಿತ್ರ ಯಾವುದು? ಹೊಸ ಹರೆಯದ ಯುವಕ-ಯುವತಿ ಕೈಕೈ ಹಿಡಿದು ಮದುವೆಯ ಹಾದಿಯಲ್ಲಿ ನಡೆಯುತ್ತಿರುವುದೊ? ಅಥವಾ...

ಬೆನ್ನೆಲುಬು ಬಾಗಿ, ವಯಸ್ಸಾಗಿರುವ ಜೋಡಿಯೊಂದು ತಮ್ಮ ಬಾಳ ಹಾದಿಯನ್ನು ಕ್ರಮಿಸಿ ಗುರಿ ತಲುಪಿರುವುದೋ? ವಯಸ್ಸಾದ ಜೋಡಿಗಳ ಕೈಗಳು ಒರಟಾಗಿದ್ದರೂ ಒಂದನೊಂದು ಸುಭದ್ರವಾಗಿ ಬೆಸೆದಿವೆ. ಮುಖಗಳು ಸುಕ್ಕುಗಟ್ಟಿದ್ದರೂ, ಕಾಂತಿಯುತವಾಗಿವೆ. ಅವರ ಹೃದಯಗಳು ಬಡಿದು ಬಡಿದು ದಣಿದಿದ್ದರೂ ಕೂಡ ಪರಸ್ಪರ ಒಲವಿನಿಂದ ಬಲವಾಗಿದೆ.

ಯುವ ಪ್ರೀತಿಗಿಂತ ಸುಂದರವಾಗಿರುವ ಚಿತ್ರ ವೃದ್ಧ ಪ್ರೀತಿಯಲ್ಲಿವೆ?!

ಎಡಿಕೇರಿ ಸುದರ್ಶನ್

13ನೇ ಪುಟದಿಂದ

ಶ್ರೀಕಂಠ ಗಾಬರಿ, ಆತುರದಿಂದ "ಬೇಡ... ಬೇಡ ನೀವು ಅಲ್ಲಿಗೆ ಹೋಗಬೇಡಿ, ಬೇಕಾದರೆ ನಾನು ಅಜ್ಜಿಗೆ ಹೇಳುತ್ತೇನೆ, ನೀವು ನಮ್ಮನೇಲಿ ಇರಿ".

ರೇವತಿ ಗಂಭೀರವಾಗಿ "ಇಲ್ಲ ಒಂದು ಸಲ ಹೊರಟು ಬಂದ ಮೇಲೆ ಪುನಹ ಅಲ್ಲಿಗೆ ಬರಲಾರೆ".

ಪೂಜಾರಿ ಗಡುಸಾಗಿ "ರೇವತಿ... ಚೆನ್ನಾಗಿ ಆಲೋಚಿಸಿ ಎಡತೊರೆ ಬಂಗಲೆ ನಿಮ್ಮ ಪಾಲಿಗೆ ಮೃತ್ಯು ಪಂಜರವಾಗ ಬಹುದು. ಯಾಕೆ ಅಂದರೆ ಅಲ್ಲಿ.... ಅಲ್ಲಿ ಪ್ರಸನ್ನ ಇರುತ್ತಾನೆ. ಹಿಂದೆ ಒಂದು ಸಲ ಅವನೇ ನಿಮ್ಮ ಪ್ರಾಣ ತೆಗೆಯಲು ಪ್ರಯತ್ನಿಸಿದ್ದರು ಅಂತ ನೀವೇ ಹೇಳಿದ್ರಿ. ಅಂದ ಮೇಲೆ ಅಂತಹ ಆಶ್ರಯಕ್ಕೆ ಹೋಗಬೇಕೆ?"

ರೇವತಿ ಗಂಭೀರವಾಗಿ "ನಾನು ಇಲ್ಲಿಯೇ ಇದ್ದರೆ ಏನನ್ನು ಕಂಡು ಹಿಡಿಯಲು ಸಾಧ್ಯವಿಲ್ಲ. ಅಲ್ಲಿಯೇ ಇದ್ದುಕೊಂಡು ಸತ್ಯ ಕಂಡು ಹಿಡಿಯುತ್ತೇನೆ."

"ಒಂದು ವೇಳೆ ಸಾವು ಬಂದರೆ .....?"

ರೇವತಿ ನಗುತ್ತಾ "ನನ್ನ ಆಯಸ್ಸು ಮುಗಿದರೆ" ಸಾವು ನಾನು ಎಲ್ಲಿಯೇ ಇದ್ದರೂ ಬರುತ್ತದೆ. ನನ್ನನ್ನು ತಡೆಯ ಬೇಡಿ" ಎಂದು ಹೊರಟಳು.

ರೇವತಿ ಹುತ್ತದಂತಹ ಎಡತೊರೆ ಬಂಗಲೆಗೆ ಬಂದಳು ! ಹುತ್ತ ಅಂದ ಮೇಲೆ ಅಲ್ಲಿ ವಿಷ ಸರ್ಪಗಳು ಇರಲೇ ಬೇಕು ! ಅಲ್ಲವೆ?

(ಮುಂದುವರೆಯುತ್ತದೆ)

ದೇಶ ನೋಡಿ ಇಲ್ಲವೇ ಕೋಶ ಓದಿ

ಕೊಡಗು ಸಂಗಾತಿಯ ಆಲೂರು ಸಿದ್ಧಾಪುರ ಕೇಂದ್ರದ ಸಂಚಾಲಕರಾಗಿ/ಏಜೆಂಟರಾಗಿ ಕರಕರನ ಕಿರಣ್ ಆಯ್ಕೆ. ಓದುಗರ ಸಹಕಾರ ನಿರೀಕ್ಷೆ.



ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆಯ ಸಂಚಾಲಕರಾಗಿ, ಏಜೆಂಟರಾಗಿ ಕರಕರನ ಕಿರಣ್‌ರವರನ್ನು ಅವರ ವಿನಂತಿ ಮೇಲೆ ಆಯ್ಕೆ ಮಾಡಲಾಗಿದೆ. ಆಲೂರು ಸಿದ್ಧಾಪುರ, ಕಂತೆ ಬಸವನ ಹಳ್ಳಿ, ಹಿತ್ಲು ಗದ್ದೆ, ಚಿಕ್ಕ ಕಣಗಾಲು, ದೊಡ್ಡ ಕಣಗಾಲು, ಗೋಣಿ ಮಾರೂರು, ಬಾಣಾವಾರ, ದೊಡ್ಡ ಹಳ್ಳಿ, ಮಾಲಂಬಿ, ಹುಲಿಗೆರೆ, ಸುಳುಗೋಡು, ಗ್ರಾಮಗಳಿಗೆ ನೀಮಿತವಾಗಿ ವರದಿ, ಕಲೆಕ್ಷನ್, ಜಾಹೀರಾತು ಇತ್ಯಾದಿಯಾಗಿ ಕೆಲಸ ನಿರ್ವಹಿಸಲು ಅನುವು ನೀಡಲಾಗಿದೆ. ಸಹೃದಯ ಓದುಗರು ಸಹಕರಿಸುವಂತೆ ಕೋರಿಕೆ.

ಸಂಪಾದಕಿ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.)

ಒಂದನೇ 'ಸಿ' ಮುಖ್ಯ ರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು - 560 032
ರಿಜಿಸ್ಟರ್ಡ್ ನಂ. 265/69-70 ✆ : 3433014

ವಧುವರರ ಮುಖಾಮುಖಿ ಸಮಾವೇಶ (Matrimonial Meet)

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಬಾಂಧವರಿಗೊಂದು ಸುವರ್ಣಾವಕಾಶ

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.), ಮೊದಲನೇ 'ಸಿ' ಮುಖ್ಯ ರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು - 560 032, ಇವರು ಗೌಡ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ವಿನೂತನ ರೀತಿಯ ವಧು-ವರರ ಮುಖಾಮುಖಿ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾರೆ.

ಅರ್ಹ ಬಾಂಧವರು ಇದರ ಲಾಭವನ್ನು ಪಡೆದುಕೊಳ್ಳಬೇಕಾಗಿ ವಿನಂತಿ. ಇಚ್ಛೆಯುಳ್ಳವರು ತಾರೀಖು 29-03-2000 ದೊಳಗೆ ಗಂಗಾನಗರದಲ್ಲಿರುವ ಗೌಡ ಸಮಾಜ ಕಛೇರಿಯಲ್ಲಿ ನೊಂದಾಯಿಸಿಕೊಳ್ಳತಕ್ಕದ್ದು. ವಧು - ವರರ ಕಡೆಯಿಂದ ಒಟ್ಟು ಇಬ್ಬರು (ವಧು : ವರ ಸೇರಿ) ಭಾಗವಹಿಸಬಹುದು. ಪ್ರತಿ ಕುಟುಂಬವು ರೂ. 100-00 ನ್ನು ಖುದ್ದಾಗಿ ಅಥವಾ ಡಿ. ಡಿ. ಚೆಕ್ಕನ್ನು ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ, ಬೆಂಗಳೂರು ಇವರಿಗೆ ಕಳುಹಿಸಿ ನೊಂದಾಯಿಸಿಕೊಳ್ಳುವುದು. ಇಬ್ಬರಿಗಿಂತ ಹೆಚ್ಚು ಸದಸ್ಯರು ಬರುವುದಾದರೆ ಪ್ರತಿಯೊಬ್ಬರಿಗೆ ರೂ. 50-00ನ್ನು ಕೊಟ್ಟು ನೊಂದಾಯಿಸುವುದು. ಮಕ್ಕಳಿಗೆ ಪ್ರವೇಶ ನಿರಾಕರಿಸಲಾಗಿದೆ.

ನಡೆಯುವ ಸ್ಥಳ ಮತ್ತು ದಿನಾಂಕ :

ಬೆಂಗಳೂರಿನ ಎಂ. ಜಿ. ರಸ್ತೆಯಲ್ಲಿರುವ "ಅಜಂತ ಹೊಟೇಲಿನ ಸ್ವಾತಿ" ಸಭಾಂಗಣ
ದಿನಾಂಕ : **09-04-2000,** ಭಾನುವಾರ ಸಂಜೆ **4-00** ರಿಂದ **7-00**ರವರೆಗೆ

ವಧು : ವರರ ಹೆಸರು, ಮನೆಯ ಹೆಸರು, ತಂದೆ ತಾಯಿಯ ಹೆಸರು, ಹಾಲಿ ವಿಳಾಸ, ಕೆಲಸದ ವಿವರ, ನಕ್ಷತ್ರ, ಗೋತ್ರ, ಸಾಧ್ಯವಾದರೆ ಒಂದು ಫೋಟೋವನ್ನು ತಪ್ಪದೇ ಕಳುಹಿಸಿಕೊಡುವುದು. ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವ್ಯಕ್ತಿಗಳನ್ನು ಸಂಪರ್ಕಿಸುವುದು.

1.	ಡಾ. ಕೆ. ಎಂ. ಬೋಜಪ್ಪ	080 - 3334111
2.	ಶ್ರೀಮಾನ್ ತಮ್ಮಪ್ಪ ಗೌಡ ಪಿ. (ಮ್ಯಾನೇಜರ್)	080 - 3435269 (ಮನೆ) 3433014 (ಆಫೀಸ್)
3.	ಶ್ರೀಮಾನ್ ಎ. ಎಸ್. ಪೊನ್ನಪ್ಪ	080 - 6342822 (ಮನೆ)
4.	ಶ್ರೀಮಾನ್ ಟಿ. ಎಂ. ಕಾವೇರಿಯಪ್ಪ	080 - 5543937 (ಮನೆ)
5.	ಶ್ರೀಮಾನ್ ಪಿ. ಕೆ. ಪೂವಯ್ಯ	080 - 3330454 (ಮನೆ)

ಚೆರಿಯಮನೆ ಎಸ್. ಬೆಳ್ಯಪ್ಪ




ಸವಿ ನೆನೆಪು

ನೀವು ನಮ್ಮನ್ನಗಲಿ ತಾರೀಖ್ 5-2-2000ಕ್ಕೆ ಒಂದ್ ವರ್ಸ ಕಳ್‌ದರ್ ನಿಮ್ಮ ಆಶೀರ್ವಾದಗ ಸವಿನೆನಪ್ ಮತ್ತೆ ಸವಿನುಡಿಗ ನಮ್ಮಲ್ಲಿ ಹಚ್ಚ ಹಸಿರಾಗಿಟ್ಟು. ನಿಮ್ಮ ಆದರ್ಶ ಗುಣಗ ನಮಗೆಲ್ಲವುಕು ದಾರಿ ದೀಪ ಆಗಿಟ್ಟು. ನಿಮ್ಮ ದಿವ್ಯಾತ್ಮಕ್ಕೆ ಭಗವಂತ ಚಿರಶಾಂತಿನ ಕೊಡ್ಲಿತ ಪ್ರಾರ್ಥಿಸಿವೆ.

ಹೆಂಣ್ : ಚೆರಿಯಮನೆ ನೀಲಮ್ಮ, ಮಂಙ್ಞ : ಸುಗು, ಸೊಸೆ : ಜಯ
ಮಗಕ್ಕ, ಅಳಿಯಂದ್‌ರ್, ಪೊಮ್ಮಕ್ಕ

ಜನನ : 11-10-1921 ಮರಣ : 5-3-1999

...ಜೀರ ಪೊನ್ನಪ್ಪನವರಿಂದ ಪೊನಿಧ್ವನಿ 3ನೇ ಭಾಗ ಕ್ಯಾಸೆಟ್ ಬಿಡುಗಡೆ ಸಮಾರಂಭ





ಕಾವೇರಿನಾಡು ಸಂಸ್ಕೃತಿ ಅರ್ಪಿಸುವ ಪೊನಿಧ್ವನಿಯವರ
ಜನಪದೀಯ ಕೊಡಗು ವಾಲಗ ಕೊಡಗು ಜಾನಪದ ಸಂಗೀತ

ಎ. ಬದಿ

1. ಕಾಪಾಡು ಶ್ರೀ ಸತ್ಯನಾರಾಯಣ
2. ನಾಡು ಕುಣಿತ
3. ಜಾನಪದ ಕುಣಿತ
4. ಯರವಾಟು ಕುಣಿತ
5. ಟುಸ್ಸ್ವ ಕುಣಿತ
6. ಕಾವೇರಿ ನಾಡು ಕುಣಿತ
7. ಕುರುಂದಾ ಕುಣಿತ
8. ಬಾಳ್‌ಪಾಟು ಕುಣಿತ
9. ನಾನು ನೀನು ಜೋಡಿ
10. ಹಾವು ಕುಣಿತ
11. ಹುಲಿ ವೇಷ ಕುಣಿತ
12. ಬಾಳಿ ಬಾಳವ್ವ
13. ಎನ್ನಾಡಿರಕ್ಕಮ್ಮ
14. ಸಿರಾಂಲ ನೀ ಸುರಾಂಗ ನೀ
15. ಭಾಗ್ಯದ ಬಳೆಗಾರ

ಬಿ. ಬದಿ

1. ಓ ಓ ಚೆಲುವಾಂತ ಚೆನ್ನಿಗ
2. ಕಾಂಚೀರೆ ಕಾಂಚೀರೆ
3. ಏಕ್ ದೋ ತೀನ್
4. ಜೇನು ಕುರುಬರ ಮಕ್ಕಳು
5. ಬಾಳಿ ಬದುಕು ಮಗಳೇ
6. ಸುಗ್ಗಿ ಸುವ್ವಾಲೆ ಕುಣಿತ
7. ನನ್ನ ನೀನು ನಿನ್ನ ನಾನು
8. ಕೆರೆ ತುಂಬಾ ಕೇದಿಗೆ
9. ನೀ ಬಂದಾ ಮನೆ
10. ಮಾರದ ಮಂಚೆ ನೋಡಿ
11. ಡೆನ್ನನೋ ಡೆನ್ನಾನೋ
12. ಅಂದದೂರು ಬೆಂಗಳೂರು
13. ಕುಣಿತ

ವಾಲಗ ವಾದನ :
ಹೆಚ್. ಎಲ್. ಬಾಬು
ಮಾರಿಯಮ್ಮ ಬ್ಯಾಂಡ್ ಸೆಟ್ಟು, ಬಲಮುರಿ, ಕೊಡಗು.

ತಯಾರಕರು :
ಅಮ್ಮಾಜೀರ ನೀಲಾ ಪೊನ್ನಪ್ಪ
ಕಾವೇರಿನಾಡು ವಿದ್ಯಾ ಸಂಸ್ಥೆ, ಬೆಂಗಳೂರು

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ✆ **: 0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ✆ : 0821/431792.